ಎಪಿಗ್ರಾಫಿಯ ಕರ್ನಾಟಿಕ
EPIGRAPHIA CARNATICA

ಸಂಪುಟ ಹನ್ನೆರಡು

VOLUME TWELVE

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ

KUVEMPU INSTITUTE OF KANNADA STUDIES
UNIVERSITY OF MYSORE
2003

ಎಪಿಗ್ರಾಫಿಯ ಕರ್ನಾಟಿಕ
Epigraphia Carnatica

ಸಂಪುಟ ಹನ್ನೆರಡು
Volume Twelve

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
Kuvempu Institute of Kannada Studies
University of Mysore
2003

Epigraphia Carnatica, Vol. XII; published by the Kuvempu Institute of Kannada Studies, University of Mysore, Manasagangotri, Mysore - 570 006; Second edition by the Institute 2003, pp cviii+864+viii plates; Graphics : Good Touch Printers, Mysore; Printer : Mysore University Printing Press, Mysore - 570 006.

copies available from :

DIRECTOR
Prasaranga
University of Mysore
Manasagangotri
Mysore - 570 006 (India)

Price : Rs. 750/-

ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕರಣ ಮತ್ತು ಪುನರ್ಮುದ್ರಣ ಯೋಜನೆ

ಸಲಹಾ ಸಮಿತಿ

ಅಧ್ಯಕ್ಷ
ಡಾ. ಸಿ.ಪಿ. ಸಿದ್ಧಾಶ್ರಮ
ನಿರ್ದೇಶಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಸದಸ್ಯರು

1. ನಿರ್ದೇಶಕ, ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಹಂಪಿ.

2. ನಿರ್ದೇಶಕ (ಪುರಾಲೇಖ) ಭಾರತೀಯ ಪುರಾತತ್ತ್ವ ಸರ್ವೇಕ್ಷಣ ಮೈಸೂರು.

3. ಡಾ. ಎಂ.ಎಂ. ಕಲ್ಬುರ್ಗಿ ಕುಲಪತಿ (ನಿವೃತ್ತ) ಧಾರವಾಡ

4. ಡಾ. ಎ.ವಿ. ನರಸಿಂಹಮೂರ್ತಿ ಪ್ರಾಧ್ಯಾಪಕ (ನಿವೃತ್ತ) ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

5. ಡಾ. ಎಚ್.ಆರ್. ರಘುನಾಥ ಭಟ್ಟ ನಿರ್ದೇಶಕ, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

6. ಡಾ. ಎಂ.ವಿ. ಕೃಷ್ಣಪ್ಪ ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಸಂಪಾದಕ ವರ್ಗ

ಗೌರವ ಸಂಪಾದಕ
ಡಾ. ಎ.ವಿ. ನರಸಿಂಹಮೂರ್ತಿ (27-04-2000ದವರೆಗೆ)

ಶಾಸನ ತಜ್ಞ (ಕಾರ್ಯಭಾರಿ)
ಎಚ್.ಎಂ. ನಾಗರಾಜರಾವ್

ಉಪ ಶಾಸನ ತಜ್ಞರು (ಕಾರ್ಯಭಾರಿ)

1. **ಕೆ. ಮೊಹಮ್ಮದ್ ಶರೀಫ್**
2. **ಕೃಷ್ಣವೇಣಿ** (30-11-2000ದವರೆಗೆ)

Epigraphia Carnatica Revision and Reprint Project

Advisory Committee

Chairman
Dr. C.P. Siddhashrama
Director
Kuvempu Institute of Kannada Studies
University of Mysore, Mysore

Members

1. Director
Directorate of Archaeology
and Museums
Government of Karnataka
Hampi

2. Director (Epigraphy)
Archaeological Survey of India
Mysore

3. Dr. M.M. Kalburgi
Vice-Chancellor (Retd.)
Dharwar.

4. Dr. A.V. Narasimha Murthy
Professor (Retd.)
Ancient History and Archaeology
University of Mysore, Mysore

5. Dr. H.R. Raghunatha Bhatta
Director, Kannada Adhyayana Pitha
Karnataka University,Dharwar.

6. Dr. M.V. Krishnappa
Professor, Ancient History and
Archaeology, University of Mysore
Mysore

Editorial Staff

Hon. Editor
Dr. A.V. Narasimha Murthy
(upto 27-04-2000)

Epigraphist (in charge)
H.M. Nagaraja Rao

Asst. Epigraphists (in charge)
1. K. Mohammed Shariff
2. Krishnaveni (upto 30-11-2000)

ಮೊದಲ ಮಾತು

ಕರ್ನಾಟಕದ ಶಾಸನಗಳು ಈ ನೆಲದ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಯ ಬೇರುಗಳು. ಅವು ನಮ್ಮ ಭಾಷೆ ಮತ್ತು ಸಾಹಿತ್ಯಗಳ ಪ್ರಾಚೀನತೆಯ ಬಗೆಗೂ ಹೆಚ್ಚಿನ ಬೆಳಕನ್ನು ಬೀರುತ್ತವೆ. ಕನ್ನಡ ಶಾಸನಗಳು ಸಂಖ್ಯಾದೃಷ್ಟಿಯಿಂದಲೂ ಸತ್ವದ ದೃಷ್ಟಿಯಿಂದಲೂ ಅಪೂರ್ವವೆನಿಸಿವೆ. ಸಂಖ್ಯಾದೃಷ್ಟಿಯಿಂದ ಅದು ತಮಿಳಿಗೆ ಎರಡನೆಯದು; ಆದರೆ ಇತಿಹಾಸ ಸಾರದ ದೃಷ್ಟಿಯಿಂದ ಅದು ಮೊದಲನೆಯದು ಹಾಗೂ ಅಗ್ರಮಾನ್ಯವಾದುದು. ಬೆಂಜಮಿನ್ ಲೂಯಿ ರೈಸ್ ಅವರು 1884ರಿಂದ 1906ರ ಅವಧಿಯಲ್ಲಿ ಹಳೆಯ ಮೈಸೂರು ರಾಜ್ಯ ಮತ್ತು ಕೊಡಗು ಪ್ರದೇಶಗಳಿಂದ 8869 ಶಾಸನಗಳನ್ನು ಸಂಗ್ರಹಿಸಿ ಮತ್ತು ಸಂಪಾದಿಸಿ ಎಪಿಗ್ರಾಫಿಯ ಕರ್ನಾಟಕ ಮಾಲೆಯ ಹನ್ನೆರಡು ಸಂಪುಟಗಳಲ್ಲಿ ಪ್ರಕಟಿಸಿದರು. ಅನಂತರ ಸಾವಿರಾರು ಶಾಸನಗಳು ಬೆಳಕು ಕಂಡಿವೆ - ವಿಶೇಷವಾಗಿ ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಮತ್ತು ಎಪಿಗ್ರಾಫಿಯ ಕರ್ನಾಟಿಕ ಮಾಲೆಯ ಅನುಬಂಧ ಸಂಪುಟಗಳಲ್ಲಿ.

ಎಪಿಗ್ರಾಫಿಯ ಕರ್ನಾಟಕ ಸಂಪುಟಗಳು ವಿದ್ವಾಂಸರ ಮತ್ತು ವಿದ್ಯಾರ್ಥಿಗಳ ಅಧ್ಯಯನ ಹಾಗೂ ಸಂಶೋಧನೆಗಳಿಗೆ ಅನಿವಾರ್ಯವಾದ ಮೂಲ ಆಕರ ಗ್ರಂಥಗಳು. ಆದರೆ ಹಲವು ವರ್ಷಗಳಿಂದ ಅವು ದುರ್ಲಭವಾಗಿದ್ದವು. ಅವುಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಬೇಕಾದ ಆವಶ್ಯಕತೆ ಬಹಳವಾಗಿತ್ತು. ಕರ್ನಾಟಕ ಜೀವನ ಮತ್ತು ಸಂಸ್ಕೃತಿಗಳನ್ನು ಕುರಿತ ಸಂಶೋಧನೆಗಳಿಗಾಗಿ ಇರುವ ಸಮನ್ವಯ ಸಮಿತಿಯ (Co-ordination Committee for Research work on Karnataka Life and Culture) ಸರ್ವಾನುಮತದ ಶಿಫಾರಸಿನ ಮೇರೆಗೆ ಕರ್ನಾಟಕ ಸರ್ಕಾರವು ಈ ಗುರುತರ ಕಾರ್ಯದ ಹೊಣೆಗಾರಿಕೆಯನ್ನು 1970 ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಿಕೊಟ್ಟಿತು. ಆದರೆ ಈ ಕಾರ್ಯ ಆರಂಭವಾಗಲು ಸಾಧ್ಯವಾದುದು 1971ರ ಡಿಸೆಂಬರ್ ಮೂರನೆಯ ವಾರದಲ್ಲಿ, ಸೀಮಿತ ಸಂಖ್ಯೆಯ ಪರಿಣತ ಸಿಬ್ಬಂದಿಯೊಂದಿಗೆ.

ಈ ಕಾರ್ಯದ ಮಾರ್ಗದರ್ಶನಕ್ಕಾಗಿ ಪುರಾತತ್ವ ಇಲಾಖೆಯ ಉನ್ನತ ಅಧಿಕಾರಿಗಳ ಮತ್ತು ಹೆಸರಾಂತ ವಿದ್ವಾಂಸರ ಸಲಹಾ ಸಮಿತಿಯೊಂದು ರೂಪುಗೊಂಡಿತು. ಇದುವರೆಗೆ ಹನ್ನೊಂದು ಬೃಹದ್ಗಾತ್ರದ ಸಂಪುಟಗಳು ಪ್ರಕಟವಾಗಿವೆ. ಇದು ಈ ಮಾಲೆಯ ಹನ್ನೆರಡನೆಯ ಸಂಪುಟ. ಇದರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು, ಕೊಪ್ಪ, ತರೀಕೆರೆ ಮತ್ತು ನರಸಿಂಹರಾಜಪುರ ತಾಲ್ಲೂಕುಗಳಿಗೆ ಸೇರಿದ 459 ಶಾಸನಗಳು ಪ್ರಕಟವಾಗಿವೆ; ಅಲ್ಲದೆ ಚಿಕ್ಕಮಗಳೂರು ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ಈಚೆಗೆ ಪತ್ತೆಯಾದ ಎಂಟು ಶಾಸನಗಳನ್ನೂ ಇಲ್ಲಿ ಸೇರಿಸಲಾಗಿದೆ. ಒಟ್ಟು 467 ಶಾಸನಗಳು ಈ ಸಂಪುಟದಲ್ಲಿವೆ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಎಪಿಗ್ರಾಫಿಯ ಕರ್ನಾಟಕ ಮಾಲೆಯ ಪರಿಷ್ಕೃತ ಸಂಪುಟಗಳು ಪ್ರಕಟವಾಗಲು ಸಾಧ್ಯವಾಗಿರುವುದು ಕರ್ನಾಟಕ ಸರ್ಕಾರದ ಉದಾರ ಆರ್ಥಿಕ ಸಹಾಯದಿಂದ ಹಾಗೂ ಅದರ ಸಂಸ್ಕೃತಿ ಪ್ರೀತಿಯಿಂದ. ಕರ್ನಾಟಕ ಸರ್ಕಾರಕ್ಕೆ, ವಿಶೇಷವಾಗಿ ಶಿಕ್ಷಣ ಮತ್ತು ಕನ್ನಡ ಹಾಗೂ ಸಂಸ್ಕೃತಿ ಇಲಾಖೆಗಳ ಸನ್ಮಾನ್ಯ ಸಚಿವರಿಗೆ ಮತ್ತು ಆ ಇಲಾಖೆಗಳ ಎಲ್ಲ ಅಧಿಕಾರ ವರ್ಗದವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಕರ್ತವ್ಯ. ನಮ್ಮ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಸನ್ಮಾನ್ಯ ಪ್ರೊ. ಎಸ್.ಎನ್. ಹೆಗ್ಡೆಯವರು ಈ ಕೆಲಸದಲ್ಲಿ ವಿಶೇಷ ಆಸಕ್ತಿಯನ್ನು ತೋರುತ್ತ ಬಂದಿದ್ದಾರೆ. ಮಾನ್ಯ ಕುಲಸಚಿವರೂ ಹಣಕಾಸಿನ ಅಧಿಕಾರಿ ಮತ್ತಿತರ ಅಧಿಕಾರಿಗಳೂ ನಮ್ಮ ಕೆಲಸಕ್ಕೆ ಉತ್ತೇಜನ ಮತ್ತು ಬೆಂಬಲಗಳನ್ನು ನೀಡಿದ್ದಾರೆ. ಈ ಸಂಪುಟದ ಅಕ್ಷರ

ಜೋಡಣೆ ಕೆಲಸವನ್ನು ಗುಡ್‌ಟಚ್ ಆಫ್‌ಸೆಟ್ ಪ್ರಿಂಟರ್ಸ್ ಅವರು ಮಾಡಿಕೊಟ್ಟಿದ್ದಾರೆ. ಮುದ್ರಣದ ಕೆಲಸವು ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ನಡೆದಿದೆ. ಅಲ್ಲಿನ ನಿರ್ದೇಶಕರೂ ಸಿಬ್ಬಂದಿಯವರೂ ತುಂಬ ಸಹಕಾರ ನೀಡಿದ್ದಾರೆ. ಇವರೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಈ ಸಂಪುಟದಲ್ಲಿ ಹೊಸ ಶಾಸನಗಳನ್ನು ಸೇರಿಸುವಲ್ಲಿ ಡಾ. ಎನ್. ಹವಳಯ್ಯ, ಡಾ. ಎಂ.ಪಿ. ಮಂಜಪ್ಪಶೆಟ್ಟಿ, ಶ್ರೀ ಹರೀಶ್ ಸಿಂಗಟಗೆರೆ, ಶ್ರೀ ಮೇಕನಗದ್ದೆ ಲಕ್ಷ್ಮಣಗೌಡ, ಶ್ರೀ ವೆಂಕಟಸುಬ್ಬಯ್ಯ, ಶ್ರೀ ರಾಜಪ್ಪ ದಳವಾಯಿ, ಪ್ರೊ. ಶಂಭುಲಿಂಗಪ್ಪ ಮೊದಲಾದವರು ಸಹಕಾರ ನೀಡಿದ್ದಾರೆ. ಎಪಿಗ್ರಾಫಿಯ ಕರ್ನಾಟಿಕ ಪರಿಷ್ಕರಣ ಮತ್ತು ಪುನರ್ಮುದ್ರಣ ಯೋಜನೆಯ ಸಲಹಾ ಸಮಿತಿಯ ಎಲ್ಲ ಸದಸ್ಯರು ಮಾರ್ಗದರ್ಶನ ನೀಡಿ ಸಹಕರಿಸಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಎಪಿಗ್ರಾಫಿಯ ಕರ್ನಾಟಿಕ ವಿಭಾಗದಲ್ಲಿ ಗೌರವ ಸಂಪಾದಕರಾಗಿದ್ದ ಡಾ. ಎ.ವಿ. ನರಸಿಂಹಮೂರ್ತಿ ಅವರಿಗೆ ಹಾಗೂ ನನ್ನ ಸಹೋದ್ಯೋಗಿಗಳಾದ ಶ್ರೀ ಎಚ್.ಎಂ. ನಾಗರಾಜರಾವ್, ಶ್ರೀ ಕೆ. ಮೊಹಮ್ಮದ್ ಶರೀಫ್ ಹಾಗೂ ಈಗ ನಿವೃತ್ತರಾಗಿರುವ ಶ್ರೀಮತಿ ಕೃಷ್ಣವೇಣಿ ಅವರಿಗೆ ಅವರ ಶ್ರಮದ ದುಡಿಮೆಗಾಗಿ ನನ್ನ ಅಭಿನಂದನೆಗಳು.

ರೈಸ್ ಅವರು ಬರೆದಿರುವ ಪೀಠಿಕೆಗಳನ್ನು ಪ್ರತ್ಯೇಕ ಸಂಪುಟವಾಗಿ ಹೊರತರಲು ತೀರ್ಮಾನಿಸಿರುವುದರಿಂದ ಅವನ್ನು ಇಲ್ಲಿ ಸೇರಿಸಿಲ್ಲ. ಈ ಸಂಪುಟದ ಪೀಠಿಕೆಯನ್ನು ಹೊಸದಾಗಿ ಬರೆಯಲಾಗಿದೆ. ಪರಿಷ್ಕೃತ ಸಂಪುಟಗಳನ್ನು ಇನ್ನಷ್ಟು ಉತ್ತಮಪಡಿಸಲು ವಿದ್ವಾಂಸರು ಮತ್ತು ಸಂಶೋಧಕರು ನೀಡುವ ಸಲಹೆ ಮತ್ತು ಅಭಿಪ್ರಾಯಗಳಿಗೆ ಸ್ವಾಗತ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
13.01.2003

ಡಾ. ಸಿ.ಪಿ. ಸಿದ್ಧಾಶ್ರಮ
ನಿರ್ದೇಶಕ

PREFACE

Inscriptions of Karnataka are the roots of ancient history and culture of this soil. They throw more light on the antiquity of our language and literature also. Kannada inscriptions are unique from the point of number and essence. They are only second to Tamil in number; however, they are the first and foremost in their historical essence. Benjamin Lewis Rice collected, edited and published - in twelve volumes of *Epigraphia Carnatica* series - 8869 epigraphs from old Mysore State and Coorg region, between 1884 and 1906. Later on, thousands of inscriptions have come to light - especially in the annual reports of the Mysore Archaeological Department and in the supplementary volumes of *Epigraphia Carnatica* series.

The volumes of *Epigraphia Carnatica* are indispensable primary source books for the study and research work of scholars and students. But they had run out of stock since many years; there was a long-felt need for bringing out their revised edition. As per the unanimous recommendations of the Co-ordination Committee for the Research work on Karnataka Life and Culture, the responsibility of this great work was entrusted to the Institute of Kannada Studies by the Government of Karnataka. However, the work actually, began in the third week of December 1971, with meagre expert staff.

An Advisory Committee comprising of high officials of the Archaeological Department and renowned scholars was formed. Eleven bulky volumes have been published so far. This is the twelfth in the series. This consists of 459 epigraphs from Kadur, Koppa, Tarikere and Narasimharajapura taluks of Chikkamagalur district besides 8 records discovered recently in Chikkamagalur and Mudagere taluks. Totally 467 inscriptions are in this volume.

The revised volumes of *Epigraphia Carnatica* are being published by Kuvempu Institute of Kannada Studies with the generous help of the Government of Karnataka. I sincerely thank the Government of Karnataka, especially the honourable ministers for Education and Kannada and Culture, and also all officers and staff of these departments. Our respectable Vice-Chancellor Prof. S.N. Hegde has been evincing keen interest in this work. Respectable Registrar, Finance

officer, other officers and staff of the University of Mysore have given us all encouragement and support. The graphic work of this volume is done by Good Touch Offset Printers and the printing work is done by the Mysore University Printing Press. The Director and Staff of the press have extended full co-operation. I am grateful to all these.

New inscriptions have been included in this volume with the co-operation of Dr. N. Havalayya, Dr. M.P. Manjappa Shetty, Sri Harish Singatagere, Sri Mekanagadde Lakshmana Gowda, Sri Venkatasubbaiah, Sri Rajappa Dalavayi and Prof. Shambhulingappa. My thanks are due to Dr. A.V. Narasimha Murthy who was the Hon. Editor and to them. I am also indebted to all the members of the Advisory Committee. My congratulations are due to my colleagues of the *Epigraphia Carnatica* Section Sri H.M. Nagaraja Rao, Sri K. Mohammed Shariff and Smt. Krishnaveni (now retired) for their hardwork.

In view of the decision to bring out a separate volume exclusively for the introductions written by Rice, they have not been included herein. An introduction is written afresh. I welcome opinions and suggestions from scholars and researchers to improve the revised volumes.

Kuvempu Institute of Kannada Studies
13.01.2003

Dr. C.P. Siddhashrama
Director

ಪರಿವಿಡಿ

CONTENTS

ಚಿತ್ರಗಳ ಪಟ್ಟಿ

List of Illustrations

ಸಂಕೇತಾಕ್ಷರಗಳು

ಎ.ಕ. = ಎಪಿಗ್ರಾಫಿಯ ಕರ್ನಾಟಿಕ; ಕ = ಕಡೂರು; ಕಇ= ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್; ಚಿಮ = ಚಿಕ್ಕಮಗಳೂರು; ಕೊ = ಕೊಪ್ಪ; ಜೆಇಎಸ್‌ಇ = ಜರ್ನಲ್ ಆಫ್ ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ; ತ = ತರೀಕೆರೆ; ನಪು = ನರಸಿಂಹರಾಜಪುರ; ಮಾಕ = ಮಾನವಿಕ ಕರ್ನಾಟಕ; ಮೂಡ = ಮೂಡಗೆರೆ; ರಿ (ಎಂ.ಎ.ಆರ್.) = ಮೈಸೂರ್ ಆರ್ಕಿಯಾಲಜಿಕಲ್ ರಿಪೋರ್ಟ್; ಸಿಕೆಐ = ಕಾರ್ಪಸ್ ಆಫ್ ಕದಂಬ ಇನ್‌ಸ್ಕ್ರಿಪ್ಷನ್ಸ್

ABBREVIATIONS

EC= Epigraphia Carnatica; *Kd*= Kadur; *KI*= Karnatak Inscriptions; *Cm* = *Chikkamagalur; Ko* = Koppa; *JESI* = Journal of Epigraphical Society of India; *Tk* = Tarikere; *Np* = Narasimharajapura; *Mk* = Mānavika Karnāṭika; *Mg* = Mūḍagere; *R* (*MAR*) = Mysore Archaeological Report; *CKI* = Corpus of Kadamba Inscriptions.

ಶಾಸನಗಳು ದೊರೆತಿರುವ ಗ್ರಾಮಗಳ ಅಕಾರಾದಿ

ಕಡೂರು ತಾಲ್ಲೂಕು (ಕ)

	ಊರು	ಶಾಸನ ಸಂಖ್ಯೆ
1.	ಅಣಂಗೆರೆ	1-3
2.	ಅಯ್ಯನಕೆರೆ	4
3.	ಅರಕೆರೆ	5
4.	ಅರಂತೊಳೆ	6, 7
5.	ಆಲದಹಳ್ಳಿ	8
6.	ಆಸಂದಿ	9-24, 253, 254
7.	ಉಳ್ಳಿನಾಗೂರು	25, 26
8.	ಕಂಚಿಗಲ್ಲು	27-33
9.	ಕಡೂರು	34, 262, 263
10.	ಕಡೂರುಹಳ್ಳಿ	35
11.	ಕನಕನಕೆರೆ	36, 37
12.	ಕಬ್ಬಳ್ಳಿ	38-43
13.	ಕಂಪಸಾಗರ	44
14.	ಕಾಮೇನಹಳ್ಳಿ	45, 46
15.	ಕುಂಕಾನಾಡು	47
16.	ಕುಂದೂರು	261
17.	ಕುಪ್ಪೆಹಾಳು	48-51
18.	ಕೆಂಕೆರೆ	52, 53
19.	ಕೆರೆಸಂತೆ	54-72, 259, 260
20.	ಕೇದಗಿಕೆರೆ	73, 74
21.	ಕೊತ್ತಗೆರೆ	75
22.	ಗರ್ಜೆ	76
23.	ಗುಮ್ಮನಹಳ್ಳಿ	77-90
24.	ಚಟ್ಟನಹಳ್ಳಿ	91
25.	ಚಿಕ್ಕ ಇಂಗಳ	92
26.	ಚಿಕ್ಕ ದೇವನೂರು	93
27.	ಚಿಕ್ಕನಾಯಕನಹಳ್ಳಿ	94
28.	ಚಿಕ್ಕ ಪಟ್ಟಣಗೆರೆ	95-97
29.	ಚಿಕ್ಕ ಬಳ್ಳೇಕೆರೆ	98
30.	ಚಿಕ್ಕರೆಹಳ್ಳಿ	99, 100
31.	ಜಮ್ಮಾಪುರ (ಬೇಚಿರಾಕ್)	101
32.	ತಂಗಲೆ	102
33.	ತುರುವನಹಳ್ಳಿ	103-05
34.	ದೇವನೂರು	106-10
35.	ದೊಂಬರಹಳ್ಳಿ	111, 112
36.	ನಾಗರಹಾಳು	113, 114
37.	ನಿಡಗಟ್ಟ	115, 116
38.	ನಿಡುವಳ್ಳಿ	117, 118
39.	ಪಟ್ಟಣಗೆರೆ	119-21
40.	ಪುರ	122-24
41.	ಬಂಟಗನಹಳ್ಳಿ	125
42.	ಬಾಣೂರು ಅಗ್ರಹಾರ	126-31
43.	ಬಿಟ್ಟೇನಹಳ್ಳಿ	132, 133
44.	ಬಿದರೆ (1)	134-37
45.	ಬಿದರೆ (2)	138,139
46.	ಬೀರೂರು	140, 141
47.	ಬೆಲಗೂರು	142
48.	ಬೆಲಟಿಕೆರೆ	143-46
49.	ಬೆಳವಾಳ	147, 148
50.	ಬೊಮ್ಮೇನಹಳ್ಳಿ	149
51.	ಬ್ರಹ್ಮಸಮುದ್ರ	150-69
52.	ಮಚ್ಚೇರಿ	170-75, 252, 264
53.	ಮತ್ತಿಹಳ್ಳಿ	176, 177
54.	ಮತ್ತೂರು	178
55.	ಮರುವಂಜಿ	179
56.	ಮಲಿದೇವಿಹಳ್ಳಿ	180
57.	ಮಲ್ಲೇಶ್ವರ	181-84
58.	ಮಾದಾಪುರ	185
59.	ಮುಗಳಿಕಟ್ಟೆ	186
60.	ಯಗಟಿ	187-90
61.	ಯಮ್ಮೆದೊಡ್ಡಿ	191
62.	ಯಳ್ಳಂಬಳಸೆ	192-94, 255-58

ಊರು	ಶಾಸನ ಸಂಖ್ಯೆ	ಊರು	ಶಾಸನ ಸಂಖ್ಯೆ
63. ರಾಮಗೊಂದಿ	195	72. ಹಿರಿಯಂಗಳ	229-33
64. ರಾಮಪುರ	196	73. ಹಿರಿಯೂರು	234-38
65. ಲಿಂಗದಹಳ್ಳಿ	197	74. ಹಿರೇ ನಲ್ಲೂರು	239-42
66. ವಕ್ಕಲಗೆರೆ	198-208	75. ಹಿರೇ ಬಾಸೂರು	243
67. ಸಕ್ಕರೆಪಟ್ಟಣ	209-15	76. ಹುಲಿಕೆರೆ	244, 245
68. ಸಣ್ಣೇನಹಳ್ಳಿ	216	77. ಹುಲ್ಲೇನಹಳ್ಳಿ	246
69. ಸಿಂಗಟಗೆರೆ	217-19	78. ಹೇರಳಗಟ್ಟ	247-49
70. ಸಿಧಗಾನಹಳ್ಳಿ	220	79. ಹೊನ್ನೆಯನಹಳ್ಳಿ (ಬೇಚಿರಾಕ್)	250
71. ಸೋಮನಹಳ್ಳಿ	221-28	80. ಹೊಸಹಳ್ಳಿ	251

ಕೊಪ್ಪ ತಾಲ್ಲೂಕು (ಕೊ)

1. ಆರಡಿಕೊಪ್ಪ	41	14. ಬಗ್ಗುಂಜಿ	14
2. ಎಡದಲೆ	1	15. ಬಾವಣಿಗೆ	15
3. ಕಲ್ಲಬಸ್ತಿ	2	16. ಬೊಮ್ಮಲಾಪುರ	16-21
4. ಕುಂದ್ಕೆರೆ	42	17. ಭಂಡಿಗಡಿ	22-27
5. ಕುಡುನೆಲ್ಲಿ	3, 48	18. ಭಾನವಳ್ಳಿ ಅಗ್ರಹಾರ	47
6. ಕೊಡತಾಳು	4	19. ಮತ್ತಿವಾನೆ	28
7. ಕೊಪ್ಪ	5, 6	20. ಸಿಡಿಮನೆ	29
8. ಜಂಬಿಟ್ಟಿಗೆ	43	21. ಸೆಟ್ಲುಗೊಡಗೆ	30
9. ನರಸೀಪುರ	7	22. ಹರಿಹರಪುರ	31-35
10. ನರಸಿಂಹಪುರ	8-10	23. ಹರಿಹರಮನೆ	36
11. ನಾಗಲಾಪುರ	46	24. ಹಾಲಮುತ್ತೂರು	37,38
12. ನಾರವೆ	11-13	25. ಹೆದ್ಸೆ	39
13. ಪೇಟೆಗದ್ದೆ	44,45	26. ಹೊಸಕೊಪ್ಪ	40

ತರೀಕೆರೆ ತಾಲ್ಲೂಕು (ತ)

1. ಅಜ್ಜಂಪುರ	1,2	8. ಎಲೂಗೆರೆ	20
2. ಅತ್ತಿಮೊಗ್ಗೆ	3	9. ಕಲ್ಲತ್ತಿಪುರ	21-30
3. ಅನುವನಹಳ್ಳಿ	4,5	10. ಕಾರಣಗಟ್ಟ	31
4. ಅಮೃತಾಪುರ	6-16	11. ಕಾರೆಹಳ್ಳಿ	32
5. ಇಟ್ಟಿಗೆ	17	12. ಕುಂಟನಮಡುವು	33-38
6. ಇಂದಾವಾರ	18	13. ಕೂಡ್ಲೂರು	39, 40
7. ಉಡುವ	19	14. ಗಡಿಹಳ್ಳಿ	41-46

ಊರು	ಶಾಸನ ಸಂಖ್ಯೆ	ಊರು	ಶಾಸನ ಸಂಖ್ಯೆ
15. ಗೋವಿಂದಪುರ	101, 102	27. ಮುಗಳಿ	77
16. ಚಿಕ್ಕ ಕಾತೂರು	47-49	28. ಮುದಿಗೆರೆ	78-84
17. ತರೀಕೆರೆ	50-53	29. ಲಿಂಗದಹಳ್ಳಿ	85
18. ದುಗ್ಗಲಾಪುರ	54	30. ಶಿಂಗಾಪುರ	86
19. ದ್ಯಾಂಪುರ	55,56	31. ಶಿವನೆ	87
20. ನಂದಿ	57-59	32. ಸಮತಳ	88
21. ನೇರ್ಲಕೆರೆ	60, 61	33. ಸೋಮಪುರ	89-92
22. ಬಂಕನಕಟ್ಟೆ	62-65	34. ಹಲಸೂರು	93, 94
23. ಬಗ್ಗವಳ್ಳಿ	66-71	35. ಹಳೆಯೂರು	95-98
24. ಬುಕ್ಕಾಂಬುಧಿ	72-75	36. ಹಾದಿಕೆರೆ	99
25. ಮಾಚೇನಹಳ್ಳಿ	103	37. ಹುಲಿತಿಮ್ಮಾಪುರ	100
26. ಮಾಳೇನಹಳ್ಳಿ	76		

ನರಸಿಂಹರಾಜಪುರ ತಾಲ್ಲೂಕು (ನಪು)

1. ಆಡುವಳ್ಳಿ	1-3	6. ಬಾಳೇಹೊನ್ನೂರು	32-34, 43, 44
2. ಕೊಳಲೆ	4	7. ಮೆಣಸೂರು	35
3. ನರಸಿಂಹರಾಜಪುರ	5-14, 42	8. ಲಿಂಗಾಪುರ	36
4. ನಾಗಲಾಪುರ	15, 16	9. ಶಿಂಸೆ	37-39
5. ಬಾಳೇಹಳ್ಳಿ	17-31	10. ಸಾಲೂರು	40, 41

ಅನುಬಂಧ

ಚಿಕ್ಕಮಗಳೂರು ತಾಲ್ಲೂಕು (ಚಿಮ)

1. ಅಂಬಳೆ	223	3. ಮೆಣಸಿನ ಮಲ್ಲೇದೇವರಹಳ್ಳಿ	221, 222
2. ಮುತ್ತಿನಪುರ	224		

ಮೂಡಗೆರೆ ತಾಲ್ಲೂಕು (ಮೂಡ)

1. ಊರುಬಗೆ	115, 116	3. ಮೂಡಸಸಿ	118
2. ಬೈರಾಪುರ	117		

Index of Villages where Inscriptions were found

KADUR TALUK (Kd.)

KOPPA TALUK (Kp.)

TARĪKERE TALUK (Tk.)

NARASIMHARAJAPURA TALUK (Np)

APPENDIX
CHIKKAMAGALUR TALUK (Cm)

MUDAGERE TALUK (Mg)

ವಂಶಾನುಕ್ರಮದಲ್ಲಿ ಶಾಸನಗಳ ಸೂಚಿ

DYNASTIC INDEX OF INSCRIPTIONS

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	ಕದಂಬ (KADAMBA)	
ವಿಷ್ಣುವರ್ಮ (Vishṇuvarma)	ಸು 5ನೆಯ ಶತಮಾನ	ಕ (Kd) 141
	c. 5th century	ತ (Tk) 83
ಸಿಂಹವರ್ಮ (Simhavarma)	ಸು 5-6ನೆಯ ಶತಮಾನ	ತ (Tk) 84
	c. 5-6th century	
	ಉತ್ತರ ಕದಂಬ (LATER KADAMBA)	
ಚಿಣ್ಣಮರಸ II (Chiṇṇamarasa II)	11 ನೆಯ ಶತಮಾನ	
	11th century	ಕ (Kd) 250
	ಗಂಗ (GANGA)	
ಅರಸಾಣೆ (Arasāṇe)	ಸು 7-8ನೆಯ ಶತಮಾನ	
	c. 7-8th century	ಕ (Kd) 23
ಶ್ರೀಪುರುಷ (Śrīpurusha)	8ನೆಯ ಶತಮಾನ	ಕ (Kd) 18;
	8th century	ನಪು (Np) 5
ಶಿವಮಾರ (Śivamāra)	795	ಕ (Kd) 24
	8ನೆಯ ಶತಮಾನ	ನಪು (Np) 6,7
	8th century	
ದುಗ್ಗಮಾರ (Duggamāra) (?)	.....".....	
	.....".....	ತ (Tk) 27, 28
ನೀತಿಮಾರ್ಗ (Nītimārga)	899	ಕ (Kd) 243
ಕಲಿಗಂಗ (Kaliganga)	10ನೆಯ ಶತಮಾನ	
	10th century	ಕ (Kd) 238
. . .	971	ಕ (Kd) 34
ಮಾರಸಿಂಹ (Mārasimha) II	972	ಕ (Kd) 20
ಲೋಕವಿದ್ಯಾಧರ (Lōkavidyādhara)	10ನೆಯ ಶತಮಾನ	
	10th century	ಕ (Kd) 181, 182

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	ಆಸಂದಿಯ ಗಂಗ (GANGA OF ASANDI)	
ವೈಜರಸ (Vaijarasa)	1091	ತ (Tk) 4
ನಾಡರಸ (Nāḍarasa)	1104	ತ (Tk) 62
ಬಮ್ಮರಸ (Bammarasa)	1129	ತ (Tk) 72
	1167	ತ (Tk) 3
	1172	ತ (Tk) 80
	11-12ನೆಯ ಶತಮಾನ 11-12th century	ಕ (Kd) 19
ನಾರಸಿಂಹ (Nārasimha)	1191	ಕ (Kd) 16, 17
	1192	ಕ (Kd) 15
	1202	ಕ (Kd) 21
	. . .	ತ (Tk) 1
	ರಾಷ್ಟ್ರಕೂಟ (RASHTRAKUTA)	
ಗೋವಿಂದ (Gōvinda)	ಸು. 8-9ನೆಯ ಶತಮಾನ c. 8-9th century	ತ (Tk) 82
	ಸಾಂತರ (SANTARA)	
ಜಯಸಂಗ್ರಹ (Jayasaṅgraha)	7ನೆಯ ಶತಮಾನ 7th century	ತ (Tk) 103
ಮಾರಯ್ಯದೇವ (Mārayyadēva)	1085	ಕೊ (Kp) 14
ಮಾರ (Māra)	11ನೆಯ ಶತಮಾನ 11th century	ನಪು (Np) 32-34
. . .	.....".....	
	.....".....	ತ (Tk) 24
ವೀರಶಾಂತರದೇವ (Vīraśāntaradēva)	1157	ನಪು (Np) 37
ಮರುದೇವ (Mārudēva)	1162	ನಪು (Np) 3
ಬಲ್ಲಾಳದೇವ (Ballāḷadēva) (?)	12ನೆಯ ಶತಮಾನ 12th century	ನಪು (Np) 4

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	ಚಾಲುಕ್ಯ (CHALUKYA)	
ವಿಕ್ರಮಾದಿತ್ಯ (Vikramāditya)	1085	ಕೊ (Kp) 46
	1089	ಕ (Kd) 76
	11ನೆಯ ಶತಮಾನ 11th century	ತ (Tk) 29
ಭೂವಲ್ಲಭ ಪೆರ್ಮಾಡಿ (Bhūvallabha Permāḍi)	1100-01	ಕ (Kd) 25
	1136	ಕ (Kd) 198
ತ್ರಿಭುವನಮಲ್ಲ (Tribhuvanamalla)	1138	ಕ (Kd) 197
	1162	ಕ (Kd) 134
ವಿಕ್ರಮಾದಿತ್ಯ (Vikramāditya)	1172	ತ (Tk) 80
ಭೂವಲ್ಲಭ (Bhūvallabha)	1187-88	ಕ (Kd) 200
	1191	ಕ (Kd) 201
	12-13ನೆಯ ಶತಮಾನ 12-13th century	ಕ (Kd) 101
	1202	ಕ (Kd) 199
	ಹೊಯ್ಸಳ (HOYSALA)	
ವಿನಯಾದಿತ್ಯ (Vinayāditya)	1063	ಕ (Kd) 140
	1089	ಕ (Kd) 76, 192
	1091	ತ (Tk) 4
	1093	ತ (Tk) 41
	1095	ಕ (Kd) 73
	1097	ಕ (Kd) 35; ತ (Tk) 37
	11ನೆಯ ಶತಮಾನ 11th century	ಕ (Kd) 28
ಎರೆಯಂಗ (Ereyaṅga)	....".....	
	.....".....	ಕ (Kd) 149
ಬಲ್ಲಾಳ (Ballāḷa) I	1104	ತ (Tk) 62
	1108	ಕ (Kd) 127

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
ವಿಷ್ಣುವರ್ಧನ (Vishṇuvardhana)	1100-01	ಕ (Kd) 25
	1113	ಕ (Kd) 188
	1124	ಕ (Kd) 1
	1129	ತ (Tk) 72
	1133	ಮೂಡ (Mg) 118
	1136	ಕ (Kd) 198, 259
	1138	ಕ (Kd) 197
	1139	ಕ (Kd) 38, 143
	1140	ಕ (Kd) 116
	1141	ಕ (Kd) 67, 221, 223
	1143	ಕ (Kd) 70
	1148	ಕ (Kd) 178
	12ನೆಯ ಶತಮಾನ 12th century	ಕ (Kd) 103, 113, 170
ನರಸಿಂಹ (Narasimha) I	1148	ತ (Tk) 20
	1153	ಕ (Kd) 186
	1156	ಕ (Kd) 6
	1158	ತ (Tk) 88, 96
	1158-59	ಕ (Kd) 4
	1159	ಕ (Kd) 43
	1162	ಕ (Kd) 134
	1164	ಕ (Kd) 233; ತ (Tk) 64
	1165-66	ತ (Tk) 47
	1167	ತ (Tk) 3
	1169	ಕ (Kd) 95, 150; ತ (Tk) 95
	1170	ಕ (Kd) 179
	1171	ಕ (Kd) 147
	1172	ಕ (Kd) 167
	12ನೆಯ ಶತಮಾನ 12th century	ತ (Tk) 2, 99

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
ಬಲ್ಲಾಳ (Ballāḷa) II	1172	ತ (Tk) 80
	1173	ಕ (Kd) 48, 234, 237
	1174	ಕ (Kd) 130
	1175	ಕ (Kd) 75, 151, 152
	1178	ಕ (Kd) 57
	1179	ತ (Tk) 31
	1180	ತ (Tk) 97
	1181	ಕ (Kd) 66
	1184	ತ (Tk) 18, 51, 54
	1187-88	ಕ (Kd) 200
	1189-90	ಕ (Kd) 148
	1191	ಕ (Kd) 17, 201
	1194	ಕ (Kd) 91;
		ತ (Tk) 17
	1195-96	ಕ (Kd) 53
	1196	ಕ (Kd) 144, 261
	1198	ತ (Tk) 12
	12ನೆಯ ಶತಮಾನ	
	12th century	ತ (Tk) 44
	12-13ನೆಯ ಶತಮಾನ	ಕ (Kd) 16, 101;
	12-13th century	ತ (Tk) 46
	. . .	ಕ (Kd) 131
	1202	ಕ (Kd) 21, 199
	1203	ಕ (Kd) 176
	1205	ತ (Tk) 9, 10
	1206	ಕ (Kd) 9, 14, 217
	1208	ಕ (Kd) 132, 241;
		ತ (Tk) 74
	1209-10	ತ (Tk) 79
	1210-11	ಕ (Kd) 9, 218
	1211	ಕ (Kd) 29, 133
	1216	ಕ (Kd) 27, 28
	1218	ಕ (Kd) 185
ನರಸಿಂಹ (Narasimha) II	1221	ಕ (Kd) 252

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	1223	ಕ (Kd) 54, 145
	1224	ಕ (Kd) 64
	1227	ಕ (Kd) 94
	1228	ತ (Tk) 92
	1230	ತ (Tk) 34, 78
	1233	ತ (Tk) 36
	13ನೆಯ ಶತಮಾನ 13th century	ಕ (Kd) 254
ಸೋಮೇಶ್ವರ (Sōmēśvara)	1237	ಕ (Kd) 119
	1239	ತ (Tk) 68
	1240	ಕ (Kd) 71
	1243	ಕ (Kd) 120
	1252	ಕ (Kd) 30, 72
	1253	ಕ (Kd) 106
	13ನೆಯ ಶತಮಾನ 13th century	ಕ (Kd) 39, 40, 146, 244, 245; ತ (Tk) 1
ನರಸಿಂಹ (Narasimha) III	1259	ಕ (Kd) 61
	1261	ತ (Tk) 89
	1262	ತ (Tk) 40
	1267	ಕ (Kd) 96
	1272	ಕ (Kd) 247, 248
	1275	ಕ (Kd) 74, 177
	1278	ತ (Tk) 45
	1279	ತ (Tk) 50
	1281	ಕ (Kd) 55
	1283	ಕ (Kd) 253
ಬಲ್ಲಾಳ (Ballāḷa) III	1291	ಕ (Kd) 126
	1296	ತ (Tk) 69
	1325-26	ತ (Tk) 86
	1327	ಕೊ (Kp) 8, 10
	1339	ಕೊ (Kp) 9
	1342	ಕ (Kd) 137

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	12ನೆಯ ಶತಮಾನ 12th century	ತ (Tk) 44, 48
ಬಲ್ಲಾಳ (Ballāḷa)	12-13ನೆಯ ಶತಮಾನ 12-13th century	ಕ (Kd) 180
ನರಸಿಂಹ (Narasimha)	.....".....	ಕ (Kd) 58;
	.....".....	ತ (Tk) 42, 66
	13ನೆಯ ಶತಮಾನ 13th century	ಕ (Kd) 10
	. . .	ತ (Tk) 56
	ವಿಜಯನಗರ (VIJAYANAGARA)	
ಬುಕ್ಕ (Bukka) I	1369	ನಪು (Np) 18, 20
	14ನೆಯ ಶತಮಾನ	ಕ (Kd) 41, 212;
	14th century	ನಪು (Np) 21
ಹರಿಹರ (Harihara) II	1377	ನಪು (Np) 15
	1378	ಕೊ (Kp) 25
	1381	ಕೊ (Kp) 26, 42
	1386	ಕೊ (Kp) 29
	1392	ಕೊ (Kp) 31
	14ನೆಯ ಶತಮಾನ	ಕ (Kd) 41, 212;
	14th century	ಕೊ (Kp) 37
	1403	ಕೊ (Kp) 17, 18
ಬುಕ್ಕ (Bukka) II	1404	ಕೊ (Kp) 38
ದೇವರಾಯ (Dēvarāya) I	1407	ಕೊ (Kp) 47
	1408	ಕೊ (Kp) 36
	1409	ಕ (Kd) 175
	1410	ಕೊ (Kp) 30
	1413	ನಪು (Np) 22
	1417	ಕೊ (Kp) 15
	1418	ಕೊ (Kp) 34
	1427	ಕೊ (Kp) 22
ಮಲ್ಲಿಕಾರ್ಜುನ (Mallikārjuna)	1448	ಕೊ (Kp) 27

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
ದೇವರಾಯ (Dēvarāya) II (?)	1451	ಕೊ (Kp) 1
ಮಲ್ಲಿಕಾರ್ಜುನ (Mallikārjuna)	1452	ಕೊ (Kp) 33
ಹರಿಹರ (Harihara)	14-15ನೆಯ ಶತಮಾನ 14-15th century	ತ (Tk) 5
ನರಸಿಂಹ (Narasimha) II	1504	ತ (Tk) 65
ಕೃಷ್ಣದೇವರಾಯ (Kṛishṇadēvarāya)	1518	ಕ (Kd) 189
	1526	ಕ (Kd) 123
	1527	ಕ (Kd) 190
ಅಚ್ಯುತರಾಯ (Achyutarāya)	1530	ಕ (Kd) 142
	1532	ಕ (Kd) 249
	1542	ಕ (Kd) 22, 98
ಸದಾಶಿವರಾಯ (Sadāśivarāya)	1545	ತ (Tk) 48
	1546	ಕ (Kd) 230
	1547	ತ (Tk) 6
	1550	ಕ (Kd) 65
	1553	ನಪು (Np) 36
	1554-55	ಕ (Kd) 246; ತ (Tk) 87
	1555	ತ (Tk) 75
	1556	ಕ (Kd) 26
	1569	ಕ (Kd) 187
ಶ್ರೀರಂಗರಾಯ (Śrīraṅgarāya)	1573	ಕೊ (Kp) 32
	1575	ಕೊ (Kp) 4
	16ನೆಯ ಶತಮಾನ 16th century	ಕ (Kd) 107
ವೆಂಕಟಪತಿರಾಯ (Veṅkaṭapatirāya)	1649	ತ (Tk) 52

ಕಳಸ-ಕಾರ್ಕಳ (KALASA-KARKALA)

ವೀರ ಭೈರರಸ (Vīra Bhairarasa)	1530	ಕೊ (Kp) 2
	1584	ಕೊ (Kp) 45
	1588	ಕೊ (Kp) 11
	1598	ಕೊ (Kp) 6

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	ಕೆಳದಿ (KELADI)	
ವೆಂಕಟಪ್ಪನಾಯಕ (Veṅkaṭappa-nāyaka)	1627	ನಪು (Np) 41
ಶಿವಪ್ಪನಾಯಕ (Śivappa-nāyaka)	1652	ಕ (Kd) 264
ಚೆನ್ನಮ್ಮಾಜಿ (Chennammāji)	1690	ಕೊ (Kp) 48
ಸೋಮಶೇಖರನಾಯಕ (Sōmaśēkhara-nāyaka)	1674	ನಪು (Np) 28
	17ನೆಯ ಶತಮಾನ 17th century	ನಪು (Np) 30
ಬಸಪ್ಪನಾಯಕ (Basappa-nāyaka)	1708	ನಪು (Np) 25
	1709	ನಪು (Np) 40
ಸೋಮಶೇಖರನಾಯಕ (Sōmaśēkhara-nāyaka)	1719	ಕೊ (Kp) 14
	1727	ನಪು (Np) 27
	ಮೈಸೂರು (MYSORE)	
ಕೃಷ್ಣರಾಜವೊಡೆಯ (Kṛishṇarāja-voḍeya) III	1809	ಕೊ (Kp) 39
	1812	ಕ (Kd) 209, 210
	1821	ಕ (Kd) 263
	1828	ನಪು (Np) 44
	1830	ನಪು (Np) 43
	1831	ಕ (Kd) 262
	1846	ನಪು (Np) 26
	ಸಂತೆಬೆನ್ನೂರು (SANTEBENNURU)	
ಸೀತಾರಾಮಪ್ಪನಾಯಕ (Sītārāmappa-nāyaka)	1614	ತ (Tk) 100
ಚಿಕ್ಕಣನಾಯಕ (Chikkaṇa-nāyaka)	17ನೆಯ ಶತಮಾನ 17th century	ಕ (Kd) 8
ಸರ್ಜಾ ಹನುಮಪ್ಪನಾಯಕ (Sarjā Hanumappa-nāyaka)	1649	ತ (Tk) 52, 102
ಸೀತಾರಾಮಪ್ಪನಾಯಕ (Sītārāmappa-nāyaka)	1681	ತ (Tk) 53, 101

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	ಬೇಲೂರು (BELURU)	
ಕೃಷ್ಣಪ್ಪನಾಯಕ (Krishṇappa-nāyaka)	1555	ತ (Tk) 75
	1585	ತ (Tk) 59
	ದಾನಿವಾಸ (DANIVASA)	
ಲಿಂಗಣನಾಯಕ (Liṅgaṇa-nāyaka)	1553	ನಪು (Np) 36
ಚೆನ್ನವೀರವೊಡೆಯ (Chennavīra-voḍeya)	1569	ನಪು (Np) 8, 19
	1584	ನಪು (Np) 12, 14
	1585	ನಪು (Np) 9, 11, 13
	1587	ನಪು (Np) 10
	ದುರ್ಗ (DURGA)	
. . .	1513	ಕ (Kd) 138
ತಿಮ್ಮಪ್ಪನಾಯಕ (Timmappa-nāyaka)	1599	ಕ (Kd) 122
	ವಿವಿಧ (MISCELLANEOUS)	
	8ನೆಯ ಶತಮಾನ 8th century	ಕ (Kd) 125
	855-56	ಕ (Kd) 92
	889-90	ತ (Tk) 23
	961-62	ಕ (Kd) 220
	9-10ನೆಯ ಶತಮಾನ 9-10th century	ಕ (Kd) 5, 36, 94, 238; ತ (Tk) 23
	10ನೆಯ ಶತಮಾನ 10th century	ಕ (Kd) 181, 182; ತ (Tk) 32
	1082	ಕ (Kd) 231
	10-11ನೆಯ ಶತಮಾನ 10-11th century	ಕ (Kd) 37, 99, 255
	11ನೆಯ ಶತಮಾನ 11th century	ಕ (Kd) 229

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	1116	ಕ (Kd) 104
	1124	ತ (Tk) 163
	1133	ಕ (Kd) 52, 105
	1173	ಕ (Kd) 237
	1191-92	ಕ (Kd) 15
	1193	ತ (Tk) 55
	1197	ಕ (Kd) 47
	11-12ನೆಯ ಶತಮಾನ 11-12th century	ತ (Tk) 39
	12ನೆಯ ಶತಮಾನ 12th century	ಕ (Kd) 171, 183, 208; ತ (Tk) 8, 35
	1205	ತ (Tk) 10
	1208	ತ (Tk) 38
	1214	ಕ (Kd) 115, 225; ತ (Tk) 13, 14
	1215	ಕ (Kd) 239
	1216	ಕ (Kd) 235
	1216-17	ಕ (Kd) 11
	1217	ಕ (Kd) 154
	1219	ಕ (Kd) 157
	1220	ಕ (Kd) 224
	1221	ಕ (Kd) 226
	1222	ಕ (Kd) 228, 260
	1225	ಕ (Kd) 165; ತ (Tk) 81
	1226	ಕ (Kd) 68, 164
	1228	ತ (Tk) 98
	1230	ಕ (Kd) 160
	1232	ಕ (Kd) 153
	1234	ಕ (Kd) 156
	1235	ಕ (Kd) 12, 172
	1237	ಕ (Kd) 135, 155, 162

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	1240	ಕ (Kd) 158
	1242	ಕ (Kd) 242
	1247	ಕ (Kd) 240
	1252	ನಪು (Np) 38
	1255	ಕ (Kd) 32
	1258	ಕ (Kd) 33
	1258-59	ಕ (Kd) 159
	1261	ಕ (Kd) 166
	1265	ತ (Tk) 90
	1269	ತ (Tk) 93
	1272	ಕ (Kd) 247
	1278	ತ (Tk) 90
	1287	ತ (Tk) 15, 16
	1291	ತ (Tk) 85
	1293	ತ (Tk) 33
	1295	ನಪು (Np) 35
	12-13ನೆಯ ಶತಮಾನ 12-13th century	ಕ (Kd) 7, 114, 128
	13ನೆಯ ಶತಮಾನ 13th century	ಕ (Kd) 31, 57, 97
	1302-03	ಕ (Kd) 227
	1305-06	ಕ (Kd) 163
	1310	ಕ (Kd) 77
	1321	ಕ (Kd) 222
	1325	ತ (Tk) 67
	1360	ಕ (Kd) 214
	1368	ತ (Tk) 136, 174
	1388	ಕೊ (Kp) 23
	1390	ಕ (Kd) 211
	1394	ಕೊ (Kp) 24
	13-14ನೆಯ ಶತಮಾನ 13-14th century	ತ (Tk) 70; ನಪು (Np) 42
	14ನೆಯ ಶತಮಾನ	ಕ (Kd) 173;

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	14th century	ನಪು (Np) 16
	1403	ಕೊ (Kp) 16
	1404	ಕೊ (Kp) 19
	1405-06	ಕ (Kd) 213
	1406	ಕ (Kd) 60
	1408	ಚಿಮ (Cm) 223
	1437	ನಪು (Np) 1
	14-15ನೆಯ ಶತಮಾನ 14-15th century	ಕ (Kd) 13; ಮೂಡ (Mg) 115, 116
	15ನೆಯ ಶತಮಾನ 15th century	ಕೊ (Kp) 35; ನಪು (Np) 23; ಮೂಡ (Mg) 117
	1517	ಕ (Kd) 121
	1518	ಕ (Kd) 108
	1521	ಕ (Kd) 59
	1524	ತ (Tk) 43
	1528-29	ಕೊ (Kp) 21
	1532-33	ನಪು (Np) 17
	1549	ಕೊ (Kp) 40
	1550	ಕ (Kd) 63
	1559	ಕ (Kd) 110
	1592	ಕೊ (Kp) 13
	1597	ನಪು (Np) 2
	15-16ನೆಯ ಶತಮಾನ 15-16th century	ಕ (Kd) 50, 51
	16ನೆಯ ಶತಮಾನ 16th century	ಕೊ (Kp) 44; ತ (Tk) 11
	1601	ಕೊ (Kp) 12
	1609	ಕ (Kd) 109; ಕೊ (Kp) 20
	1610	ಕ (Kd) 191
	1627	ಕ (Kd) 195
	1631	ಕೊ (Kp) 3

ಅರಸ *King*	ಶಾಸನಕಾಲ (ಕ್ರಿಸ್ತಶಕ) *Date (in A.D.)*	ಶಾಸನ ಸಂಖ್ಯೆ *Inscription No.*
	1682	ಕ (Kd) 219
	16-17ನೆಯ ಶತಮಾನ 16-17th century	ಕ (Kd) 60, 251; ತ (Tk) 71
	17ನೆಯ ಶತಮಾನ 17th century	ಕ (Kd) 45, 46, 111, 124, 193, 194, 216, 236, 256-58; ಕೊ (Kp) 5; ನಪು (Np) 29
	1720	ತ (Tk) 49
	1733	ಕೊ (Kp) 43
	17-18ನೆಯ ಶತಮಾನ 17-18th century	ಕ (Kd)100. 196
	18ನೆಯ ಶತಮಾನ 18th century	ಚಿಮ (Cm) 221, 222, 224
	1813	ಕ (Kd) 232
	1864	ಕ (Kd) 215
	18-19ನೆಯ ಶತಮಾನ 18-19th century	ಕೊ (Kp) 41
	. . .	ಕ (Kd) 2. 42. 44. 49. 56, 62, 69, 77- 79, 93, 102, 112, 117, 118, 129, 139, 162, 167, 168, 184, 202-07; ಕೊ (Kp) 7; ತ (Tk) 7, 19, 21, 22, 24, 26, 29, 30, 61, 76; ನಪು (Np) 24, 31, 39

ಶಾಸನಗಳ ಸಮೀಕೃತ ಪಟ್ಟಿ

SYNCHRONISED TABLE OF INSCRIPTIONS

ಈಗಿನ ಆವೃತ್ತಿ *Present Edition*	*VI*	ರಿ *R*	ಇತರೆ *Others*
	ಕಡೂರು ತಾಲ್ಲೂಕು KADUR TALUK		
1-3	119-21		
4	67		
5	184		
6	23		
7	24		
8	163		
9-17	149-57		
18-21	145-48		
22	158		
23			ಮಾ.ಕ. 15- 3-
24			ಮಾ.ಕ. 15- 3-
25	164		
26	165		
27-33	110-16		
34	1		
35		1925-43	
36		1925-27	
37		1925-28	
38	32		
39-42		1925-58 to 61	
43	69		
44		1925-40	
45		1943-28	
46		1944-7	
47	29		
48-51	4-7		
52	47		
53	48		

ಈಗಿನ ಆವೃತ್ತಿ *Present Edition*	*VI*	ರಿ *R*	ಇತರೆ *Others*
54-56	88-90		
57	90 *a*		
58		1945-9	
59	91		
60	91 *a*		
61-64	92-95		
65		1944-8	
66		1925-64	
67-72	96-101		
73	142		
74	143		
75		1944-4	
76	22		
77-90	170-183		
91	77		
92		1927-44	
93		1925-57	
94		1944-6	
95		1925-49	
96		1925-50	
97		1925-51	
98	160		
99		1925-38	
100		1925-39	
101		1943-29	
102		1925-44	
103	2		
104	3		
105		1925-29	
106	12		
107		1925-56 & 1943-26	
108-110	13-15		
111		1925-41	
112		1925-42	
113	70		

ಈಗಿನ ಆವೃತ್ತಿ Present Edition	VI	ರಿ R	ಇತರೆ Others
114	71		
115	78		
116	79		
117	122		
118	123		
119-21		1925-46 to 48	
122-24	25-27		
125	144		
126	49 & 68		
127-29		1925-52 to 54	
130	50		
131		1925-55	
132	117		
133	118		
134-37	72-75		
138	86		
139	87		
140	161		
141	162		
142	31		
143-46	80-83		
147	16		
148	17		
149	33		
150-54	51-55		
155	55 *a*		
156	56		
157	56 *a*		
158-66	57-65		
167		1925-62	
168		1925-63	
169	66		
170-72		1925-30 to 32	
173		1942-48	
174		1925-33	

ಈಗಿನ ಆವೃತ್ತಿ *Present Edition*	*VI*	ರಿ *R*	ಇತರೆ *Others*
175		1925-34	
176	127		
177	128		
178	34		
179	30		
180		1927-42	
181-84	8-11		
185	129		
186	28		
187-89	18-20		
190		1943-22	
191		1925-37	
192	21		
193		1942-49	
194		1944-5	
195		1925-45	
196		1943-23	
197	76		
198-208	35-45		
209-14		1927-45 to 50	
215	46		
216		1943-24	
217	130		
218	131		
219		1943-25	
220	159		
221-28	102-09		
229-32	166-69		
233		1927-43	
234-38	136-40		
239-42	132-35		
243	141		
244	84		
245	85		
246		1927-41	

ಈಗಿನ ಆವೃತ್ತಿ *Present Edition*	*VI*	ರಿ *R*	ಇತರೆ *Others*
247-49	124-26		
250		1943-27	
251		1925-36	
252-61			
262		1925-26	
263		1927-40	
264		1925-35	

ಕೊಪ್ಪ ತಾಲ್ಲೂಕು
KOPPA TALUK

1	44		
2	47		
3	36		
4		1927-54	
5		1932-38	
6	50		
7	45		
8-10	11-13		
11	57		
12	59		
13	58		
14	46		
15		1927-55	
16-21	51-56		
22-27	27-32		
28		1927-53	
29	34		
30		1927-52	
31	49		
32-35		1932-40 to 43	
36	26		
37	35		
38	25		
39	48		
40		1927-51	
41-46			

ಈಗಿನ ಆವೃತ್ತಿ *Present Edition*	*VI*	ರಿ *R*	ಇತರೆ *Others*
47	33		
48		1934-9	

ತರೀಕೆರೆ ತಾಲ್ಲೂಕು
TARIKERE TALUK

1	72		
2	73		
3	61		
4	65		
5			
6	41		
7		1932-48	
8		1932-49	
9-16	42-49		
17			
18	15		
19	40		
20	11		
21-30	26-35		
31	75		
32	60		
33-38	52-57		
39	70		
40	71		
41-46	76-81		
47-49	12-14		
50	9		
51-53	20-22		
54	10		
55	16		
56	17		
57-59	36-38		
60	50		
61	51		
62-64	62-64		
65		1932-45	

ಈಗಿನ ಆವೃತ್ತಿ Present Edition	VI	ರಿ R	ಇತರೆ Others
66	7		
67	8		
68-71	87-90		
72-74	66-68		
75	91		
76	74		
77-81	82-86		
82		1942-47	
83			ಸಿಕೆಐ (*CKI*) 36
84			ಸಿಕೆಐ (*CKI*) 38
85	25		
86	6		
87	69		
88	59		
89-91	3-5		
92		1942-46	
93	1		
94	2		
95	18		
96	19		
97		1932-46	
98		1932-47	
99	58		
100	39		
101	23		
102	24		
103		1908, p.6	

ನರಸಿಂಹರಾಜಪುರ ತಾಲ್ಲೂಕು
NARASIMHARAJAPURA TALUK

1-3	8-10		
4			
5		1920, p. 23	
6		1920, p. 24	
7		1920, p. 24	

ಈಗಿನ ಆವೃತ್ತಿ *Present Edition*	*VI*	ರಿ *R*	ಇತರೆ *Others*
8	21		
9		1931-10	
10		1931-11	
11-13	22-24		
14		1931-9	
15	19		
16	20		
17	4		
18		1932-44 & 1936-25	
19	5		
20	6		
21		1934-10	
22	7		
23		1934-11	
24		1927-63	
25		1936-26	
26-28		1927-56 to 58	
29		1927-61	
30		1927-62	
31		1927-64	
32-34	1-3		
35	18		
36	17		
37-39	14-16		
40	60		
41	61		
42			
43		1927-59	
44		1927-60	

ಚಿಕ್ಕಮಗಳೂರು ತಾಲ್ಲೂಕು
CHIKKAMAGALUR TALUK

221-24

ಮೂಡಗೆರೆ ತಾಲ್ಲೂಕು
MUDAGERE TALUK

115-18

ಪೀಠಿಕೆ

ಪ್ರಸ್ತುತ ಸಂಪುಟವು ಎಪಿಗ್ರಾಫಿಯ ಕರ್ನಾಟಿಕ ಮಾಲೆಯಲ್ಲಿ ಹನ್ನೆರಡನೆಯದು ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಎರಡನೆಯದು. ಈ ಸಂಪುಟದಲ್ಲಿ ಕಡೂರು, ಕೊಪ್ಪ, ತರೀಕೆರೆ ಮತ್ತು ನರಸಿಂಹರಾಜಪುರ ತಾಲ್ಲೂಕುಗಳಿಗೆ ಸೇರಿದ ಶಾಸನಗಳಿವೆ. ಈ ತಾಲ್ಲೂಕುಗಳ ಮತ್ತು ಚಿಕ್ಕಮಗಳೂರು ಹಾಗೂ ಮೂಡಗೆರೆ ತಾಲ್ಲೂಕುಗಳಲ್ಲಿ ಲಭ್ಯವಾದ ಹೊಸ ಶಾಸನಗಳು ಮತ್ತು ಶಾಸನಪ್ರತಿ-ಸನ್ನದುಗಳನ್ನು ಒಳಗೊಂಡ ಎರಡು ಅನುಬಂಧಗಳನ್ನು ನೀಡಲಾಗಿದೆ. ಪ್ರಸ್ತುತ ಸಂಪುಟದಲ್ಲಿ ಇರುವ ಒಟ್ಟು ಶಾಸನಗಳ ಸಂಖ್ಯೆ 467; ಹನ್ನೊಂದನೆಯ ಸಂಪುಟದಲ್ಲಿ ಚಿಕ್ಕಮಗಳೂರು (220), ಮೂಡಗೆರೆ (114) ಮತ್ತು ಶೃಂಗೇರಿ (80) ತಾಲ್ಲೂಕುಗಳಿಗೆ ಸೇರಿದ 414 ಶಾಸನಗಳು ಪ್ರಕಟವಾಗಿವೆ. ಒಟ್ಟು ಚಿಕ್ಕಮಗಳೂರು ಜಿಲ್ಲೆಯಲ್ಲಿನ 881 ಶಾಸನಗಳು ಈ ಸಂಪುಟಗಳಲ್ಲಿ ಸೇರಿವೆ.

ಕದಂಬ

ಈ ರಾಜವಂಶಕ್ಕೆ ಸಂಬಂಧಿಸಿದ ಮೂರು ಶಾಸನಗಳಿದ್ದು, ಆ ಮೂರೂ ತಾಮ್ರಶಾಸನಗಳಾಗಿವೆ. ಇವುಗಳಲ್ಲಿ ಅತಿ ಪ್ರಾಚೀನವಾದ್ದು ಬೀರೂರಿನದು (ಕ. 141). ಶಾಂತಿವರ್ಮನ ತಮ್ಮ ಕೃಷ್ಣವರ್ಮನ ಹಿರಿಯ ಮಗನಾದ ವಿಷ್ಣುವರ್ಮನು ಕತಟ್ಟಾಕ ಎಂಬ ಗ್ರಾಮವನ್ನು ದಾನವಿತ್ತ ವಿಷಯವನ್ನು ಅದು ನಿರೂಪಿಸುತ್ತದೆ. ದಾನಗ್ರಾಮವಿದ್ದುದು ಸಿಂಧುಥಯಾ ರಾಷ್ಟ್ರದಲ್ಲಿ; ಅದನ್ನು "ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಸುತ್ತಮುತ್ತಲ ಪ್ರದೇಶವೆಂದು ಗುರುತಿಸಲಾಗಿದೆ.[1] ದಾನಗ್ರಾಮವನ್ನು ಹಲವು ವೃತ್ತಿಗಳಾಗಿ ವಿಭಜಿಸಿ 85 ಬ್ರಾಹ್ಮಣರಿಗೆ ನೀಡಲಾಯಿತು. ನಂದಿಪಾದ ಮಾರ್ಗದ ಅಂಚಿನಲ್ಲಿ ಕರ್ಣೇಸಕ ನದಿಗೆ ಕಟ್ಟಲಾದ ಸೇತುವೆಯೊಂದರ ಸಮೀಪ ಇದ್ದ ಕೆಲವು ಪ್ರದೇಶಗಳನ್ನು ನೀಡಲಾಯಿತು. ಸೇತುವೆಯೊಂದರ ಉಲ್ಲೇಖವಿರುವುದು ಗಮನಯೋಗ್ಯವಾಗಿದೆ. ಕದಂಬ ದೊರೆಯ ಮೂರನೆಯ ಆಳ್ವಿಕೆಯ ವರ್ಷಕ್ಕೆ ಈ ಶಾಸನ ಸೇರಿದ್ದಾಗಿದೆ.

ಹಿಂದೂ ತ್ರಿಮೂರ್ತಿಗಳಾದ ಹರ, ನಾರಾಯಣ ಮತ್ತು ಬ್ರಹ್ಮರ ಸ್ತುತಿಯೊಂದಿಗೆ ಈ ಶಾಸನ ಆರಂಭವಾಗುತ್ತದೆ. ಒಂದನೆಯ ಕೃಷ್ಣವರ್ಮನಿಗೆ (ಸು ಕ್ರಿ.ಶ. 430-460) ಇಬ್ಬರು ಮಕ್ಕಳಿದ್ದರು. ವಿಷ್ಣುವರ್ಮ (ಸು. ಕ್ರಿ.ಶ. 460-490) ಹಾಗೂ ದೇವವರ್ಮ; ಎರಡನೆಯವನು ಯುವರಾಜನಾಗಿದ್ದರೂ ಆಳ್ವಿಕೆ ನಡೆಸಲಿಲ್ಲ ಮತ್ತು ಆತ ತ್ರಿಪರ್ವತದ ಜಿನನಿಗೆ ದಾನವೊಂದನ್ನು ನೀಡಿದ್ದ.[2] ಈ ಶಾಸನದಲ್ಲಿ ಕೃಷ್ಣವರ್ಮನನ್ನು 'ದಕ್ಷಿಣಾಪಥವಸುಮತೀವಸುಪತಿ' ಎಂದು ಮತ್ತು 'ಅಶ್ವಮೇಧಯಾಜಿ' ಎಂದು ಬಣ್ಣಿಸಲಾಗಿದೆ. ವಿಷ್ಣುವರ್ಮ ಆತನ ಮಗ; ವಿಷ್ಣುವರ್ಮನ ದೊಡ್ಡಪ್ಪ (ಜ್ಯೇಷ್ಠಪಿತರಂ) ಶಾಂತಿವರ್ಮ. ಶಾಂತಿವರ್ಮನು 'ರಣರಭಸ ಪ್ರವರ್ತ್ತದರ್ತ್ಥಾಷ್ಟಾದಶಮಾಣ್ಡಪಿಕಮಣ್ಡಿತ ವೈಜಯನ್ತೀತಿಲಕ ಸಮಗ್ರಕರ್ನಾಟದೇಶಭೂವರ್ಗ್ಗಭರ್ತ್ತಾರ' (ಯುದ್ಧದ ಭರದಿಂದ ಲಭ್ಯವಾದ ಶ್ರೀಮಂತಿಕೆಯಿಂದ ಕೂಡಿದ ಹದಿನೆಂಟು ಪ್ರಭುಗಳಿಂದ ವೈಭವೋಪೇತವಾದ ವೈಜಯಂತಿಯಿಂದ ಅಲಂಕೃತಗೊಂಡ ಅಖಿಲ ಕರ್ನಾಟಕದೇಶದ ಒಡೆಯ) ಎನಿಸಿದ್ದನೆಂದು ಶಾಸನವು ಸಾರುತ್ತದೆ.

ಆದರೆ, ಈ ಶಾಸನವು ಇತರ ಕದಂಬ ತಾಮ್ರಶಾಸನಗಳಿಂದ ಭಿನ್ನವಾದುದಾಗಿದೆ ಮತ್ತು ಲಿಪಿಶಾಸ್ತ್ರೀಯ ಆಧಾರದ ಮೇಲೆ ಕೂಟಶಾಸನವೆಂದು ತೋರುತ್ತದೆ. ಅಕ್ಷರಗಳ ಕೆತ್ತನೆ ಆಳವಾಗಿಲ್ಲ ಹಾಗೂ ಭಾಷೆ ತೃಪ್ತಿಕರವಾಗಿಲ್ಲ. ವಿಷ್ಣುವರ್ಮನು ಶಾಂತಿವರ್ಮದ ಅನುಮತಿಯೊಂದಿಗೆ ದಾನ ಮಾಡಿದನೆಂಬ ಹೇಳಿಕೆ ಕೂಡ ನಮ್ಮ ಸಂದೇಹವನ್ನು ಹೆಚ್ಚಿಸುತ್ತದೆ. ಏಕೆಂದರೆ ವಿಷ್ಣುವರ್ಮನು ಆಳಿದ್ದು ಸು. ಕ್ರಿ.ಶ. 460 ರಿಂದ 490ರವರೆಗೆ; ಪ್ರಸ್ತುತ ಶಾಸನವು ಆತನ ಮೂರನೆಯ ಆಳ್ವಿಕೆಯ ವರ್ಷಕ್ಕೆ ಎಂದರೆ ಸು. ಕ್ರಿ.ಶ. 463-64

ಈಗಾಗಲೇ ಪ್ರಕಟವಾಗಿರುವ ಸಂಪುಟಗಳಲ್ಲಿರುವ ಶಾಸನಗಳ ಹಂಚಿಕೆಯನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಿದೆ

ತಾಲ್ಲೂಕು	VI (ಮೊದಲನೆಯ ಆವೃತ್ತಿ)	ಎಂ.ಎ.ಆರ್ (1923 ನೆಯ ಹಾಗೂ ಅನಂತರ ವರ್ಷಗಳದ್ದು)	ಇತರೆ	ಹೊಸದು	ಒಟ್ಟು	ಷರಾ
ಕಡೂರು	184 +4 (ಅ) -1 (ಆ)	66 -1 (ಆ)	2	10	264	(ಅ) ನಾಲ್ಕು ಶಾಸನಗಳನ್ನು - ಹಿಂದಿನ ಆವೃತ್ತಿಯ 55, 56, 90 ಮತ್ತು 91 - ಎರಡು ಶಾಸನಗಳಾಗಿ ವಿಂಗಡಿಸಿದೆ ಮತ್ತು ಪ್ರತ್ಯೇಕ ಶಾಸನಗಳಾಗಿ ಪರಿಗಣಿಸಿದೆ. (ಆ) ಹಿಂದಿನ ಆವೃತ್ತಿಯ ಎರಡು ಶಾಸನಗಳನ್ನು - 49 ಮತ್ತು 68- ಒಂದೇ ಎಂದು ಪರಿಗಣಿಸಿದೆ. ರಿ. 1925-36 ಮತ್ತು ರಿ. 1943-26 - ಇವೆರಡು ಶಾಸನಗಳನ್ನು ಒಂದೇ ಎಂದು ಪರಿಗಣಿಸಿದೆ.
ಕೊಪ್ಪ	61 -23 (ಇ) -7 (ಈ)	11	-	6	48	(ಇ) 23 ಶಾಸನಗಳು ನರಸಿಂಹರಾಜಪುರ ತಾಲ್ಲೂಕಿಗೆ ವರ್ಗಾವಣೆಗೊಂಡಿವೆ. (ಈ) 7 ಶಾಸನಗಳು ಶೃಂಗೇರಿ ತಾಲ್ಲೂಕಿಗೆ ವರ್ಗಾವಣೆಗೊಂಡಿವೆ.
ತರೀಕೆರೆ	91	7	3	2	103	
ನರಸಿಂಹರಾಜಪುರ	+23 (ಇ)	17 -1(ಉ)	3	2	44	(ಉ) ರಿ 1932-44 ಮತ್ತು ರಿ 1935-26 ಸಂಖ್ಯೆಯ ಶಾಸನಗಳನ್ನು ಒಂದೇ ಎಂದು ಪರಿಗಣಿಸಿದೆ.
ಚಿಕ್ಕಮಗಳೂರು	-	-	-	4	4	
ಮೂಡಿಗೆರೆ	-	-	-	4	4	
	332	99	8	28	467	

ಕ್ಕೆ ಸೇರಿದುದು. ಆದರೆ, ಶಾಂತಿವರ್ಮನ ಆಳ್ವಿಕೆ ಇದ್ದುದು ಸು. ಕ್ರಿ.ಶ. 430 ರಿಂದ 455ರವರೆಗೆ. ಆತ "ತನ್ನ ತಮ್ಮ ಕೃಷ್ಣವರ್ಮನಿಗಿಂತ ಮೊದಲೇ ತೀರಿಕೊಂಡಿದ್ದ. ಆದ್ದರಿಂದ ಶಾಂತಿವರ್ಮನ ಅನುಮತಿಯೊಂದಿಗೆ ಈ ದಾನವನ್ನು ನೀಡಲಾಯಿತು ಎಂದು ಹೇಳುವುದು ಸರಿಯಾಗುವುದಿಲ್ಲ."[3]

1983ರಲ್ಲಿ ತರೀಕೆರೆ ತಾಲ್ಲೂಕಿನ ಮುದಿಗೆರೆ ಗ್ರಾಮದ ಕೃಷಿಕರಾದ ಶ್ರೀ ಹನುಮಣ್ಣ ಎಂಬುವರು ತಮ್ಮ ಹೊಲದಲ್ಲಿ ಉಳುಮೆ ಮಾಡುತ್ತಿದ್ದಾಗ ಈ ವಂಶಕ್ಕೆ ಸೇರಿದ ಎರಡು ತಾಮ್ರಶಾಸನಗಳು ಪತ್ತೆಯಾದವು. ಕನ್ನಡ ದಿನಪತ್ರಿಕೆಯಾದ ಕನ್ನಡ ಪ್ರಭದ 1983ರ ಆಗಸ್ಟ್ 7ರ ಸಂಚಿಕೆಯಲ್ಲಿ ಈ ಶಾಸನಗಳನ್ನು ಡಾ. ಎ. ಸುಂದರ ಅವರು ಪ್ರಥಮ ಬಾರಿಗೆ ಪ್ರಕಟಿಸಿದರು. 1985ರಲ್ಲಿ ಡಾ. ಬಾ.ರಾ. ಗೋಪಾಲ ಅವರು ತಮ್ಮ *Corpus of Kadamba Inscriptions* ಎಂಬ ಕೃತಿಯಲ್ಲಿ ಮೊದಲ ಸಂಪುಟದಲ್ಲಿ ಈ ಶಾಸನಗಳ ಪರಿಷ್ಕೃತ ಪಾಠವನ್ನು ಪ್ರಕಟಿಸಿದರು. ಮುಂದೆ ಡಾ. ಎಂ. ಎಸ್. ನಾಗರಾಜರಾವ್ ಮತ್ತು ಡಾ. ಕೆ.ವಿ. ರಮೇಶ್ ಅವರು *Copper Plate Inscriptions of Karnataka* (1997) ಎಂಬ ಕೃತಿಯಲ್ಲಿ ಈ ಶಾಸನಗಳ ಪಾಠವನ್ನು ಸಂಪಾದಿಸಿ ಪ್ರಕಟಿಸಿದರು.

ಕೃಷ್ಣವರ್ಮನ ಮಗನಾದ ವಿಷ್ಣುವರ್ಮನ ಕಾಲಕ್ಕೆ ತ. 83 ಸೇರಿದುದು. ತಾಮ್ರಪಟಗಳಿಗೆ ಸೇರಿದ ಬಳೆಯ ಮೇಲಿನ ಮುದ್ರೆಯಲ್ಲಿನ ಆಕೃತಿ ಸ್ಪಷ್ಟವಾಗಿಲ್ಲ. ಮೂರನೆಯ ಹಲಗೆಯ ಹೊರ ಮುಖದ ಮೇಲೆ ಕ್ರಿ.ಶ. 8ನೆಯ ಶತಮಾನದ ಲಿಪಿಲಕ್ಷಣಗಳಿಂದ ಕೂಡಿದ 'ಶ್ರೀವಿಜಯವಿಜ' ಎಂಬ ಶಬ್ದವಿರುವುದು ಕುತೂಹಲಕಾರಿಯಾಗಿದೆ.

ವಿಷ್ಣುವರ್ಮ ಜನಿಸಿದ್ದು ಕೈಕೇಯ ರಾಜಪುತ್ರಿಯಲ್ಲಿ. ಆತ ಅಭಿಷಿಕ್ತನಾದದ್ದು, ಒಬ್ಬ ಪಲ್ಲವ ದೊರೆಯಿಂದ; ಆದರೆ ಆ ದೊರೆಯ ಹೆಸರನ್ನು ತಿಳಿಸಿಲ್ಲ. ಕದಂಬ ದೊರೆಯ ಆರನೆಯ ಆಳ್ವಿಕೆಯ ವರ್ಷವನ್ನು ಉಲ್ಲೇಖಿಸುವ ಈ ಶಾಸನದಲ್ಲಿ ಸೇಂದ್ರಕ ವಿಷಯದಲ್ಲಿರುವ ಆಸಂದಿತಟಾಕದ ಉತ್ತರಕ್ಕೆ ಇರುವ ಪ್ರದೇಶದಲ್ಲಿ ಬರಲೆಂದು ಆರು ನಿವರ್ತನ ಭೂಮಿಯನ್ನು ದಾನವಿತ್ತ ವಿಷಯವನ್ನು ನಿರೂಪಿಸಿದೆ. ರಾಜನು 'ಸ್ವಪುಣ್ಯಕುಲಾಭಿವೃದ್ಧ್ಯರ್ಥ'ವಾಗಿ (ತನಗೆ ಪುಣ್ಯ ಬರಲೆಂದು ಮತ್ತು ತನ್ನ ಕುಲದ ಅಭ್ಯುದಯಕ್ಕಾಗಿ) ಆಸಂದ್ಯಾಲೂರಿನ ಅರ್ಹತಾಯತನದ ಪೂಜೆಗಾಗಿ ಈ ಭೂಮಿ ದಾನವನ್ನು ಮಾಡಲಾಯಿತು. ಈ ದಾನ ಮಾಡುವಾಗ ಆತ ವೈಜಯಂತಿಯಲ್ಲಿದ್ದ.

ಇದೇ ಸ್ಥಳದಲ್ಲಿ ದೊರೆತ ಇನ್ನೊಂದು ಶಾಸನವು (ತ. 84) ಸಿಂಹವರ್ಮನ ಐದನೆಯ ಆಳ್ವಿಕೆಯ ವರ್ಷಕ್ಕೆ ಸೇರಿದುದು. ನಾಲ್ಕು ಹಲಗೆ ಮತ್ತು ವೃತ್ತಾಕಾರದ ಮುದ್ರೆಗಳಿಂದ ಇದು ಕೂಡಿದೆ. ಆತನ ಆಳ್ವಿಕೆಯ ಏಕಮಾತ್ರ ಶಾಸನ ಇದೆಂಬುದರಿಂದ ಈ ಶಾಸನದ ಪ್ರಾಮುಖ್ಯ ಗೊತ್ತಾಗುತ್ತದೆ. ಹಿಂದಿನ ಶಾಸನದಂತೆಯೇ ಇದು ಸಹ ದಾನ ಸ್ವರೂಪದ್ದು. ಆ ಸ್ಥಳದ 'ಭಗವತಾಮರ್ಹತಾಮಾಯತನ' ಪೂಜೆಗೆ (ಬಸದಿಯಲ್ಲಿನ ಜಿನಾರಾಧನೆಗೆ) ಆಸಂದಿತಟಾಕಕ್ಕೆ ದಕ್ಷಿಣದಲ್ಲಿದ್ದ ಪ್ರದೇಶದಲ್ಲಿ ಕದಂಬ ದೊರೆಯು ಐದು ನಿವರ್ತನ ಭೂಮಿಯನ್ನು ನೀಡಿದ ವಿಷಯವನ್ನು ಈ ಶಾಸನ ತಿಳಿಸುತ್ತದೆ. ದೊರೆಯು ವಿಷ್ಣುವರ್ಮನ ಮಗ ಮತ್ತು ಕೃಷ್ಣವರ್ಮನ ಮೊಮ್ಮಗ. ರಾಮೇಯ ವಂಶದ ರಾಜಕುಮಾರಿಯೊಬ್ಬಳಲ್ಲಿ ಆತ ಜನಿಸಿದನೆಂದು ಹೇಳಲಾಗಿದೆ. ಶಾಸನೋಕ್ತ ಸರ್ವಸೇನಮಹಾರಾಜನನ್ನು ವಾಕಾಟಕ ವಂಶದ - ಪ್ರಾಯಶಃ ವತ್ಸಗುಲ್ಮ ಶಾಖೆಗೆ ಸೇರಿದ - ದೊರೆ ಎಂದು ಗುರುತಿಸಲಾಗಿದೆ. ಆದರೆ ಇದರಲ್ಲಿ ಕಾಲಾನುಪೂರ್ವಿಗೆ ಸಂಬಂಧಿಸಿದ ಕೆಲವು ತೊಡಕುಗಳಿವೆ. ಕದಂಬ ದೊರೆಯನ್ನು ಈತ ಸಿಂಹಾಸನದ ಮೇಲೆ ಪ್ರತಿಷ್ಠಾಪಿಸಿದ. ಆದರೆ ಈ ದಾಖಲೆಯ ನೈಜತೆಯೇ ಸಂದೇಹಾಸ್ಪದವಾಗಿದೆ.

ಕ. 250 ನನ್ನಿಮಾರ್ತಂಡ ಪಟ್ಟಳಿಗೆ ಎರೆಯಂಗರಸನ ಮಗನಾದ ಚಿಣ್ಣಮರಸನನ್ನು ಉಲ್ಲೇಖಿಸುತ್ತದೆ; ಈತ ಉತ್ತರ ಕದಂಬ ವಂಶದವನೆಂಬುದು ಸ್ಪಷ್ಟ. ಈ ದೊರೆಯನ್ನು ಕ್ರಿ.ಶ. 11ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದ ಎರಡನೆಯ ಚಿಣ್ಣಮರಸ[4] ಎಂದು ಗುರುತಿಸಬಹುದು.

ರಾಷ್ಟ್ರಕೂಟ

ಈ ವಂಶಕ್ಕೆ ಸೇರಿದಂತೆ ನಮಗೆ ದೊರೆತಿರುವ ಏಕೈಕ ಶಾಸನವೆಂದರೆ ಮುದಿಗೆರೆಯದು (ತ. 82). ಆದರೆ ಶಾಸನ ಕೆತ್ತಿರುವ ಕಲ್ಲು ತುಂಬ ಹಾನಿಗೀಡಾಗಿದೆ. ಹೀಗಾಗಿ ಶಾಸನದ ಅರ್ಥ ಸ್ಪಷ್ಟವಿಲ್ಲ. ಅದು ಪ್ರಭೂತವರ್ಷ ಗೋವಿಂದನನ್ನು ಉಲ್ಲೇಖಿಸುತ್ತದೆ;

ಆತ ಮಾಳ ಎಂಬುವನಿಗೆ ಪ್ರಭೂತುಂಗ ಎಂಬ ಬಿರುದನ್ನು ನೀಡಿ ಸನ್ಮಾನಿಸಿದನಂತೆ. ಅಲ್ಲದೆ, ಕೆಲವು ತೆರಿಗೆಗಳ ವಿನಾಯಿತಿ ಇರುವ ಭೂಪ್ರದೇಶವನ್ನು ಕೂಡ ಮಾಳನಿಗೆ ನೀಡಲಾಯಿತೆಂದು ತೋರುತ್ತದೆ. ಈ ರಾಷ್ಟ್ರಕೂಟ ರಾಜನನ್ನು ಆ ವಂಶದ ಅತ್ಯಂತ ಪ್ರಬಲ ದೊರೆಯಾದ ಮೂರನೆಯ ಗೋವಿಂದ (ಕ್ರಿ.ಶ. 793-814) ಎಂದು ಗುರುತಿಸಬಹುದು. ತನ್ನ ತಂದೆ ಧ್ರುವನ ಕೈಕೆಳಗೆ ಗೋವಿಂದನು ಒಬ್ಬ ಸಾಮಂತಾಧಿಪತಿಯಾಗಿ ಬನವಾಸಿಯಿಂದ ಪಾಲನೆ ಮಾಡುತ್ತಿದ್ದಿರಬಹುದು.

ಗಂಗ

ಕಡೂರು ತಾಲ್ಲೂಕಿನಲ್ಲಿರುವ ಆಸಂದಿ ಗ್ರಾಮವು ಅತ್ಯಂತ ಪ್ರಾಚೀನತೆಯುಳ್ಳ ಒಂದು ಸ್ಥಳ. ಈ ಸಂಪುಟದಲ್ಲಿ ಗಂಗ ವಂಶಕ್ಕೆ ಸೇರಿದ ಪ್ರಾಚೀನತಮ ದಾಖಲೆಯು ಈ ಗ್ರಾಮದ್ದು (ಕ. 23). ಈಚಿನ ವರ್ಷಗಳಲ್ಲಿ ಅನ್ವೇಷಿತವಾದ ತಾಮ್ರಶಾಸನವು ಗಂಗವಂಶದ ಹೊಸ ದೊರೆಯೊಬ್ಬನನ್ನು ಪರಿಚಯಿಸುತ್ತದೆ. ಆತ ಇದುವರೆಗೆ ನಮಗೆ ತಿಳಿದಿರದ ಅರಸಾಣೆ ಮಹಾರಾಜ. ಕಾಣ್ವಾಯನಸ ಗೋತ್ರಕ್ಕೆ ಸೇರಿದ ಗಂಗ ದೊರೆಗಳ ವಂಶಾವಳಿಯನ್ನು ಈ ರೀತಿ ನೀಡಲಾಗಿದೆ: ಕೊಂಗುಣಿವರ್ಮ->ಮಾಧವ->ಹರಿವರ್ಮ->ವಿಷ್ಣುಗೋಪ->ಮಾಧವ II->ಅವಿನೀತ->ದುರ್ವಿನೀತ->ಮೊಕ್ಕರ->ಶ್ರೀವಿಕ್ರಮ->ಶ್ರೀವಲ್ಲಭ->ಅರಸಾಣೆ. ಈ ಶಾಸನದಲ್ಲಿ ಉಲ್ಲೇಖಗೊಂಡಿರುವ ಕಟ್ಟಾಣೆಯನ್ನು ಕೆಲವು ದಾಖಲೆಗಳು ಉಲ್ಲೇಖಿಸುತ್ತದೆ.[5] ಆದರೆ ಆತನನ್ನು ಶಿವಮಾರ ಅಥವಾ ಶ್ರೀಪುರುಷ ಎಂದು ಇದುವರೆಗೆ ಗುರುತಿಸಲಾಗಿತ್ತು. ಇಲ್ಲಿ ಅದನ್ನು ಶ್ರೀವಲ್ಲಭನಿಗೆ ಸ್ಪಷ್ಟವಾಗಿ ಅನ್ವಯಿಸಲಾಗಿದೆ. ಅರಸಾಣೆಯನ್ನು 'ನೀತಿಶಾಸ್ತ್ರ ಕುಶಲಾನೇಕತರ್ಕ್ಕಸಮಯವ್ಯಾಕರಣನಾಟಕಾಖ್ಯಾಯಿಕೇತಿಹಾಸಪುರಾಣಕೋಶಲ' ಎಂದು ಬಣ್ಣಿಸಿದೆ. ಕಟ್ಟಾಣೆ ಮತ್ತು ಅರಸಾಣೆ - ಗಂಗ ದೊರೆಗಳ ಎರಡು ವಿಶಿಷ್ಟ ಹೆಸರುಗಳು - ಹೆಚ್ಚಿನ ಸಂಶೋಧನೆಗೆ ಅರ್ಹವಾಗಿವೆ. ಡಾ. ಎಂ.ವಿ. ಕೃಷ್ಣರಾವ್ ಅವರ ಪ್ರಕಾರ ಭೂವಿಕ್ರಮನ ಆಳ್ವಿಕೆಯು ಕೊನೆಗೊಂಡಿದ್ದು ಕ್ರಿ.ಶ. 679ರಲ್ಲಿ.[6] ಒಂಬತ್ತು ವರ್ಷಗಳ ವಿಚ್ಛಿತ್ತಿ ಇದ್ದಿತು. ಡಾ. ಎ.ವಿ.ನರಸಿಂಹಮೂರ್ತಿ ಅವರ ಅಭಿಪ್ರಾಯ ಹೀಗಿದೆ: "ಪ್ರಾಯಶಃ ಈ ಒಂಬತ್ತು ವರ್ಷಗಳ ಅವಧಿಯಲ್ಲಿ ಭೂವಿಕ್ರಮನ ಮಗನಾದ ಅರಸಾಣೆಯು ಆಳಿದ್ದಿರಬೇಕು ಮತ್ತು ಶಿವಮಾರನು ಆತನನ್ನು ಪದಚ್ಯುತಗೊಳಿಸಿದ್ದಿರಬೇಕು ಹಾಗೂ ಆತನನ್ನು ಸೋಲಿಸಿದ ಅನಂತರ ಸಿಂಹಾಸನವನ್ನು ವಶಪಡಿಸಿಕೊಂಡಿದ್ದಿರಬೇಕು"[7] ಅವರ ಅಭಿಪ್ರಾಯವು ತರ್ಕಬದ್ಧವಾಗಿದೆ ಎಂದು ತೋರುತ್ತದೆ ಹಾಗೂ ಒಂಬತ್ತು ವರ್ಷಗಳ ವಿಚ್ಛಿತ್ತಿಯನ್ನು ಅದು ವಿವರಿಸುತ್ತದೆ.

ಮರುಗೆರೆ ವಿಷಯಕ್ಕೆ ಸೇರಿದ ಪೆರುಗ್ರಾಮದಲ್ಲಿನ ಚೈತ್ಯಾಲಯವೊಂದಕ್ಕೆ ದಾನವಿತ್ತ ವಿಷಯವನ್ನು ಈ ಶಾಸನವು ನಿರೂಪಿಸುತ್ತದೆ. ಮೂಲಸಂಘಕ್ಕೆ ಸೇರಿದ ಪೆಣ್ಣೆಲ್ಲ ಗುಣನಂದಿಯು ಈ ದಾನದ ಪ್ರತಿಗ್ರಹಿ. ಪೆಣ್ಣೆಲ್ಲ ಎಂಬುದು ಕುಣಂಗಿಲ್ಲದಂತೆ ಒಂದು ಸ್ಥಳನಾಮವೆಂದು ಕಾಣುತ್ತದೆ. ಅದನ್ನು ಸನ್ಯಾಸಿನಿ ಅಥವಾ ಹೆಣ್ಣೆಲ್ಲದ ಎಂದು ಮೂಲಸಂಘಕ್ಕೆ ವಿಶೇಷಣವಾಗಿ ಅನ್ವಯಿಸಿ ಅರ್ಥ ಮಾಡಬೇಕಿಲ್ಲ.

ಈ ಶಾಸನದ ಭಾಷೆಯಾದರೋ ದೋಷದಿಂದ ಕೂಡಿದೆ ಹಾಗೂ ಅನೇಕ ಲಿಪಿಸ್ಖಾಲಿತ್ಯಗಳು ಕೂಡ ಇವೆ. ಶಾಸನದ ನೈಜತೆಯನ್ನು ಸಂದೇಹಿಸಲು ಸ್ವಲ್ಪ ಮಟ್ಟಿಗೆ ಆಸ್ಪದವಿದೆ.

ನರಸಿಂಹರಾಜಪುರದ ಜೈನಮಠದ ವಶದಲ್ಲಿರುವ ತಾಮ್ರಶಾಸನಗಳಲ್ಲಿ ಒಂದು (ನಪು. 5) ಮೊದಲ ಬಾರಿಗೆ ಪಸಿಂಡಿ ಗಂಗಾನ್ವಯವನ್ನು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ತೇದಿಯನ್ನು ತಿಳಿಸಿಲ್ಲ. ಆದರೆ, ಅದು ಶ್ರೀಪುರುಷನ ಆಳ್ವಿಕೆಯ ಕಾಲಕ್ಕೆ (ಕ್ರಿ.ಶ. 725-788) ಸೇರಿದುದು. ಅವಿನೀತ ಮತ್ತು ದುರ್ವಿನೀತ ಎಂಬ ಗಂಗ ದೊರೆಗಳ ವಿಶಿಷ್ಟ ಹೆಸರುಗಳನ್ನು ಹೀಗೆ ವಿವರಿಸಲಾಗಿದೆ: 'ಅವಿನೀತನೃಪತಿಮಣ್ಡಲೇಷ್ವವಿನೀತಃ' (ವಿನೀತರಲ್ಲದ ಶತ್ರುರಾಜಮಂಡಲಿಗೆ ಅವಿನೀತನಾದವನು) ಮತ್ತು 'ದುರ್ವಿನೀತಕಲೌ ದುರ್ವಿನೀತಃ' (ದುಷ್ಟ ಕಲಿಗೆ ಮಾತ್ರ ಬಾಗದೆ ಇರುವವನು). ಇಂಥದೇ ವಿವರಣೆಯನ್ನು ಪೊಲವೀರನ ತಗರೆ ತಾಮ್ರಶಾಸನದಲ್ಲಿ ಕೊಟ್ಟಿದೆ.[8] ನಾಗವರ್ಮನು ಪಸಿಂಡಿ ಗಂಗವಂಶ ಶಾಖೆಯ ಒಬ್ಬ ಅಧಿಪನಾಗಿದ್ದನು. ಆದರೆ ಪಸಿಂಡಿ ಎಂಬ ಶಬ್ದದ ಅರ್ಥವ್ಯಾಪ್ತಿಯನ್ನು ಅರಿತುಕೊಳ್ಳುವುದು ಕಷ್ಟ. ಧರ್ಮಪುರಿ ಜಿಲ್ಲೆಯ ಕೃಷ್ಣಗಿರಿ ತಾಲ್ಲೂಕಿನ ಗಂಗಾವರಂ ಎಂಬ ಗ್ರಾಮದಲ್ಲಿರುವ ವೀರಗಲ್ಲೊಂದು ಶಿವಮಾರನ ಆಳ್ವಿಕೆಗೆ ಸೇರಿದ್ದು, ಪಸೂಂಡಿಯ ಎಂಬಾತನನ್ನು ಉಲ್ಲೇಖಿಸುವುದನ್ನು ಗಮನಿಸಬಹುದು.[9] ತುಳು ಅಡಿಯು ಕದಂಬ ಶಾಖೆಗೆ ಸೇರಿದವನು; ಆತ ಗಂಗ ಅಧಿಪನ 'ಶಾಲ'ನಾಗಿದ್ದ.[10] ಇವರಿಬ್ಬರೂ ಸೇರಿ ತಗರೆ ಜನಪದಕ್ಕೆ ಸೇರಿದ ಮಲ್ಲವಳ್ಳಿ ಎಂಬ

ಗ್ರಾಮವನ್ನು ತೊಳಲಿನ ಚೈತ್ಯಾಲಯಕ್ಕೆ ದಾನವಿತ್ತರು. ಶಾಂತಿಸೇನಅಬ್ಬೆ ಹಾಗೂ ಮಣಲಿಮನೆ ಒಡೆಯರ ದಾನಗಳನ್ನು ಕೂಡ ಈ ಶಾಸನವು ದಾಖಲಿಸುತ್ತದೆ. ಈ ಶಾಸನವನ್ನು ಸಂಪಾದಿಸಿದ ಶ್ರೀ ಆರ್. ನರಸಿಂಹಾಚಾರ್ ಅವರು ಹೀಗೆ ಹೇಳುತ್ತಾರೆ:

"ಈ ದಾನಶಾಸನವು ಸುಮಾರು 8ನೆಯ ಶತಮಾನದ ಕೊನೆಗೆ ಸೇರಿದ ನೈಜಶಾಸನವಾಗಿದೆ. ಅದರ ಭಾಷೆ ವಿಕೃತಗೊಂಡಿಲ್ಲ; ಲಿಪಿಕಂಡರಣೆ ಅಪವಾದಾತ್ಮಕವಾಗಿಲ್ಲ; ಅದರ ಅಕ್ಷರಗಳು ದೋಷಮುಕ್ತವಾಗಿವೆ ಹಾಗೂ ಅದರ ಕಂಡರಣೆಯು ಉದ್ದಕ್ಕೂ ಉತ್ತಮವಾಗಿದೆ."[11]

ಮುಂದಿನ ತಾಮ್ರಶಾಸನವೆಂದರೆ ಆಸಂದಿಯದು (ಕ. 24). ಹೊಸದಾಗಿ ಅನ್ವೇಷಿತವಾದ ಈ ಶಾಸನದ ಕಾಲ ಕ್ರಿ.ಶ. 795. ಅಕ್ಷರಗಳನ್ನು ಅಂದವಾಗಿ ಕಂಡರಿಸಲಾಗಿದೆ.[12] ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ರಚಿತವಾಗಿರುವ ಈ ಶಾಸನದಲ್ಲಿ ಎರಡನೆಯ ಶಿವಮಾರನವರೆಗಿನ ಗಂಗ ದೊರೆಗಳ ವಂಶಾವಳಿಯನ್ನು ಕೊಟ್ಟಿದೆ. ಶಿವಮಾರನಿಗೆ ಜಯಿಸಿಂಹ ಎಂಬ ಹೆಸರಿನ ಮಗನೊಬ್ಬನಿದ್ದ ಎಂಬ ಅಂಶವು ಪ್ರಾಯಶಃ ಮೊದಲ ಬಾರಿಗೆ ಈ ಶಾಸನದಿಂದ ತಿಳಿದುಬರುತ್ತದೆ. ಅದು ಒಂದನೆಯ ಪೃಥ್ವೀಪತಿಯ ಅಣ್ಣನಾದ ಮಾರಸಿಂಹನ ಇನ್ನೊಂದು ಹೆಸರಾಗಿರಬಹುದೆ? ಜಯಸಿಂಹನು 'ಆತ್ಮೀಯ ಪೂರ್ವಜಾಶೇಷಗುಣಗಣಾಶ್ರಯ' (ತನ್ನ ಹಿಂದಿನವರಿಂದ ಪ್ರಾಪ್ತವಾದ ಗುಣಗಳೆಲ್ಲದರ ಆಶ್ರಯವಾಗಿದ್ದ), 'ಜ್ಯೋತಿರ್ಜ್ಞಾನಪ್ರವೀಣ' ಹಾಗೂ ನಾರಾಯಣನ ಭಕ್ತನಾಗಿದ್ದನು. ಆತನ ವಿಜ್ಞಾಪನೆಯ ಮೇರೆಗೆ ಶಿವಮಾರನು ಆಸಂದಿವಿಷಯಕ್ಕೆ ಸೇರಿದ ತೋರುಗಲ್ಲು ಗ್ರಾಮವನ್ನು - ಅನೇಕ ವೃತ್ತಿಗಳಾಗಿ ವಿಂಗಡಿಸಿ - ಈ ಕೆಳಗೆ ಹೆಸರಿಸಿದ ವ್ಯಕ್ತಿಗಳಿಗೆ ದಾನ ನೀಡಿದನು.

ವ್ಯಕ್ತಿ	ಸ್ಥಳ	ಗೋತ್ರ ಶಾಖೆ/ಕುಲ	ವೃತ್ತಿ
ಪನಂಕಾಟ ದತ್ತಶರ್ಮ	ನಂದಿ	ಆತ್ರೇಯ	2
ವಿಷ್ಣುದಾಸಶರ್ಮ	-	ದಾಯಣೀಯ ಕುಲ ಸಾಮ ಮತ್ತು ಇಂದ್ರಪ್ರಮದ ವಶಿಷ್ಠ	2
ವಿಂಧ್ಯಕುಮಾರಶರ್ಮ	ಏಟೂರು	ವಶಿಷ್ಠ ಯಜುಸ್	1
ದ್ರೋಣಶರ್ಮ	ಚಾಂದೂರು	ಭಾರದ್ವಾಜ ಯಜುಸ್	1
ಭಾಸ್ಕರ	ಪರಂತೂರು	ಭಾರದ್ವಾಜ	1
ಶಿವಕುಮಾರಶರ್ಮ	ಕುಮುಳೂರು	ಕೌಶಿಕ ವಾಜಸನೇಯಿ	1
ನಾರಾಯಣಶರ್ಮ	ಅಳಂಪೂರು	ಕಾಶ್ಯಪ ಋಗ್	1
ಶಿವಶರ್ಮ	ಮುಡುಂಬಿ	ಕಾಮಕಾಯನ ಋಗ್	1
ನಾರಾಯಣಶರ್ಮ	ಮುಡುಂಬಿ	ಕೌಶಿಕ ಯಜುಸ್	1
ನಾಗಶರ್ಮ	ಬಾದಾವಿ	ಭಾರದ್ವಾಜ ಋಗ್	1

ದಾನವಿತ್ತ ಗ್ರಾಮ ಯಾವುದೆಂದು ಗುರುತಿಸಲು ಸಾಧ್ಯವಾಗಿಲ್ಲ. ಈ ದಾನಕ್ಕೆ ಗಂಗವಾಡಿ-96,000 ಪ್ರದೇಶದ ಪ್ರಜೆಗಳು

ಸಾಕ್ಷಿಗಳಾಗಿದ್ದರು. ಪ್ರತಿಗ್ರಹಿಗಳು ಬಾದಾವಿ, ಏಟೂರು, ಅಳಂಪೂರು ಮುಂತಾದಂಥ ದೂರದ ಸ್ಥಳಗಳಿಗೆ ಸೇರಿದವರಾಗಿದ್ದರು. ದಾನವಿತ್ತ ಗ್ರಾಮದ ಸೀಮಾವಿವರಗಳನ್ನು ತಿಳಿಸುವಾಗ ಉಲ್ಲೇಖಿಸಿದ ಎರೆಕೇಸಿಗೆರೆ ಎಂಬುದು ಗಮನಾರ್ಹವಾಗಿದೆ.

ವಿಟ್ಟರಸ ಎಂಬಾತ ಸಿಂದನಾಡು -8000 ಹಾಗೂ ತಗರೆನಾಡು-70 ಪ್ರದೇಶಗಳನ್ನು ಪಾಲಿಸುತ್ತಿದ್ದನೆಂದು ನಪು. 6ರಿಂದ ತಿಳಿದುಬರುತ್ತದೆ. ತೊಳ್ಳ ಗ್ರಾಮದ ಚೇದಿಯಕ್ಕೆ ಕರಿಮಾನಿ ಗ್ರಾಮವನ್ನು ಆತ ದಾನ ಮಾಡಿದ. ಈ ದಾನಕ್ಕೆ ತೊಳ್ಳದ ಕೋಸಿಗರು ಮತ್ತು ಎಪ್ಪತ್ತಾರು ಜನರು ಸಾಕ್ಷಿಗಳಾಗಿದ್ದರು (ನರಶಾಸನಮಾಗೆ). ಆಳುತ್ತಿದ್ದ ಗಂಗ ದೊರೆ ಶಿವಮಾರ. ವಿಟ್ಟರಸನು ಕದಂಬ ವಂಶಕ್ಕೆ ಸೇರಿದವನಾಗಿದ್ದನು (ಚಾರುಕಾದಮ್ಬರಾಜ್ಯಕ್ಕರ್ಹನ್). ಆತನ ವಂಶಾವಳಿಯನ್ನು ಹೀಗೆ ಕೊಟ್ಟಿದೆ:

ಕೃಷ್ಣ (ಸು. ಕ್ರಿ.ಶ. 516-540)
|
ರವಿ (ಸು. ಕ್ರಿ.ಶ. 540-575)
|
ಕಾಮಾಲಯ (ಸು. ಕ್ರಿ.ಶ. 575-600)
|
ಚೇದವರ್ಮ (ಸು. ಕ್ರಿ.ಶ. 600-625)
|
ಮಾಧವೇಂದ್ರ (ಸು. ಕ್ರಿ.ಶ. 625-650)
|
ವಿಷ್ಣುರಾಜ/ವಿಟ್ಟರಸ (ಸು. ಕ್ರಿ.ಶ. 650-680)

ಈ ದೊರೆಗಳಿಗೆ ಮೇಲೆ ನೀಡಲಾದ ಆಳ್ವಿಕೆಯ ಅವಧಿಗಳನ್ನು ಸರಿ ಎಂದು ಭಾವಿಸುವುದಾದಲ್ಲಿ, ಆಗ ಆಳುತ್ತಿದ್ದ ಗಂಗ ದೊರೆಯನ್ನು ಒಂದನೆಯ ಶಿವಮಾರ (ಕ್ರಿ.ಶ. 679-725) ಎಂದು ಗುರುತಿಸಬೇಕಾಗುತ್ತದೆ. ಆದರೆ ಶಾಸನಾಕ್ಷರಗಳು, ಅನಂತರ ಕಾಲದವೆಂಬಂತೆ ತೋರುತ್ತವೆ. ಡಾ. ಕೆ.ವಿ. ರಮೇಶ್ ಅವರ ಪ್ರಕಾರ ಈ ಶಾಸನವು 9ನೆಯ ಶತಮಾನದ ಪೂರ್ವಾರ್ಧಕ್ಕೆ ಸೇರುತ್ತದೆ.[13]

ಅದೇ ಊರಿನ ಇನ್ನೊಂದು ಶಾಸನವು (ನಪು. 7) ಶಿವಮಾರನ ಆಳ್ವಿಕೆಗೇ ಸೇರಿದುದು; ಆತನ ಮಾವನಾದ (ಮಾಮಂಗಳ್) ವಿಜಯಶಕ್ತಿ ಅರಸನು ಮೂಳಿವಳ್ಳಿಯ ಚೇದಿಯಕ್ಕೆ ಭೂಮಿದಾನ ಮಾಡಿದನು. ಈ ದಾನದ ಸಂರಕ್ಷಕರು ಮತ್ತು ಈ ದಾನಕ್ಕೆ ಸಾಕ್ಷಿಗಳು ಆದವರೆಂದರೆ ಅಯ್ಯಗಾಡರ್, ಅಜಗಿಯರ್ ಹಾಗೂ ಇತರರು. ಶಾಸನೋಕ್ತ ಪೆರ್ವೊರ್ಗುಳಿ ಮತ್ತು ಕಿರುವುಗುಳಿಗಳನ್ನು ಕ್ರಮವಾಗಿ ಹಿರೇಮಗಳೂರು ಮತ್ತು ಚಿಕ್ಕಮಗಳೂರು ಎಂದು ಗುರುತಿಸಬಹುದು. ತೊಳ್ಳಗ್ರಾಮವು ಬೇಲೂರು ತಾಲ್ಲೂಕಿನಲ್ಲಿರುವ ತೊಳಲು ಎಂಬುದು ಸ್ಪಷ್ಟ. ಇತರ ಗ್ರಾಮಗಳಾದ ತೊರೆಯವಳ್ಳಿ, ಮಾಮಂದೂರು, ಕಿರಿಯಗಾಮ, ಸಿಂದಗಾಮ, ಪೊಲಿಕಿಗಾಮ, ಮಾಗುಡಿ ಮತ್ತು ಮೂಳಿವಳ್ಳಿಗಳೆಲ್ಲವೂ ಬೇಲೂರು ಮತ್ತು ಚಿಕ್ಕಮಗಳೂರು ತಾಲ್ಲೂಕುಗಳಿಗೆ ಸೇರಿದವೆಂದು ತೋರುತ್ತದೆ.

ಆರ್. ನರಸಿಂಹಾಚಾರ್ ಅವರು ಬರೆಯುತ್ತಾರೆ:" ಈ ಶಾಸನದ ಗಮನಾರ್ಹವಾದ ಒಂದು ವೈಶಿಷ್ಟ್ಯವೆಂದರೆ ಅನುಸ್ವಾರವನ್ನು ಸೂಚಿಸಲು ಅಕ್ಷರದ ಮೇಲೆ ಹಾಗೂ ಮುಂದಿನ ಅಕ್ಷರರ ದ್ವಿತ್ವವನ್ನು ಸೂಚಿಸಲು ಅಕ್ಷರದ ಬಲಭಾಗದಲ್ಲಿ ಬಿಂದುವನ್ನು ಬಳಸಿರುವುದು."[14]

ಹಿರೇ ಬಾಸೂರು ಶಾಸನವು (ಕ. 243) ವೀರಗಲ್ಲೊಂದರ ಮೇಲಿದ್ದು, ಸು. ಕ್ರಿ.ಶ. 899ಕ್ಕೆ ಸೇರಿದುದು. ಗಂಗಪೆರ್ಮಾನಡಿಯ ಆಳ್ವಿಕೆಗೆ ಇದು ಸೇರಿದೆ. ಈ ದೊರೆ ಪ್ರಾಯಶಃ ಎರಡನೆಯ ರಾಚಮಲ್ಲನಿರಬೇಕು. ಮಾರಸಿಂಗಗಾಮುಂಡ ಎಂಬಾತ ನೊಳಂಬ ಪ್ರಭುವಿನ ವಿರುದ್ಧ ಹೋರಾಡಿದಂತೆ ತೋರುತ್ತದೆ. ಮರಣೋತ್ತರವಾಗಿ ಆ ವೀರನಿಗೆ ಬಾಸನೂರು ಗ್ರಾಮವನ್ನು ದಾನ ನೀಡಲಾಯಿತು. ಆಸಂದಿನಾಡಿನ ಉಲ್ಲೇಖವಿದೆ. ವೀರಗಲ್ಲಿಗೆ ಹಾನಿಯಾಗಿದ್ದು ವಿವರಗಳು ದೊರೆಯುವುದಿಲ್ಲ.

ಗಂಗ ಬೂತುಗನ ಅಕ್ಕ ಪಾಂಬಬ್ಬೆ ಪಡಿಯರ ಧೋರ (ಕ. 34). ಆಕೆ ಜೈನಧರ್ಮದ ನಿಷ್ಠಾವಂತ ಅನುಯಾಯಿ. ಕೊಂಡಕುಂದಾನ್ವಯ ಮತ್ತು ದೇಸಿಯಗಣದ ಅಭಯನಂದಿಪಂಡಿತದೇವರ ಶಿಷ್ಯೆಯಾದ ನಾಣಬ್ಬೆಕಂತಿಯ ಶಿಷ್ಯೆ ಈಕೆ. ಮೂವತ್ತು

ವರ್ಷಗಳ ಕಾಲ ತಪಸ್ಸನ್ನು ಆಚರಿಸಿದ ಪಾಂಬಬ್ಬೆ 'ಉಚ್ಚಮ ಠಾಣ' (ಪರಮಸ್ಥಾನ) ಪಡೆದಳಂತೆ. ಈ ಶಾಸನದ ಕಾಲ ಕ್ರಿ.ಶ. 971. ಕ್ರಿ.ಶ. 972ರ ಆಸಂದಿ ಶಾಸನವು ತುರುಗಾಳಗವೊಂದರಲ್ಲಿ ಮಾರಸಿಂಗ ಎಂಬ ವೀರನು ನರಗನ ವಿರುದ್ಧ ಹೋರಾಡಿ ಆತನನ್ನು ಕೊಂದು ಅವನ ಕುಟುಂಬವನ್ನು ನಿರ್ಮೂಲ ಮಾಡಿದ ವಿಷಯವನ್ನು ನಿರೂಪಿಸುತ್ತದೆ ; ಮೃತನಾದ ನರಗನ ದಬ್ಬಾಳಿಕೆಯ ವಿರುದ್ಧ ಗಂಗ ದೊರೆಗೆ ತಗುರೆನಾಡಿನ ಮಹಾಜನರು ಮನವಿಯೊಂದನ್ನು ಸಲ್ಲಿಸಿದ್ದರಂತೆ. ಕ. 181 ಮತ್ತು 182 ಮಲ್ಲೇಶ್ವರದಲ್ಲಿ ಇರುವ ಶಾಸನಗಳು; ಲೋಕ ವಿದ್ಯಾಧರ ಅಥವಾ ವಿದ್ಯಾಧರಯ್ಯನ ಬಗ್ಗೆ ಅವು ಉಲ್ಲೇಖಿಸುತ್ತವೆ.

ಆಸಂದಿಯ ಗಂಗರು

ಗಂಗರು ತಮ್ಮ ಎಲ್ಲ ಪ್ರದೇಶಗಳನ್ನೂ ಕಳೆದುಕೊಂಡು ಹೊಯ್ಸಳರ ಸಾಮಂತ ಪ್ರಭುಗಳಾಗಿ ಆಸಂದಿನಾಡಿನಲ್ಲಿ ಆಳುತ್ತಿದ್ದರು. ಆಸಂದಿ ಅವರ ಆಡಳಿತ ಕೇಂದ್ರವಾಗಿತ್ತು. ಕ್ರಿ.ಶ. 1091ರ ತೇದಿಯ ಅರುವನಹಳ್ಳಿ ಶಾಸನವು (ತ. 4) ಗಂಗ ವಂಶದ ಆಸಂದಿ ಶಾಖೆಗೆ ಸೇರಿದ ಅತಿ ಪ್ರಾಚೀನ ದಾಖಲೆ. ಆದರೆ, ಮಹಾರಾಜಾಧಿರಾಜ, ಕೋಳಾಲಪುರವರಾಧೀಶ್ವರ, ನಂದಗಿರಿನಾಥ ಮೊದಲಾದ ಸಾಂಪ್ರದಾಯಿಕ ಬಿರುದುಗಳನ್ನು ಇನ್ನೂ ಅವರು ಧರಿಸುತ್ತಿದ್ದರು. ಈ ಬಿರುದುಗಳು ಅರ್ಥ ಕಳೆದುಕೊಂಡಿದ್ದವು. ವೈಜಲದೇವಿಯು ವೈಜರಸನ ಹಿರಿಯ ರಾಣಿಯಾಗಿದ್ದಳು. ಮಹಾಮಂಡಳಿಕ ವೈಜರಸನು ಆಸಂದಿಯಿಂದ ಆಳುತ್ತಿದ್ದಾಗ, ಆಲಗೌಡ ಮತ್ತು ಆತನ ಮಗ ಕಾಳಗೌಡ ಕೆಲವು ಭೂಪ್ರದೇಶಗಳನ್ನು ಮತ್ತು ಗಾಣವೊಂದನ್ನು ಅಮೃತಶಕ್ತಿಪಂಡಿತನಿಗೆ ದಾನ ನೀಡಿದನು. ಶಿವಭಕ್ತನಾದ ಕಾಳಗೌಡನಿಗೆ 'ಹೆರಗೆ ಹಳಿವರಗಂಡ' ಎಂಬ ವಿಶಿಷ್ಟ ವಿಶೇಷಣವೊಂದಿತ್ತು. ಆಗ ಆಳುತ್ತಿದ್ದ ಹೊಯ್ಸಳ ದೊರೆ ವಿನಯಾದಿತ್ಯ. ಶಾಸನದಲ್ಲಿ ಜಗದೇಕಮಲ್ಲನ 39ನೆಯ ಆಳ್ವಿಕೆಯ ವರ್ಷವನ್ನು ನಮೂದಿಸಿದೆ.

ಬಂಕನಕಟ್ಟೆಯ ಶಾಸನವೊಂದರ (ತ. 62) ತೇದಿ ಕ್ರಿ.ಶ. 1104. ಗಂಗ ರಾಜ ಬಿರುದುಗಳೆಲ್ಲವನ್ನೂ ಹೊಂದಿದ ನಾಡರಸನನ್ನು ಈ ಶಾಸನವು ಉಲ್ಲೇಖಿಸುತ್ತದೆ. ತ್ರಿಭುವನಮಲ್ಲ ಪೊಯ್ಸಳದೇವ ಆತನ ಅಧಿರಾಜ; ಆತನನ್ನು ಒಂದನೆಯ ಬಲ್ಲಾಳನೆಂದು ಗುರುತಿಸಿದೆ. ಮುಂದಿನ ಗಂಗ ದೊರೆ ಬಮ್ಮರಸ; ಬುಕ್ಕಾಂಬುಧಿಯ, ಕ್ರಿ.ಶ. 1129ರ ಶಾಸನದಲ್ಲಿ (ತ. 72) ಈತನನ್ನು ಬಣ್ಣಿಸಿದೆ. ಈತ ಅರಘಟ್ಟದಲ್ಲಿ ಕೆರೆಯೊಂದನ್ನು ತೋಡಿಸಿದ, ರಾಮೇಶ್ವರ ದೇವಾಲಯವನ್ನು ಕಟ್ಟಿಸಿದ ಹಾಗೂ ದೇವರ ಸೇವೆಗೆ ಭೂಮಿ ದಾನವನ್ನು ಮಾಡಿದ. ಅರಘಟ್ಟವು ಅಲ್ಲಿನ ರಾಮೇಶತೀರ್ಥ ಎಂಬ ತಟಾಕದಿಂದಾಗಿ ಪ್ರಖ್ಯಾತವಾಯಿತು. ಕ್ರಿ.ಶ. 1172ರ ಮುದಿಗೆರೆ ಶಾಸನದಲ್ಲಿ (ತ. 80) ಬಮ್ಮನನ್ನು ಬಣ್ಣಿಸಲಾಗಿದೆ. ಈತ ವೈಜರಸ ಮತ್ತು ವೈಜಲದೇವಿಯರ ಮಗ. ಈತ ಮರಣ ಹೊಂದಿದಾಗ, ಈತನ ಸೇವಕ ಲೆಂಕರಗಂಡ ಎನಿಸಿದ ಬಮ್ಮಯನಾಯಕನು "ಸಗ್ಗದ ಹಾದಿಯನ್ನು" ತೋರಿಸಿದನೆಂದು ಹೇಳಲಾಗಿದೆ ! ಈ ವೀರನ ಮಗ ಹರಿಯಮನಾಯಕನು ವೀರಗಲ್ಲನ್ನು ನಿಲ್ಲಿಸಿದ (ಕ. 19).

ಮುಂದಿನ ದೊರೆ ನರಸಿಂಹ. ಆಸಂದಿಯ ಕ. 16 ಮತ್ತು 17ನೆಯ ಶಾಸನಗಳ ಕಾಲ. ಕ್ರಿ.ಶ. 1191. ಇವೆರಡೂ ಶಾಸನಗಳು ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಆಳ್ವಿಕೆಯ ಕಾಲಕ್ಕೆ ಸೇರಿದವು. ಮೊದಲನೆಯ ಶಾಸನದಲ್ಲಿ ಹೊಯ್ಸಳ ದೊರೆಗಳ ಪ್ರಶಂಸೆ ಇದೆ. ಗಂಗ ದೊರೆಗಳಾದ ವೈಜರಸ, ಬಮ್ಮ ಮತ್ತು ನಾರಸಿಂಗರನ್ನು ಹೊಗಳಲಾಗಿದೆ. ವೈಜರಸನು ಎರೆಯಂಗ ದೊರೆಗೆ ಸೇವೆ ಸಲ್ಲಿಸಿದನೆಂದು ಹೇಳಲಾಗಿದೆ. ಆತನ ಸಾಧನೆಯೊಂದನ್ನು ಹೀಗೆ ದಾಖಲಿಸಲಾಗಿದೆ: ಅಗ್ಗದರಾಯನೆಂಬಾತ ಬೇಡರಬಂಕಿ ಅರಣ್ಯದೊಳಕ್ಕೆ ಓಡಿಹೋದಾಗ (ಚಾಲುಕ್ಯ ರಾಜ) ಪೆರ್ಮಾಡಿಯ ಎದುರಿನಲ್ಲಿ ವೈಜರಸನು ತನ್ನ ಬಿಲ್ಲಿನಿಂದ ಬಿಟ್ಟ ಬಾಣವೊಂದು ಅಗ್ಗದರಾಯನ ತಲೆಯನ್ನು ಉರುಳಿಸಿ, ನಿಲ್ಲದೆ ಆಕಾಶದಲ್ಲಿ ಹಾರುತ್ತಿದ್ದ ಒಂದು ಹದ್ದಿನ ಕಣ್ಣಿಗೆ ಹೊಡೆಯಿತಂತೆ ! ಅಲ್ಲಿ ನೆರೆದಿದ್ದ ಎಲ್ಲ ಜನರೂ ಆತನ ಪರಾಕ್ರಮಕ್ಕೆ ಬೆರಗಾದರಂತೆ. ರಾಜನು ಆತನಿಗೆ 'ಕಣ್ಣಂಬು' ಎಂಬ ಬಿರುದನ್ನು ದಯಪಾಲಿಸಿದನಂತೆ. ಈ ವೈಜರಸನ ಮಗ ಶ್ರೀನಾಥ; ಆತನ ಪತ್ನಿ ನಾಗಲೆ. ಅವರಿಬ್ಬರ ಮಗ ವೈಜ; ವೈಜನ ಹೆಂಡತಿ ವೈಜಲದೇವಿ, ಪದ್ಮಾವತಿದೇವಿಯ ಭಕ್ತೆ. ಬರ್ಮ್ಮನು ಅವರ ಮಗ; ಈತನನ್ನು ಪ್ರಶಂಸಿಸಲಾಗಿದೆ; ಗಂಗಮಾದೇವಿಯು ಬರ್ಮ್ಮನ ಪತ್ನಿ. ಅವರ ಮಗ ನರಸಿಂಹ. ಹೊಯ್ಸಳ ದೊರೆಯ ಆದೇಶದ ಮೇರೆಗೆ ಈತ ಗೂರ್ಜ್ಜರ, ಚೋಳ, ಮಾಳವ, ಲಾಳ ಮತ್ತು ಚೋಳ ರಾಜರ ವಿರುದ್ಧ ಹೋರಾಡಿ, ಗೆಲುವನ್ನು ಸಾಧಿಸಿದ. ಆತನ ಬಿರುದುಗಳನ್ನೂ ವಿಶೇಷಣಗಳನ್ನೂ ನೀಡಲಾಗಿದೆ. ಆತನ ತಂದೆತಾಯಿಗಳು 'ಸ್ವರ್ಗ್ಗಗಾಮಿ'ಗಳಾದಾಗ, ಆತ ಪಿಂಡಪ್ರದಾನಾದಿ ಉತ್ತರ ಕ್ರಿಯೆಗಳನ್ನು ಮಾಡಿ, ಒಬ್ಬ ವ್ಯಕ್ತಿಯನ್ನು ಶ್ರೀಪರ್ವತ ಮತ್ತು ಪಾತಾಳಗಂಗೆಗೆ ಕಳುಹಿಸಿದನಂತೆ; ಅಲ್ಲಿಂದ

ಲಿಂಗಸಲಾಕೆಗಳನ್ನು ತರಿಸಲಾಯಿತು; ಬ್ರಹ್ಮೇಶ್ವರ ಮತ್ತು ಗಂಗೇಶ್ವರ ದೇವಾಲಯಗಳನ್ನು ಕಟ್ಟಿಸಿ ಅವುಗಳನ್ನು ರಾಜಗುರು ಕ್ರಿಯಾಶಕ್ತಿದೇವ ಮತ್ತು ಸೇನಬೋವ ಕಲ್ಯಾಣದೇವರ ವಶಕ್ಕೆ ಒಪ್ಪಿಸಲಾಯಿತು; ದೇವರ ಸೇವೆಗೆ ಭೂದಾನ ನೀಡಲಾಯಿತು. ಹಾಗೆಯೇ ಆಸಂದಿಯ ದಕ್ಷಿಣಕ್ಕಿರುವ ಸೇನಬೋವನಹಳ್ಳಿ ಮತ್ತು ಕಾರೆಯಹಳ್ಳಿಗಳನ್ನು ದಾನ ನೀಡಲಾಯಿತು (ಕ. 17). ಅಕ್ಕರದೊಣೆ ಮತ್ತು ರಕ್ಕಸಿಯ ದೊಣೆಗಳಂಥ ಕೆಲವು ಸ್ಥಳಗಳು ನಮ್ಮ ಕುತೂಹಲ ಕೆರಳಿಸುವಂತಿವೆ. ಈ ನಾರಸಿಂಹನನ್ನು ಕ. 15 ಉಲ್ಲೇಖಿಸುತ್ತದೆ. ಈತ ಕ್ರಿ.ಶ. 1202ರಲ್ಲಿ ಪಾಲನೆಮಾಡುತ್ತಿದ್ದ (ಕ. 21); ಹೊಯ್ಸಳ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಕೂಡ ಈತ ಅಧಿಕಾರದಲ್ಲಿದ್ದಂತೆ ತೋರುತ್ತದೆ (ತ. 1).

ಸಾಂತರ

ಮಾಚೇನಹಳ್ಳಿ ತಾಮ್ರಶಾಸನವು (ತ. 103) ಮೈಸೂರು ಪುರಾತತ್ವ ಇಲಾಖೆಯ 1908ನೆಯ ವರ್ಷದ ವರದಿಯಲ್ಲಿ ಪ್ರಕಟವಾಗಿದ್ದರೂ ವಿದ್ವಾಂಸರು ಅದನ್ನು ಗಮನಿಸಿದಂತಿಲ್ಲ.[15] ಈ ಶಾಸನವು ಮೂರು ಹಲಗೆಗಳಿಂದ ಕೂಡಿದ್ದು, "ಪ್ರತಿಯೊಂದೂ 8¼" x 2¼" ಅಳತೆಯದಾಗಿದೆ. ಅವು ಉತ್ತಮ ಸ್ಥಿತಿಯಲ್ಲಿ ರಕ್ಷಿತವಾಗಿವೆ. ಹಳಗನ್ನಡ ಲಿಪಿಯಲ್ಲಿರುವ ಈ ಶಾಸನದ ಕಂಡರಣೆ ಉತ್ತಮವಾಗಿದೆ. ಒಂದನೆಯ ಮತ್ತು ಮೂರನೆಯ ಹಲಗೆಗಳ ಒಳಮುಖಗಳಲ್ಲಿ ಮಾತ್ರ ಬರವಣಿಗೆ ಇದೆ. ಹಲಗೆಗಳನ್ನು ಉಂಗುರವೊಂದರಲ್ಲಿ ಪೋಣಿಸಲಾಗಿದ್ದು ಅದು 2¼" ವ್ಯಾಸ ಮತ್ತು ¼" ದಪ್ಪ ಉಳ್ಳದ್ದಾಗಿದೆ; ಅದರ ಕೊನೆಗಳನ್ನು ಸೇರಿಸಿದ 1¼" ವ್ಯಾಸದ ತಳಭಾಗವುಳ್ಳ ವೃತ್ತಾಕಾರದ ಮುದ್ರೆ ಇದೆ. ಮುದ್ರೆಯ ಮೇಲೆ ನೇರ ಬಲಭಾಗಕ್ಕೆ ಮುಖಮಾಡಿದ, ನಿಂತಿರುವ ಭಂಗಿಯ ಸಿಂಹದ ಉಬ್ಬು ಕೆತ್ತನೆ ಇದೆ. ಪಟೇಲ್ ಶಿವಪ್ಪ ಎಂಬಾತನಿಗೆ ಮಾಚೇನಹಳ್ಳಿಯಲ್ಲಿನ ಆಂಜನೇಯ ದೇವಾಲಯದ ಪಶ್ಚಿಮದಲ್ಲಿದ್ದ ತನ್ನ ಹೊಲವನ್ನು ಉಳುತ್ತಿರುವಾಗ ಈ ತಾಮ್ರಪಟಗಳು ಕಂಡುಬಂದವು"[16]

ವಿನಯಾದಿತ್ಯ ಪೃಥ್ವೀವಲ್ಲಭ ಚಾಂತರಾಜನೆನಿಸಿದ ಜಯಸಂಗ್ರಹನಿಗೆ ಈ ಶಾಸನವು ಸೇರಿದುದು. ಆತ 'ಕಾಲಿನ್ದೀಮೇಖಲಮಧುರಾಪುರೀಶ್ವರ' ಎನಿಸಿದ್ದ. ಉಗ್ರವಂಶಕ್ಕೆ ಸೇರಿದವನಾದ ಆತ ಯದುವಂಶದವರೊಡನೆ ವೈವಾಹಿಕ ಸಂಬಂಧ ಬೆಳೆಸಿದ್ದನೆಂದು ಹೇಳಿದೆ. ಕಿಳ್ಕುಂದದ ಮಂಡಳಿಕನ ಮಗಳು ಕನಗರೆತ್ತಿ; ಆಕೆ ಕಾಶ್ಯಪಗೋತ್ರದ ಕಂಗುಗೊಗ್ಗಟ್ಟ-ಮಹಾಮಂಡಳಿಕ ಪಾಂಡಿಯುವರಾಜನ ಪತ್ನಿ. ಆಕೆ ಪ್ರಾಯಶಃ ಮುದುವಕ್ಕ ಗ್ರಾಮವನ್ನು ದಾನ ಮಾಡಿದಳು. ಮಿರಿಜವಳಿ, ಪೊರಣಿಮೊಗೆ, ಕಿಳ್ಕೆರೆ, ಗುಡಗತಾಣಂ, ನೊಕ್ಕಿಗೋಡು, ಮಣಲಿಮಕ್ಕಿ ಮುಂತಾದ ಸ್ಥಳಗಳನ್ನು ಈ ಶಾಸನದಲ್ಲಿ ಉಲ್ಲೇಖಿಸಿದೆ. ದಾನವನ್ನು ಸ್ವೀಕರಿಸಿದ್ದು ಯಾರೆಂಬುದು ಒಂದು ಗೊತ್ತಾಗುವುದಿಲ್ಲ. ಆದರೆ "ದಾನ ನೀಡುವ ಮೊದಲು ನಾಲ್ಕು ವರ್ಗಗಳವರಿಗೆ - ಕರಣಿಗ, ಕುಂಬಾರರು, ನಾಪಿತರು ಹಾಗೂ ಅಂಬಿಗರು (?)- ಮತ್ತು ಇತರರಿಗೆ ವಿಷಯವನ್ನು ತಿಳಿಸಲಾಗಿತ್ತು; ಇವರೆಲ್ಲ ಮಣವಾಳ್ಗೊಳ, ಮಂಗಿಯರ್ನಿಧಿಪುರ, ಮಣಲಿನೆರೆಂಟೂರು ಮತ್ತು ಪಡೆಪರ್ - ಈ ಗ್ರಾಮಗಳ ನಿವಾಸಿಗಳಾಗಿದ್ದರು" ಎಂಬ ಅಂಶ ಕುತೂಹಲ ಕೆರಳಿಸುವಂತಿದೆ.[17]

ಶಾಂತರ ಎಂಬ ಶಬ್ದವನ್ನು ಇಲ್ಲಿ ಚಾನ್ತ ಎಂದು ಕೊಟ್ಟಿದೆ. ಈ ವಂಶದ ಜಿನದತ್ತ ಎಂಬಾತ ಉತ್ತರದಿಂದ (ಮಥುರಾ) ದಕ್ಷಿಣಕ್ಕೆ ವಲಸೆ ಬಂದು ಪೊಂಬುಚ್ಚ ಎಂಬಲ್ಲಿ ನೆಲಸಿದನೆಂದು ಹೇಳಲಾಗಿದೆ (ಕ್ರಿ.ಶ. 1077ರ ನಗರ -35). ಪ್ರಸ್ತುತ ಶಾಸನವಾದರೋ ಪೊಂಬುಚ್ಚದ ಪ್ರಸ್ತಾಪವನ್ನೇ ಮಾಡದೆ ಮಥುರಾವನ್ನೇ ಉಲ್ಲೇಖಿಸುವುದನ್ನು ಗಮನಿಸಬೇಕು. ರೈಸ್ ಅವರ ಪ್ರಕಾರ ಜಿನದತ್ತ ಕ್ರಿ.ಶ. 8ನೆಯ ಶತಮಾನಕ್ಕೆ ಸೇರಿದವನು.[18] ಆದ್ದರಿಂದ ಜಯಸಂಗ್ರಹನಿಗೆ ಇನ್ನೂ ಹಿಂದಿನ ತೇದಿಯನ್ನು ನೀಡಬೇಕಾಗುತ್ತದೆ. ಕೆಲವು ಸಾಂತರ ಶಾಸನಗಳಲ್ಲಿ ಸಾಂತರರು ಪೊಂಬುಚ್ಚವಲ್ಲದೆ ಮಧುರಾಪುರಾಧೀಶ್ವರರೆಂದು ವರ್ಣಿಸಲ್ಪಟ್ಟಿದ್ದಾರೆ. ಜಯಸಂಗ್ರಹನಿಗೆ ವಿಶೇಷಣವಾಗಿ ಬಂದಿರುವ ವಿನಯಾದಿತ್ಯ ಪೃಥ್ವೀವಲ್ಲಭ ಎಂಬುದು ಕೂಡಲೆ ವಾತಾಪಿಯ ಚಾಲುಕ್ಯ ದೊರೆ ವಿನಯಾದಿತ್ಯನನ್ನು (ಕ್ರಿ.ಶ. 681-696) ನಮ್ಮ ನೆನಪಿಗೆ ತರುತ್ತದೆ. ಪ್ರಾಯಶಃ ಆತ ಜಯಸಂಗ್ರಹನ ಅಧಿರಾಜನಾಗಿದ್ದಿರಬೇಕು. ಆದ್ದರಿಂದ ಈ ಶಾಸನವನ್ನು 7ನೆಯ ಶತಮಾನದ ಕೊನೆಯ ಪಾದಕ್ಕೆ ಅನ್ವಯಿಸಬಹುದು. ಲಿಪಿಶಾಸ್ತ್ರೀಯವಾಗಿ ಕೂಡ ಈ ತೇದಿಯನ್ನು ಪುಷ್ಟೀಕರಿಸಬಹುದು.

ನಾಲ್ಕು ಶತಮಾನಗಳ ತೆರಪಿನ ತರುವಾಯ ಕಂಡುಬರುವುದು ನಾಗಲಾಪುರದ ಶಾಸನ (ಕೊ. 46). ಹೊಸದಾಗಿ ಅನ್ವೇಷಿತವಾದ ಈ ವೀರಗಲ್ಲು ಶಾಸನವು ಆರನೆಯ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದುದು. ಸಾನ್ತರ ಮಾರಯ್ಯದೇವನು ಈ ಪ್ರದೇಶವನ್ನು

ಪಾಲಿಸುತ್ತಿದ್ದ. ಮೂರು ಜನ ವೀರರಿಗೆ 'ಯುದ್ಧಪರಿಹಾರ'ವಾಗಿ ಹಣ ಮತ್ತು ಭೂಮಿಗಳನ್ನು ಆತ ದಾನವಿತ್ತ. ಆತನ ವಿಶೇಷಣಗಳಲ್ಲಿ 'ಮಲಪರದೇವ' ಎಂಬುದು ನಮ್ಮ ಗಮನ ಸೆಳೆಯುತ್ತದೆ. ಈ ಸಾಂತರ ದೊರೆಯು ಶೈವಧರ್ಮಾನುಯಾಯಿಯಾಗಿದ್ದಂತೆ ತೋರುತ್ತದೆ. ಈ ಶಾಸನದ ಕಾಲ ಕ್ರಿ.ಶ. 1085.

ಆದರೆ, ಇದೇ ಕಾಲದಲ್ಲಿ ಜೈನಧರ್ಮಾನುಯಾಯಿಯಾದ ಇನ್ನೊಬ್ಬ ಮಾರನೂ ಈ ಪ್ರದೇಶದಲ್ಲಿದ್ದ. ಈ ಪ್ರಭು ವಾದೀಭಸಿಂಹನೆನಿಸಿದ ಅಜಿತಸೇನನ ಅಗ್ರ ಶಿಷ್ಯನಾಗಿದ್ದ (ನಪು. 34); ಈತ ಪಾವಿತ್ರ್ಯದಲ್ಲಿ ಭೀಷ್ಮನೆನಿಸಿದ್ದನಂತೆ (ನಪು. 33). ಈತನ ತಂದೆ ಮಯೂರವರ್ಮ ಹಾಗೂ ತಾಯಿ ದತ್ತಾಳ್ವ ವಂಶದ ವಿನಯಾದಿತ್ಯನ ಸೋದರಿ (ನಪು. 32).

ಶಿಂಸೆಯ ಒಂದು ಶಾಸನದಲ್ಲಿ (ನಪು. 37) ವೀರ ಸಾಂತರದೇವನ ಉಲ್ಲೇಖವಿದೆ. ಆತನ ಪಿರಿಯರಸಿ ಮತ್ತು ಪಟ್ಟಮಹಿಷಿಯಾದ ಬಾಚಲದೇವಿಯು ಸಲ್ಲಿವಾಳರ ಕುಲದಿಂದ ಬಂದವಳಾಗಿದ್ದಳು. ಆಕೆ ಶ್ರೀವಲ್ಲಭನ ಸೊಸೆ; ಈತ ಕ್ರಿ.ಶ. 1147ರಿಂದ 1156ರವರೆಗೆ ರಾಜ್ಯವಾಳಿದಂತೆ ತೋರುತ್ತದೆ. ಈತನ ಅಕ್ಕ ಪಂಪಾದೇವಿ; ಆಕೆಯ ಮಗಳೇ ಬಾಚಲದೇವಿ.[19] ಪಂಪಾದೇವಿಯು ತನ್ನ ತಮ್ಮನೊಡನೆ ಸೇರಿ ಸಾಂತರ ಪ್ರದೇಶವನ್ನು ಆಳುತ್ತಿದ್ದಳು. ಆಕೆ ಸಲ್ಲಿವಾಳರ ಕುಲದ ಅಧಿಪನೊಬ್ಬನನ್ನು ಪ್ರಾಯಶಃ ಮದುವೆಯಾಗಿದ್ದಿರಬೇಕು. ರೈಸ್ ಅವರು ತಿಳಿಸುತ್ತಾರೆ : "ಸಲ್ಲಿವಾಳ ಎಂಬುದು ಆಳರ ಅಥವಾ ಆಳ್ವರ ಇನ್ನೊಂದು ವಂಶಶಾಖೆಯೇ ಎನ್ನುವುದನ್ನು ಹೇಳುವುದು ಕಷ್ಟ".[20] ಶ್ರೀವಲ್ಲಭನ ಮಗ ವೀರ ಸಾಂತರನು ತನ್ನ ಸೋದರತ್ತೆಯ ಮಗಳಾದ ಬಾಚಲದೇವಿಯನ್ನು ಮದುವೆಯಾದನು. ಪ್ರಾಯಶಃ ಬಾಚಲದೇವಿಯು ಸಿಮ್ಮಿಸೆಯ ಮಹಾಜನರಿಗೆ ದಾನ ನೀಡಿದಳು, ವೀರಸಾಂತರನು ಕ್ರಿ.ಶ. 1157 ರಿಂದ 1191 ರವರೆಗೆ ರಾಜ್ಯವಾಳಿದಂತೆ ತೋರುತ್ತದೆ.

ಹೊಯ್ಸಳ-ಸಾಂತರ ವಂಶದ (?) ಮರುದೇವನನ್ನು ಕ್ರಿ.ಶ.1162ರ ಆಡುವಳ್ಳಿಯ ಶಾಸನವೊಂದು (ನಪು. 3) ಉಲ್ಲೇಖಿಸುತ್ತದೆ. ಆತನನ್ನು ಮಹಾಮಂಡಲೇಶ್ವರ ಮತ್ತು ಜಗದೇಕವೀರನೆಂದು ಬಣ್ಣಿಸಲಾಗಿದೆ. ಆತನ ಸೋದರಿ ಸಾವಿಯಬ್ಬರಸಿಯ ಸಾವಿನ ಸಂಗತಿಯನ್ನು ಅದು ತಿಳಿಸುತ್ತದೆ. ಜಗದೇಕಮಲ್ಲ ಶಾಂತರಬಲ್ಲಾಳದೇವನ ಆಳ್ವಿಕೆಯನ್ನು ಕೊಳಲೆಯ ಶಾಸನ (ನಪು. 4) ಉಲ್ಲೇಖಿಸುತ್ತದೆ. ಆದರೆ ಈ ದೊರೆಗಳ ಬಗ್ಗೆ ವಿವರಗಳೇನೂ ದೊರೆಯುವುದಿಲ್ಲ. ಎರಡೂ ವೀರಗಲ್ಲು ಶಾಸನಗಳು. ಎರಡನೆಯ ಶಾಸನವನ್ನು ಕ್ರಿ.ಶ. 12ನೆಯ ಶತಮಾನಕ್ಕೆ ಅನ್ವಯಿಸಬಹುದು.

ಕಲ್ಯಾಣದ ಚಾಲುಕ್ಯ

ಈ ವಂಶದ ಅತ್ಯಂತ ಪ್ರಾಚೀನ ಶಾಸನವೆಂದರೆ ನಾಗಲಾಪುರದಲ್ಲಿ ಇರುವ ಕೊ. 46. ಹೊಸದಾಗಿ ಅನ್ವೇಷಿತವಾದ ಈ ಶಾಸನದಲ್ಲಿ ತ್ರಿಭುವನಮಲ್ಲ, ಎಂದರೆ ಆರನೆಯ ವಿಕ್ರಮಾದಿತ್ಯನ ವಿಜಯರಾಜ್ಯದ ಉಲ್ಲೇಖವಿದೆ. ಈ ಶಾಸನದ ಕಾಲ ಕ್ರಿ.ಶ. 1085. ಮುಂದಿನ ಶಾಸನವೆಂದರೆ ಕ್ರಿ.ಶ. 1089ರ ತೇದಿಯ ಗರ್ಜೆಗ್ರಾಮದಲ್ಲಿರುವ ಕ. 76. ಇದರಲ್ಲಿ ಚಾಲುಕ್ಯ ದೊರೆಯು ಹೊಯ್ಸಳರ ಅಧಿರಾಜನಾಗಿ ಉಲ್ಲೇಖಿತನಾಗಿದ್ದಾನೆ. ಕ್ರಿ.ಶ. 19ನೆಯ ಶತಮಾನದ ತ. 29 ವಿಕ್ರಮಾದಿತ್ಯನನ್ನು ಉಲ್ಲೇಖಿಸುತ್ತದೆ. ಆದರೆ ಅಲ್ಲಿ ಯಾವುದೇ ಚಾಲುಕ್ಯ ವಿಶೇಷಣಗಳಿಲ್ಲ. ಉಳ್ಳಿನಾಗೂರಿನ ಕ. 25ರಲ್ಲಿ ಚಾಲುಕ್ಯ ವಿಕ್ರಮ ಶಕೆಯ 2ನೆಯ ವರ್ಷದ ಉಲ್ಲೇಖವಷ್ಟೇ ಉಳಿದಿದೆ.

ಕ್ರಿ.ಶ. 1136ರಲ್ಲಿ ಭೂವಲ್ಲಭ ಪೆರ್ಮಾಡಿಯು ಹೊಯ್ಸಳರ ಅಧಿರಾಜನಾಗಿ ಕಲ್ಯಾಣದಿಂದ ರಾಜ್ಯವಾಳುತ್ತಿದ್ದನು (ಕ. 198). ವಕ್ಕಲಗೆರೆಯ ಕ.197ರಲ್ಲಿ ತ್ರಿಭುವನಮಲ್ಲನ ಆಳ್ವಿಕೆಯ ಉಲ್ಲೇಖವಿದೆ. ಈ ಶಾಸನದ ಕಾಲ ಕ್ರಿ.ಶ. 1138. ಬಿದರೆಯ ಕ. 134ರ ಕಾಲ ಕ್ರಿ.ಶ. 1162; ಇದೇ ಅರಸನದು. ಕ್ರಿ.ಶ. 1172ರ ತ. 80ನೆಯ ಶಾಸನ ಸಪ್ತಾರ್ಧಲಕ್ಷ ಭೂಮಿಯ ಮೇಲೆ ವಿಕ್ರಮಾದಿತ್ಯನ ಆಳ್ವಿಕೆಯನ್ನು ಕುರಿತು ಪ್ರಸ್ತಾಪಿಸುತ್ತದೆ. ವಕ್ಕಲಗೆರೆಯ ಕ್ರಿ.ಶ. 1187-88ರ ಕ. 200 ಭೂವಲ್ಲಭ ಪೆರ್ಮಾನಡಿಯ ಆಳ್ವಿಕೆಗೆ ಸೇರಿದ ಶಾಸನ. ಕ. 201 ಮತ್ತು ಕ.199 ಇದೇ ರಾಜನವಾಗಿದ್ದು ಕ್ರಮವಾಗಿ ಅವುಗಳ ತೇದಿ ಕ್ರಿ.ಶ. 1191 ಮತ್ತು 1202. ಸುಮಾರು ಕ್ರಿ.ಶ. 12-13ನೆಯ ಶತಮಾನಕ್ಕೆ ಸೇರುವ ಜಮ್ಮಾಪುರ ಶಾಸನವು (ಕ. 101) ಇದೇ ಅರಸನ ಆಳ್ವಿಕೆಯ ಕಾಲದ್ದು.

D

ಹೊಯ್ಸಳ

ಹೊಯ್ಸಳರು ಈ ನಾಡಿನ ನೆಲದ ಮಕ್ಕಳು. ಕಲ್ಯಾಣದ ಚಾಲುಕ್ಯರ ಸಾಮಂತರಸರಾಗಿ ತಮ್ಮ ರಾಜಕೀಯ ಜೀವನವನ್ನು ಅವರು ಪ್ರಾರಂಭಿಸಿದರು. ಈ ಸಂಪುಟದ ಶಾಸನಗಳಲ್ಲಿ ಕೂಡ ಸಳನ ಕಥೆ ಬೇರೆ ಬೇರೆ ರೀತಿಯಲ್ಲಿ ನಿರೂಪಿತವಾಗಿದೆ (ಕ. 4, 16, 28, 66, 74, 106, 252; ತ 1,3, 9, 78 ಇತ್ಯಾದಿ). ಬೀರೂರಿನ ಕ. 140 ಈ ಸಂಪುಟದ ಅತ್ಯಂತ ಪ್ರಾಚೀನ ಹೊಯ್ಸಳ ಶಾಸನ. ಅದರ ತೇದಿ ಕ್ರಿ.ಶ. 1063. ಮಲೆ ಪ್ರದೇಶವೂ ಸೇರಿದಂತೆ ಗಂಗಮಂಡಲವನ್ನು ತ್ರಿಭುವನಮಲ್ಲ ಪೊಯ್ಸಳದೇವ ಎಂದರೆ ವಿನಯಾದಿತ್ಯ ಹಾಗೂ ಆತನ ಮಗ ಎರೆಯಂಗ ಆಳುತ್ತಿದ್ದರು. ಆದರೆ ಶಾಸನದಲ್ಲಿ ಯಾವ ಚಾಲುಕ್ಯ ದೊರೆಯ ಹೆಸರೂ ಇಲ್ಲ. ಪ್ರಾಯಶಃ ಪಾಳು ಬಿದ್ದಿದ್ದ ಎರೆಯಕೆರೆ, ಮಚ್ಚೇರು ಮತ್ತು ತೆಲ್ಲಿಗನಕೆರೆ ಎಂಬ ಗ್ರಾಮಗಳನ್ನು ಹೊಯ್ಸಳ ದಂಡನಾಯಕ ಪೋಚಿಮಯ್ಯ ಜೀರ್ಣೋದ್ಧಾರ ಮಾಡಿ ತನ್ನ ಆಡಳಿತದ ಪುರಗಳನ್ನಾಗಿ ಮಾಡಿದ. ಪೋಚೇಶ್ವರದೇವಾಲಯವನ್ನು ಕೆರೆತೂಬುಬಾವಿಗಳನ್ನೂ ಆತ ಮಾಡಿಸಿದನಂತೆ. ದೇವಾಲಯಕ್ಕೆ ಭೂದಾನ ನೀಡಲಾಯಿತು. ಪ್ರತಿಗ್ರಹಿ ಅಮೃತರಾಶಿ, ಗಂಗರಾಶಿಯ ಮಗ.

ವಿನಯಾದಿತ್ಯ ಸಳನ ಮಗನೆಂದು ಕ. 28 ತಿಳಿಸುತ್ತದೆ (ಸಳಭೂಪಾಳಾತ್ಮಜಾತಂ ವಿನಯಾದಿತ್ಯ ಪ್ರಿಥ್ವೀನಿಜೇಶಂ).[21] ಆದರೆ ಸೊಸೆವೂರಿನಿಂದ ಅನೇಕ ರಾಜರು ಆಳಿದರೆಂದು ಶಾಸನಗಳಲ್ಲಿ ಹೇಳಿರುವುದುಂಟು (ಉದಾಹರಣೆಗೆ ಕ. 147). ಅಲ್ಲದೆ, ಕರುಗುಂದ ಶಾಸನದಲ್ಲಿ ವಿನಯಾದಿತ್ಯನು ನೃಪಕಾಮನ ಮಗನೆಂದು ಸ್ಪಷ್ಟವಾಗಿ ತಿಳಿಸಿದೆ.[22] ಕ್ರಿ.ಶ. 1089ರ ಗರ್ಜೆಯ ಶಾಸನದಲ್ಲಿ (ಕ. 76) ವಿನಯಾದಿತ್ಯನು ಚಾಲುಕ್ಯ ಸಾಮಂತರಸನಾಗಿ ಉಲ್ಲೇಖಿತನಾಗಿದ್ದಾನೆ. ದ್ವಾರಾವತೀಪುರವರಾಧೀಶ್ವರ ಎಂದು ಆತನನ್ನು ವರ್ಣಿಸಲಾಗಿದೆ. ಗ್ರಾಮದ ಮೂಲಸ್ಥಾನ ದೇವಾಲಯವನ್ನು ದಿವ್ಯಶಕ್ತಿಪಂಡಿತ ಕಟ್ಟಿಸಿದ. ಕಿರಿಯ ಗರಾಜೆಯನ್ನು ಪಾಲಿಸುತ್ತಿದ್ದ ಉದೆಯಾದಿತ್ಯನಾಯಕ ಮತ್ತು ಇತರರು ಭೂಮಿದಾನ ನೀಡಿದರೆ, ಕೆಳೆಯಬ್ಬೆಗಾವುಂಡಿ ಎಂಬಾಕೆ ದೇವರ ನಂದಾದೀವಿಗೆಗೆ ಗಾಣವೊಂದನ್ನು ದಾನವಿತ್ತಳು. ಇದೇ ವರ್ಷಕ್ಕೆ ಸೇರಿದ ಕ. 192 ಎಳಂಬುಣಸೆಯ ಗಂಗೇಶ್ವರದೇವರಿಗೆ ಭೂದಾನವೊಂದನ್ನು ನೀಡಿದ ವಿಷಯವನ್ನು ನಿರೂಪಿಸುತ್ತದೆ. ಆದರೆ ದಾನಿಯ ಹೆಸರು ನಷ್ಟವಾಗಿದೆ; ಮಹಾಸಾಮಂತ ಬಮ್ಮಯ ಮತ್ತು ಆತನ ಪತ್ನಿ ಬಾಗಣಬ್ಬೆಯರ ಉಲ್ಲೇಖವಿದೆ. ಅನುವನ ಹಳ್ಳಿಯ ತ. 4ನೆಯ ಶಾಸನದ ತೇದಿ ಕ್ರಿ.ಶ. 1091. ಆಸಂದಿಯ ಗಂಗರಿಗೆ ಸಂಬಂಧಿಸಿದ ಅತಿ ಪ್ರಾಚೀನ ಶಾಸನ ಇದು. ಅವರು ಕೆಲವು ದಶಕಗಳ ಕಾಲ ಈ ಪ್ರದೇಶವನ್ನು ಪಾಲಿಸಿದರು. ಆಸಂದಿ ಅವರ ಆಡಳಿತ ಕೇಂದ್ರವಾಯಿತು. ಈ ವಂಶ ಶಾಖೆಗೆ ಸೇರಿದ ವೈಜರಸ ನಮಗೆ ತಿಳಿದುಬರುವ ಪ್ರಾಚೀನತಮ ರಾಜನೆಂದು ಕಾಣುತ್ತದೆ. ಗಡಿಹಳ್ಳಿಯ ಶಾಸನದಿಂದ (ತ. 41) 'ಬಿನಯಾದಿತ್ಯ ಹೊಯ್ಸಳದೇವ' ಕ್ರಿ.ಶ. 1093ರಲ್ಲಿ ಗಂಗವಾಡಿ -96,000 ಪ್ರದೇಶವನ್ನು ಆಳುತ್ತಿದ್ದ ವಿಷಯ ತಿಳಿದುಬರುತ್ತದೆ. ಆದರೆ ಶಾಸನದ ಉತ್ತರ ಭಾಗದಲ್ಲಿ ದೋರಸಮುದ್ರದಿಂದ ಆಳುತ್ತಿದ್ದ ವಿಷ್ಣುವರ್ಧನನ ವಿಶೇಷಣಗಳನ್ನು ನೀಡಲಾಗಿದೆ. ಬೇಲೂರಿನಿಂದ ತ್ರಿಭುವನಮಲ್ಲ ಹೊಯ್ಸಳದೇವ ಆಳುತ್ತಿದ್ದ ಹಾಗೂ ಆತನ ಮಗ ಎರೆಯಂಗ ಯುವರಾಜನಾಗಿದ್ದ ವಿಷಯ ಕೇದಗೆಗೆರೆಯ ಶಾಸನದಿಂದ (ಕ. 73) ಗೊತ್ತಾಗುತ್ತದೆ. ಈ ಶಾಸನದ ಕಾಲ ಕ್ರಿ.ಶ. 1095. ಕೇದಗೆಗೆರೆಯಲ್ಲಿ ಪೆರ್ಗಡೆ ಸೋಮನಾಥಯ್ಯ ಮತ್ತು ಆತನ ಮಗ ಮಧುರಾಂತಕಸೆಟ್ಟಿ ದೇಗುಲ ಮತ್ತು ಬಾವಿಗಳನ್ನು ನಿರ್ಮಿಸಿದ ವಿಷಯವನ್ನು ಅದು ತಿಳಿಸುತ್ತದೆ. ಕ್ರಮವಾಗಿ ಅವರು ಮಹಾಸಂಧಿವಿಗ್ರಹಿ ನಾಗದೇವಯ್ಯನಾಯಕನ ಮಾವ ಮತ್ತು ಭಾವ. ಕೋರಯ್ಯ ಮತ್ತು ಚಾವರಾಜ ಈತನ ಸೋದರರು. ಭೂಮಿ ಮತ್ತು ಒಂದು ಗಾಣವನ್ನು ಈತ ಕ್ರಿಯಾಶಕ್ತಿಪಂಡಿತರಿಗೆ ನೀಡಿದ. ಕ. 35 ಮತ್ತು ತ. 37ರ ಕಾಲ ಕ್ರಿ.ಶ. 1097. ಕಡೂರುಹಳ್ಳಿಯ ಮೊದಲನೆಯ ಶಾಸನದಲ್ಲಿ ಮಲಪರೊಳ್ಗಣ್ಡ ಎನಿಸಿದ ಮಹಾಸಾಮಂತ ಚಟ್ಟಯ್ಯನ ಉಲ್ಲೇಖವಿದೆ. ಕಡವೂರಿನ ಚೆಂದವಗಾವುಂಡ ಚೆಂದವೇಶ್ವರ ದೇವಾಲಯವನ್ನು ಕಟ್ಟಿಸಿ, ಕೆಲವು ಭೂಮಿಕಾಣಿಗಳನ್ನು ಅಘೋರಶಿವಪಂಡಿತರಿಗೆ ದಾನ ನೀಡಿದ. ಕುಂಟನಮಡುವಿನಲ್ಲಿರುವ ಇನ್ನೊಂದು ಶಾಸನವೂ ಮಹಾಪ್ರಭು ಬಮ್ಮಗೌಡನು ತನ್ನ ತಾಯಿ ಎರಕೌವೆಗೌಂಡಿಯ ಸ್ಮರಣಾರ್ಥ ಎರಕೇಶ್ವರ ದೇವಾಲಯವನ್ನು ಕಟ್ಟಿಸಿದ ವಿಷಯವನ್ನು ಉಲ್ಲೇಖಿಸುತ್ತದೆ. ದೇವರ ಸೇವೆಗೆಂದು ಭೂಮಿ ಮತ್ತು ಗಾಣದಾನದ ವಿಷಯವನ್ನು ಅದು ನಿರೂಪಿಸುತ್ತದೆ. ಆದರೆ, ಶಾಸನದಲ್ಲಿ ವಿಷ್ಣುವರ್ಧನನ ಉಲ್ಲೇಖವಿರುವುದರಿಂದ ಅದು ಅನಂತರ ಕಾಲದ್ದಾಗಿರಬೇಕು.

ನೇರವಾಗಿ ಎರೆಯಂಗನ ಆಳ್ವಿಕೆಗೆ ಸಂಬಂಧಿಸಿದ್ದು ಒಂದೇ ಒಂದು ಶಾಸನ (ಕ. 149). ಎರಡು ಕೆರೆಗಳ ನಿರ್ಮಾಣ ವಿಷಯವನ್ನು ಅದು ಪ್ರಸ್ತಾಪಿಸುತ್ತದೆ. ಎರೆಯಂಗನ ಮೂವರು ಮಕ್ಕಳಲ್ಲಿ ಹಿರಿಯವನು ಒಂದನೆಯ ಬಲ್ಲಾಳ. ಕ್ರಿ.ಶ. 1104ರ ಬಂಕನಕಟ್ಟೆ ಶಾಸನದಲ್ಲಿ (ತ. 62) ಉಲ್ಲೇಖಿತವಾದ ತ್ರಿಭುವನಮಲ್ಲ ಪೊಯ್ಸಳದೇವನನ್ನು ಒಂದನೆಯ ಬಲ್ಲಾಳನೆಂದು ಗುರುತಿಸಬಹುದು.

ಆಸಂದಿಯ ಗಂಗ ಪ್ರಭು ನಾಡರಸನನ್ನು ಈ ಶಾಸನ ಉಲ್ಲೇಖಿಸುತ್ತದೆ. ಚಟ್ಟಗವುಂಡನು ತನ್ನ ಪತ್ನಿಯೊಡಗೂಡಿ ಬಂಕೇಶ್ವರ ದೇವಾಲಯವನ್ನು ಕಟ್ಟಿಸಿದ. ಕೆರೆಯೊಂದನ್ನು ತೋಡಿಸಿದ ಹಾಗೂ ದೇವರ ಸೇವೆಗೆ ಭೂಮಿದಾನವನ್ನೂ ಮಾಡಿದ. ದಾನ ಸ್ವೀಕರಿಸಿದವನು ಶಿವಶಕ್ತಿಪಂಡಿತ. ಏಚೋಜನೆಂಬಾತ ದೇವಾಲಯವನ್ನು ಕಟ್ಟಿದ. ಬಾಣೂರು ಅಗ್ರಹಾರದ ಶಾಸನವೊಂದು (ಕ. 127) ಗಂಗವಾಡಿಯನ್ನು ಬಲ್ಲಾಳ ಹೊಯ್ಸಳದೇವನು ಆಳುತ್ತಿದ್ದ ವಿಷಯವನ್ನು ತಿಳಿಸುತ್ತದೆ; ಇದರ ಕಾಲ ಕ್ರಿ.ಶ. 1108. ಆ ಊರಿನ ಶಿವಾಲಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಕಾಳಾಮುಖ ಶೈವಾಚಾರ್ಯ ಗೀರ್ಬ್ವಾಣಶಕ್ತಿಪಂಡಿತ ಭೂದಾನ ಪಡೆದ. ದಾನಿಗಳು ಸಾಮಂತ ಬಮ್ಮಣ ಮತ್ತು ಪೆರ್ಗಡೆ ರಾಜಮಯ್ಯ.

ಉಳ್ಳಿನಾಗೂರಿನ ಕ. 25 ತ್ರಿಭುವನಮಲ್ಲ ಬಿಟ್ಟಿಗನನ್ನು ಉಲ್ಲೇಖಿಸುತ್ತದೆ; ಚಾಲುಕ್ಯ ವಿಕ್ರಮ ಶಕೆಯ 25ನೆಯ ವರ್ಷಕ್ಕೆ ಸೇರಿದ ಈ ಶಾಸನದಲ್ಲಿ ಸ್ಥಳದ ಬಲ್ಲೇಶ್ವರನ ಉಲ್ಲೇಖವಿದೆ. ಕ್ರಿ.ಶ. 1113ರ ತೇದಿಯ ಯಗಟಿ ಶಾಸನೋಕ್ತ (ಕ. 188) ಪೊಯ್ಸಳದೇವ ವಿಷ್ಣುವರ್ಧನನೇ. ಸ್ಥಳದ ಕಲ್ಲೇಶ್ವರ ದೇವಾಲಯವು ಪಚಳಿಕೆನಾಯಕ ಮತ್ತು ಇತರರಿಂದ ನಿರ್ಮಿತವಾಯಿತು. ಭೂದಾನದ ವಿಷಯವೂ ಅದರಲ್ಲಿದೆ. ಅಣಂಗೆರೆಯ ಕ.1 ಇದೇ ಅರಸನು ಬೇಲೂರಿನಿಂದ ಆಳುತ್ತಿದ್ದ ವಿಷಯವನ್ನು ತಿಳಿಸುತ್ತದೆ. ಇದರ ತೇದಿ ಕ್ರಿ.ಶ. 1124. ಮಹಾಸಾಮಂತ ನನ್ನಯ್ಯ ಅಲ್ಲಿನ ಮಲ್ಲಿಕಾರ್ಜುನದೇವರಿಗೆ ದಾನ ನೀಡಿದ. ಮಗರೆನಾಡು-300ರ ಮೊದಲ ಬಾಡ ಕಳಿಕಟ್ಟೆಯ ದೇವರಾಸಿಪಂಡಿತನ ಮಗ ಜ್ಞಾನಶಕ್ತಿಪಂಡಿತನಿಗೆ ಈ ದಾನವನ್ನು ನೀಡಲಾಯಿತು. ಕಳಿಕಟ್ಟೆ ಈಗಿನ ಅರಸೀಕೆರೆ ತಾಲ್ಲೂಕಿನಲ್ಲಿರುವ ಕಣಕಟ್ಟೆ. ಅನೇಕ ಕೆರೆಗಳನ್ನು ಈ ಶಾಸನದಲ್ಲಿ ಹೆಸರಿಸಿದೆ. ಬುಕ್ಕಾಂಬುಧಿಯ ಕ್ರಿ.ಶ. 1129ರ ತ. 72 ವಿಷ್ಣುವರ್ಧನನ ಆಳ್ವಿಕೆಗೆ ಸೇರಿದುದು. ಚಾಲುಕ್ಯರ ಪರಮಾಧಿಪತ್ಯವನ್ನು ಈ ಶಾಸನದಲ್ಲಿ ಉಲ್ಲೇಖಿಸಿಲ್ಲ. ಕೆರೆಸಂತೆಯ ಒಂದು ಹೊಸ ಶಾಸನವು (ಕ. 259) ಕ್ರಿ.ಶ. 1136ರ ಕಾಲದ್ದು; ವಿಷ್ಣುವರ್ಧನನನ್ನು ಚಾಳುಕ್ಯ ಚೂಡಾಮಣಿ ಎಂದು ಉಲ್ಲೇಖಿಸಲಾಗಿದ್ದು, ಆತ ಬಂಕಾಪುರದಿಂದ ಆಳುತ್ತಿದ್ದ ವಿಷಯ ತಿಳಿದುಬರುತ್ತದೆ. ರಾಮೆಯನಾಯಕ ಮತ್ತು ಆತನ ಕುಟುಂಬದವರನ್ನು ಒಳಗೊಂಡಂತೆ ಎಲ್ಲ ಒಡನಾಯಕರು ಅಲ್ಲಿನ ಒಡೇಶ್ವರದೇವರಿಗೆ ಭೂದಾನ ವಿತ್ತುದನ್ನು ಶಾಸನದಲ್ಲಿ ನಿರೂಪಿಸಿದೆ. ಸ್ಥಳದ ಮಹಾಜನರೂ, ನಕರರೂ ಈ ಘಟನೆಯಲ್ಲಿ ಭಾಗವಹಿಸಿದರಂತೆ. ಜ್ಞಾನಶಕ್ತಿಜೀಯ ಈ ದಾನದ ಪ್ರತಿಗ್ರಹಿ. ಅದೇ ವರ್ಷಕ್ಕೆ ಸೇರಿದ ಕ. 198 ವಿಷ್ಣುವರ್ಧನನನ್ನು ಉಲ್ಲೇಖಿಸುತ್ತದೆ. ಆಸಂದಿಯ ಕ. 9ರಲ್ಲಿ ವಿವರವಾಗಿ ಬಿರುದುಗಳನ್ನು ನೀಡಲಾಗಿದೆ. ಆದರೆ ಅದು ಒಂದನೆಯ ನರಸಿಂಹನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ವಕ್ಕಲಗೆರೆಯ ವದ್ದೇಶ್ವರ ದೇವಾಲಯವನ್ನು ಉದೆಯಾದಿತ್ಯ ಅಥವಾ ಒದಿರಾಜನು ಕಟ್ಟಿಸಿದನು. ಆತ ವತ್ಸಗೋತ್ರದ ಶ್ರೀರಂಗ ಮತ್ತು ನಿರುಗಣಬ್ಬೆಯರ ಮಗ; ಸಾಮಂತ ಮಲ್ಲನ ಸೇನಾನಿ. ಮಲ್ಲನ ಮುತ್ತಾತನಾದ ಕರಿಯ ಬಮ್ಮನು ಚಾಲುಕ್ಯ ಚಕ್ರವರ್ತಿ ಆಹವಮಲ್ಲನಿಂದ ಗಂಡತಳಪ್ರಹಾರಿ ಮತ್ತು ದೊಡ್ಡಂಕಬಡಿವ ಎಂಬ ಬಿರುದುಗಳನ್ನು ಪಡೆದಿದ್ದನೆಂದು ಈ ಶಾಸನ ತಿಳಿಸುತ್ತದೆ. ಆತ ತನ್ನ ಮಗನಿಗೆ ಆಹವಮಲ್ಲ ಎಂಬ ಹೆಸರಿಟ್ಟ. ಲಿಂಗದಹಳ್ಳಿಯ ಕ. 197ರ ತೇದಿ ಕ್ರಿ.ಶ. 1138; ಹೆಗ್ಗಡೆ ದಾಸಿಮಯ್ಯನು ಬ್ರಹ್ಮೇಶ್ವರದೇವರಿಗೆ ಭೂಮಿದಾನ ಮಾಡಿದುದನ್ನು ಅದು ದಾಖಲಿಸುತ್ತದೆ. ಪ್ರತಿಗ್ರಹಿ ಅಮೃತರಾಶಿಪಂಡಿತ. ಮಾರನೆಯ ವರ್ಷ, ಹೊಯ್ಸಳ ದೊರೆಯು ದೋರಸಮುದ್ರದಿಂದ ಆಳುತ್ತಿದ್ದ (ಕ. 38) ಹಾಗೂ ಮಹಾಸಾಮಂತ ಚಟ್ಟಯ್ಯ ಹುಳಿಯೆರು-12 ಪ್ರದೇಶದಲ್ಲಿ ಆಡಳಿತ ನಡೆಸುತ್ತಿದ್ದ. ಬ್ರಹ್ಮಶಕ್ತಿ ಎಂಬಾತ ದಾನವೊಂದನ್ನು ಸ್ವೀಕರಿಸಿದ. ಚಟ್ಟಯ್ಯನ ಸಮ್ಮತಿ ಪಡೆದು ಜಕ್ಕಗಾವುಂಡನು ದೇವಾಲಯವೊಂದನ್ನು ಕಟ್ಟಿದ ಮತ್ತು ಭೂದಾನವೊಂದನ್ನು ಮಾಡಿದ. ಬೆಲಟಿಕೆರೆಯ ಕ. 143 ಅದೇ ತೇದಿ ಮತ್ತು ಅದೇ ಅರಸನಿಗೆ ಸೇರಿದ ಶಾಸನ. ಸ್ಥಳದ ಮಲೆಯನಾಯಕ ಕಾಳಾಮುಖ ಪಂಥಕ್ಕೆ ಸೇರಿದ ಮತ್ತು ಕೆಳವಂಕಿನಾಡಿನ ಬಾಬಯಕಲುಕೆರೆಯಿಂದ ಬಂದ ಧರ್ಮರಾಶಿಜೀಯನಿಗೆ ಭೂದಾನವೊಂದನ್ನಿತ್ತ. ಶಾಸನೋಕ್ತ ಮಾಣಿಕೇಶ್ವರದೇವರಿಗೆ ಭೂಮಿದಾನವೊಂದನ್ನು ಮಾಡಲಾಯಿತು.

ಬ್ರಹ್ಮನಿಂದ ವಿಷ್ಣುವರ್ಧನನವರೆಗಿನ ಹೊಯ್ಸಳರ ವಂಶಾವಳಿಯನ್ನು ನಿಡಗಟ್ಟ ಶಾಸನದಲ್ಲಿ (ಕ. 116) ನೀಡಿದೆ. ವಿಷ್ಣುವರ್ಧನನ ಅರಸಿ ದೇವಕಿದೇವಿಯನ್ನು ಅದು ಉಲ್ಲೇಖಿಸುತ್ತದೆ. ಕ್ರಿ.ಶ. 1139ರಲ್ಲಿ ವಿಷ್ಣು ಬೇಲೂರಿನಿಂದ ಆಳುತ್ತಿದ್ದ. ನಿಡಗಟ್ಟದ ಈಶಾನ್ಯ ದಿಕ್ಕಿನ ಕೈಲಾಸಸ್ಥಾನದಲ್ಲಿ ಕಾಳಗೌಂಡನು ಕಾಳೇಶ್ವರ ಧೇವಾಲಯವನ್ನು ನಿರ್ಮಿಸಿದನಂತೆ. ಈ ದಾನವನ್ನು ಸ್ವೀಕರಿಸಿದಾತ ಶಿವಶಕ್ತಿ.

ಕೆರೆಸಂತೆಯ ಕ. 67ರ ಕಾಲ ಕ್ರಿ.ಶ. 1141. ವಿಷ್ಣುವರ್ಧನನ ಹಿರಿಯ ಅರಸಿ ರಾಜಲದೇವಿಯ ಸೋದರಮಾವನಾದ ಮಂಡಳಿಕ ಮಂಚಿಯರಸನನ್ನು ಅದು ಉಲ್ಲೇಖಿಸುತ್ತದೆ. ಆತ ಚಾಲುಕ್ಯ ವಂಶಕ್ಕೆ ಸೇರಿದವನಾಗಿದ್ದ. ಕೆರೆಸಂತೆ ಅಥವಾ ವಿಷ್ಣು ಸಮುದ್ರದಲ್ಲಿ ಆತ ಮಂಚೇಶ್ವರ ದೇವಾಲಯವನ್ನು ಕಟ್ಟಿಸಿದ ಹಾಗೂ ತಾನು ಅರಸನಿಂದ ಪಡೆದ ಕೆಲವು ಭೂಪ್ರದೇಶವನ್ನು

ದೇವರ ಸೇವೆಗೆ ದಾನವಿತ್ತ. ಶಾಸನದಲ್ಲಿ ಮಂಚಿಯರಸವನ್ನು ಹೊಗಳಲಾಗಿದೆ. ಆತ ವಿಟ್ಟರಸ ಮತ್ತು ಕೇತಬರಸಿಯರ ಮಗನಾಗಿದ್ದು, ಈ ಪ್ರದೇಶದ ಪಾಲಕನಾಗಿದ್ದ. ಕೆರೆಸಂತೆಯ ನಕರ-ನಾನಾದೇಶಿಗಳು ನೀಡಿದ ಇನ್ನೂ ಕೆಲವು ಹೆಚ್ಚಿನ ದಾನಗಳನ್ನು ಶಾಸನದಲ್ಲಿ ತಿಳಿಸಿದೆ. ಈ ದಾನಗಳನ್ನು ಸ್ವೀಕರಿಸಿದಾತ ತ್ರಿಲೋಚನಪಂಡಿತ. ಶಾಸನದಲ್ಲಿ ರಾಯರಾಯಪುರಂಗೊಂಡ ತೂಬಿನ ಪ್ರಸ್ತಾಪವಿದೆ. ಇದು ತುಂಬ ಆಸಕ್ತಿಕರ ಸಂಗತಿ. ರಾಯರಾಯಪುರ ಎನ್ನುವುದು ತಲಕಾಡಿನ ಇನ್ನೊಂದು ಹೆಸರು. ವಿಷ್ಣುವರ್ಧನ ಅದನ್ನು ಜಯಿಸಿದ ಮೇಲೆ 'ತಲಕಾಡುಗೊಂಡ' ಎಂಬ ಹೆಮ್ಮೆಯ ಬಿರುದನ್ನು ಧರಿಸಿದ. ಆ ಸ್ಥಳದ ಮೇಲೆ ಸಾಧಿಸಿದ ವಿಜಯದ ಗುರುತಾಗಿ ವಿಷ್ಣುಸಮುದ್ರದ ತೂಬಿಗೆ ರಾಯರಾಯಪುರಂಗೊಂಡ ತೂಬು ಎಂಬ ಹೆಸರನ್ನು ನೀಡಲಾಯಿತು. 1141ರ ಕ. 221 ಸೋಮನಹಳ್ಳಿಯಲ್ಲಿರುವ ಒಂದು ಶಾಸನ. ಸೋವಿಸೆಟ್ಟಿಯು ಅಭಿನವ ಸೋಮೇಶ್ವರದೇವರ ಪ್ರತಿಷ್ಠೆ ಮಾಡಿಸಿ ದೇವರ ಸೇವೆಗೆ ಭೂಮಿದಾನ ಮಾಡಿದ ವಿಷಯವನ್ನು ದಾಖಲಿಸುತ್ತದೆ. ಕೇಶವಪಂಡಿತ ಇದರ ಪ್ರತಿಗ್ರಹಿ. ಸೋವಿಸೆಟ್ಟಿ ಹಳೆಯಬೀಡಿನವನೆಂದು ಹೇಳಿರುವುದು ವಿಚಿತ್ರವೆನಿಸುತ್ತದೆ; ಏಕೆಂದರೆ ಆ ಕಾಲದಲ್ಲಿ ಪ್ರಚಲಿತವಿದ್ದುದು ದೋರಸಮುದ್ರವೆಂಬ ಹೆಸರು. ತುರಕದೇವನೆಂಬ ಉಲ್ಲೇಖವೂ ತುಂಬ ಕುತೂಹಲಕಾರಿಯಾಗಿದೆ. ಅದೇ ಸ್ಥಳದ ಮತ್ತು ಅದೇ ತೇದಿಯ ಕ. 223 ರಿಂದ ಕದಂಬ ಕಂಠೀರವನೆನಿಸಿದ ಸಾವಂತ ಮಾಯಿದೇವನಾಯಕ ಬ್ರಹ್ಮೇಶ್ವರದೇವರ ಸೇವೆಗೆ ಭೂಮಿದಾನ ಮಾಡಿದ ಸಂಗತಿ ತಿಳಿದುಬರುತ್ತದೆ. ಕ್ರಿ.ಶ. 1143ರ ಕೆರೆಸಂತೆ ಶಾಸನವು (ಕ. 70) ಹಿರಿಯಹಡಿಯರ ರೇವಿಮಯ್ಯ ಮತ್ತು ದಾಸೆಯ ಭೂದಾನವಿತ್ತ ವಿಷಯವನ್ನು ನಿರೂಪಿಸುತ್ತದೆ. ಸ್ಥಳದ ನಕರರು ಕೆಲವು ದಾನಗಳನ್ನಿತ್ತರು. ಈ ಶಾಸನವು ಉಲ್ಲೇಖಿಸುವ ಧರ್ಮರಾಶಿಪಂಡಿತನನ್ನು ಕ್ರಿ.ಶ. 1148ರ ಮತ್ತೂರು ಶಾಸನದಲ್ಲಿ (ಕ. 178) ಉಲ್ಲೇಖಿಸಿರುವಂತೆ ಕಾಣುತ್ತದೆ. ಮಹಾಸಾಮಂತ ಗೋವಿದೇವನು ಹುಳಿಯೆರು -12 ಪ್ರದೇಶವನ್ನು ಪಾಲಿಸುತ್ತಿದ್ದ ವಿಷಯವನ್ನು ಎರಡನೆಯ ಶಾಸನ ತಿಳಿಸುತ್ತದೆ. ಮತ್ತವೂರಿನ ಆಡಳಿತ ಕೇತಣನ ಕೈಯಲ್ಲಿತ್ತು; ತನ್ನ ಸೋದರರ ಜೊತೆಗೂಡಿ ಆತ ಗ್ರಾಮದಲ್ಲಿ ಕೆರೆಯೊಂದನ್ನು ಕಟ್ಟಿಸಿ, ಬಿಕ್ಕೇಶ್ವರ ಮತ್ತು ಆಂಡೇಶ್ವರ ದೇವಾಲಯಗಳನ್ನು ತನ್ನ ತಂದೆತಾಯಿಗಳ ನೆನಪಿಗಾಗಿ ನಿರ್ಮಿಸಿದನು. ಪ್ರತಿಗ್ರಹಿ ಧರ್ಮರಾಶಿಪಂಡಿತ ಗಂಗಣಿಕಬ್ಬೆಯ ಮಗ. ಈ ಶಾಸನದಲ್ಲಿ ಕೋಟೆಗಾಳಗ ಮತ್ತು ಬಯಲುಗಾಳಗಗಳ ಪ್ರಸ್ತಾಪವಿದೆ. ತುರುವನಹಳ್ಳಿಯ ಕ. 103 ನಾಗರಹಾಳಿನ ಕ. 113 ಮತ್ತು ಮಚ್ಚೇರಿಯ ಕ. 170 ವಿಷ್ಣುವಿನ ಆಳ್ವಿಕೆಗೆ ಸೇರಿದವು. ಮೊದಲನೆಯ ಶಾಸನವು ಹೊಯ್ಸಳ ದೊರೆಯು ರಾಮೇಶ್ವರದೇವರಿಗೆ ದಾನ ನೀಡಿದ ಸಂಗತಿಯನ್ನು ನಿರೂಪಿಸಿದರೆ, ಎರಡನೆಯ ಶಾಸನವು ನಾಗರಹಾಳಿನ ಸಿಂಗೇಶ್ವರದೇವರಿಗೆ ದಾನ ನೀಡಿದ ವಿಷಯವನ್ನು ಉಲ್ಲೇಖಿಸುತ್ತದೆ; ಮಲಿಕಜೀಯನ ಉಲ್ಲೇಖವಿದೆ. ಇಟ್ಟಗೆಯ ರತ್ನಶಿವಪಂಡಿತನಿಗೆ ಭೂಮಿ, ಉದ್ಯಾನ, ಗಾಣ ಮತ್ತು ಗೃಹನಿವೇಶನಗಳನ್ನು ದಾನವಿತ್ತ ಸಂಗತಿ ಕೊನೆಯ ಶಾಸನದಲ್ಲಿ ನಿರೂಪಿತವಾಗಿದೆ. ಮಚ್ಚೇರಿಯ ಕಲಿದೇವರ ಸೇವೆಗಳನ್ನು ನಿರ್ವಹಿಸಲು ಈ ದಾನವನ್ನು ಮಾಡಲಾಯಿತು. ಬೊಪ್ಪದೇವ ಹೊಯ್ಸಳ ವಿಷ್ಣುವಿನ ಮಂತ್ರಿಯಾಗಿದ್ದ.

ಎಲೂಗೆರೆಯ ಕ್ರಿ.ಶ. 1148ರ ತ. 20 ನೆಯ ಶಾಸನವು ವಿಷ್ಣುವನ್ನು ಆಳರಸನೆಂದು ಉಲ್ಲೇಖಿಸುತ್ತದೆಯಾದರೂ ಆತನ ಮಗ ಒಂದನೆಯ ನರಸಿಂಹನ ಆಳ್ವಿಕೆಗೆ ಸೇರಿದುದು. ಗಂಗಗೌಡ ಮತ್ತು ಮಲ್ಲೇಗೌಡರು ಎಲವಂಗೆರೆಯ ಗಂಗೇಶ್ವರ ಮತ್ತು ಕುರುವದ ರಾಮೇಶ್ವರದೇವರಿಗೆ ಭೂದಾನ ನೀಡಿದರು. ಚಂದ್ರಶೇಖರಪಂಡಿತ ಪ್ರತಿಗ್ರಹಿ. ಮುಗಳಿಕಟ್ಟೆಯ ಕ. 186 ಕೆರೆಯೊಂದನ್ನು ಮತ್ತು ದೇಗುಲವೊಂದನ್ನು ಚಂದಗೌಡ ಮತ್ತು ಆತನ ಸೋದರರು ತಮ್ಮ ತಂದೆಯ ಹೆಸರಿನಲ್ಲಿ ಕಟ್ಟಿಸಿದ ವಿಷಯವನ್ನು ದಾಖಲಿಸುತ್ತದೆ. ಸಿಂಗಟಗೆರೆಗೆ ಸೇರಿದ ಚಳುಕೆಯ ವೃತ್ತಿಯಲ್ಲಿ ಅವರು ದಾಸೇಶ್ವರಲಿಂಗವನ್ನು ಪ್ರತಿಷ್ಠೆ ಮಾಡಿಸಿದರು. ಭೂದಾನವೊಂದನ್ನು ಮಾಡಲಾಯಿತು. ಪ್ರತಿಗ್ರಹಿ ಗುಡ್ಡಜೀಯ. ಸಿಂಗಟಗೆರೆಯಿಂದ ಚಳುಕೆಯನಾಯಕ ಈ ಪ್ರದೇಶದ ಪಾಲನೆ ಮಾಡುತ್ತಿದ್ದ. ಸಮತಳ ಗ್ರಾಮದ ತ. 88ನೆಯ ಶಾಸನದಲ್ಲಿ ವಾಜಿವಂಶದ ಹೆಗ್ಗಡೆ ಚಂದಿಮಯ್ಯನ ವಂಶಾವಳಿಯನ್ನು ನೀಡಿದೆ. ಆತನ ಹೆಂಡತಿ ಚೌಡವ್ವೆ; ಈಕೆಯ ತಾಯಿಯಾದ ಸುಗ್ಗಣಿಕವ್ವೆಯು ಸವತಳದ ಮುದ್ದೇಶ್ವರ ದೇವಾಲಯವನ್ನು ಕಟ್ಟಿಸಿದಳು. ಹೆಗ್ಗಡೆ ಚಂದಿಮಯ್ಯ ಮತ್ತು ಆತನ ಪತ್ನಿ ಚೌಡವ್ವೆ ಅಗ್ರಹಾರವೊಂದನ್ನು ಸ್ಥಾಪಿಸಿ ಅದಕ್ಕೆ ಸರಸ್ವತೀಪುರವೆಂದು ಹೆಸರಿತ್ತರು ಹಾಗೂ ಅದನ್ನು 24 ಬ್ರಾಹ್ಮಣರಿಗೆ ಬಿಟ್ಟರು. ದೇವ ಸೇವೆಗೆ ಭೂದಾನವನ್ನು ನೀಡಲಾಯಿತು. ಹೆಜ್ಜುಂಕದ ಅಧಿಕಾರಿಗಳು ದೇವರಿಗೆ ಗಾಣವೊಂದನ್ನು ದಾನವಿತ್ತರು. ಹಳೆಯೂರಿನ ಅದೇ ತೇದಿಯ ತ. 96ರಲ್ಲಿ ಮಹಾಪ್ರಧಾನ, ಸರ್ವಾಧಿಕಾರಿ, ಹಿರಿಯದಂಡನಾಯಕ ಲಕ್ಕರಸರ ಉಲ್ಲೇಖವಿದೆ. ಅಮರಾವತೀಪುರ ಅಥವಾ ತರಿಯಕೆರೆಯ 102 ಬ್ರಾಹ್ಮಣರಿಗೆ ಆತ ದಾನ ನೀಡಿದ. ಹುಳ್ಳಯ್ಯ ಎಂಬಾತ ಹಿರಿಯಭಂಡಾರಿಯಾಗಿದ್ದ. ಲಕ್ಕರಸ ಮತ್ತು ಇತರರು ಅಮೃತೇಶ್ವರದೇವರ ಪ್ರತಿಷ್ಠೆ ಮಾಡಿ ದೇವರಿಗೆ ಭೂಮಿ ಮತ್ತು ಉದ್ಯಾನಗಳನ್ನು ದಾನವಿತ್ತರು. ಹೂಲಿಯಕೆರೆಯ ತತ್ಪುರುಷಪಂಡಿತ ಪ್ರತಿಗ್ರಹಿ. ಕ್ರಿ.ಶ. 1159ರ ಕಬ್ಬಳ್ಳಿ ಶಾಸನವು (ಕ. 43)

ಹೊಯ್ಸಳಗಾವುಂಡನೆಂಬಾತ ತನ್ನ ತಾಯಿ ಚಟ್ಟವೆಗಾವುಂಡಿಯ ನೆನಪಿನಲ್ಲಿ ಪರೋಕ್ಷವಿನಯವಾಗಿ ಬಸದಿಯೊಂದನ್ನು ಕಟ್ಟಿಸಿದ ವಿಷಯವನ್ನು ದಾಖಲಿಸುತ್ತದೆ. ಕೆಲವು ಭೂಮಿಕಾಣಿಗಳನ್ನು ಸರಿಸಮಾನವಾಗಿ ವಿಂಗಡಿಸಿ ಬಸದಿಗೂ ದೇವಾಲಯಕ್ಕೂ ಹಂಚಲಾಯಿತೆಂದು ಹೇಳಲಾಗಿದೆ. ಬಸದಿ ಮತ್ತು ದೇವಾಲಯವೆರಡಕ್ಕೂ ನೀಡಿದ ದಾನವನ್ನು ಸ್ವೀಕರಿಸಿದಾತ ಅಹೋಬಲ ಪಂಡಿತ. ಬಿದರೆಯ ಗುಲ್ಲಗಾವುಂಡ, ಆತನ ಸೋದರ ದೇವಗಾವುಂಡ ಮತ್ತು ಅವರ ಪತ್ನಿಯರು ಬಿದರೆಯಲ್ಲಿ ಬ್ರಹ್ಮೇಶ್ವರ ದೇವಾಲಯವನ್ನು ಕಟ್ಟಿಸಿ ಅದಕ್ಕೆ ಕೆಲವು ದತ್ತಿಗಳನ್ನು ನೀಡಿದರೆಂದು ಕ್ರಿ.ಶ. 1162 ಕ. 134 ತಿಳಿಸುತ್ತದೆ. ಕಮಳಶಕ್ತಿದೇವ ಮತ್ತು ಶಿವಶಕ್ತಿದೇವರು ಪ್ರತಿಗ್ರಹಿಗಳು. ಗುಲ್ಲಗವುಡನ ಮಗನಾದ ಕೇಶವಗೌಡನು ವೈದ್ಯ ಚಿಕ್ಕಣ್ಣನಿಂದ ಕೆಲವು ಭೂಮಿಕಾಣಿಗಳನ್ನು ಕೊಂಡು ದೇವರ ಸೇವೆಗೆ ನೀಡಿದನೆಂಬುದನ್ನು ಇಲ್ಲಿ ಗಮನಿಸಬಹುದು. ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ಬಳೆಗಾರ ಮಲ್ಲಯ್ಯನು ಹಿರಿಯೂರಿನ ತುರುಗಾಳಗದಲ್ಲಿ ಕ್ರಿ.ಶ. 1164ರ ಮಾರ್ಚ್ 15 ರಂದು ಹೋರಾಡುತ್ತ ಮರಣಹೊಂದಿದನು (ಕ.233). ಮಾರನೆಯ ವರ್ಷವೇ ಬಳಿಗಳ್ತಿಯ ಯಿರುಗಣ ಬಂಕನಕಟ್ಟೆಯಲ್ಲಿ ಕಾದಿ ಮಾಡಿದ (ತ. 64). ಕ್ರಿ.ಶ. 1167ರಲ್ಲಿ ಒಂದನೆಯ ನರಸಿಂಹ ಸಪ್ತಾರ್ಧ ಲಕ್ಷಪ್ರದೇಶವನ್ನು ಆಳುತ್ತಿದ್ದನೆಂದು ಅತ್ತಿಮೊಗ್ಗೆಯ ಶಾಸನ (ತ. 3) ತಿಳಿಸುತ್ತದೆ. ಕ್ರಿ.ಶ. 1169ರಲ್ಲಿ ಚಿಕ್ಕಪಟ್ಟಣಗೆರೆಯಲ್ಲಿ ಜಕ್ಕಗಾವುಂಡ ಮತ್ತು ಸಕ್ಕೆಗಾವುಂಡರು ಸಿಂಗೇಶ್ವರ ದೇವಾಲಯವನ್ನು ತಮ್ಮ ತಂದೆಯ ಸ್ಮರಣಾರ್ಥ ಕಟ್ಟಿಸಿದರು (ಕ. 95). ವಿಷ್ಣು ಮತ್ತು ಸೂರ್ಯರ ಗುಡಿಗಳನ್ನು ಜಕ್ಕಯ್ಯ ಮತ್ತು ಬೆಣ್ಣೆಯ ಮಾಳಗೌಂಡರು ಕಟ್ಟಿಸಿದರು; ಎರಡನೆಯವನ ಅಳಿಯನು ಅಲ್ಲಿನ ರಂಗಮಂಟಪವನ್ನು ಕಟ್ಟಿಸಿದನು. ಹಟ್ಟಣಗೆರೆಯ ಕಲ್ಯಾಣಶಕ್ತಿ ಪ್ರತಿಗ್ರಹಿ. ಬ್ರಹ್ಮಸಮುದ್ರದ ಕ. 150ರಿಂದ ಅಲ್ಲಿನ ನಾಕೇಶ್ವರ ದೇವಾಲಯವನ್ನು ಮದ್ದಿರಾಜನ ಮಗ ನಾಕಿಮಯ್ಯನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಹೊಯ್ಸಳ ದೊರೆಯಿಂದ ಆತ ಬ್ರಹ್ಮಸಮುದ್ರವನ್ನು ಪಡೆದುಕೊಂಡಿದ್ದನು. ಪ್ರತಿಗ್ರಹಿಯಾದ ತ್ರಿಲೋಚನಾಚಾರ್ಯ ಕದಂಬವೃಕ್ಷಾನ್ವಯಕ್ಕೆ ಸೇರಿದವನು. ನಾಕನ ವಂಶಾವಳಿಯನ್ನು ಕೊಟ್ಟಿದೆ. ಮರವಂಜಿಯ ಕ. 179ರ ಕಾಲ ಕ್ರಿ.ಶ. 1170. ಚಾಲುಕ್ಯ ಸಾಮಂತರಸನಾಗಿ ಒಂದನೆಯ ನರಸಿಂಹನು ದೋರಸಮುದ್ರದಿಂದ ಆಳುತ್ತಿದ್ದುದನ್ನು ಅದು ತಿಳಿಸುತ್ತದೆ. ತನ್ನ ತಂದೆ ಬಮ್ಮಗೌಡನಿಗೆ ಪರೋಕ್ಷವಿನಯವಾಗಿ ಸೋಮಗೌಡನು ಕಲಿದೇವರ ಸೇವೆಗಾಗಿ ಭೂದಾನ ಮಾಡಿದನು. ಜಾಜಿವೂರಿನ ರುದ್ರಶಕ್ತಿಯ ಮಗ ಸಕಳೇಶ್ವರಪಂಡಿತ ಈ ದಾನ ಸ್ವೀಕರಿಸಿದಾತ. ಬೆಳವಾಳದ ಕ್ರಿ.ಶ. 1171ರ ಕ. 147 ಕುತೂಹಲಕರವಾದ ಒಂದು ಶಾಸನ; ಅದು ಸೊಸವೂರನ್ನು ಉಲ್ಲೇಖಿಸುತ್ತದೆ. ಹಾಗೂ ಅಲ್ಲಿ ಸಳನ ತರುವಾಯ ಹಲವರು ಆಳಿದರೆಂದು ತಿಳಿಸುತ್ತದೆ. ಸಂಕರಾಸಿಪಂಡಿತನ ಮಗ ಅನಂತಶಕ್ತಿ ಸೋಮರಾಸಿಪಂಡಿತನನ್ನು ಅದು ಉಲ್ಲೇಖಿಸುತ್ತದೆ; ನಾಗಗವುಂಡ ಮತ್ತು ಇತರರು ಕಲಿದೇವರ ಸೇವೆಗೆಂದು ಮಾಡಿದ ಭೂಮಿದಾನವನ್ನು ಆತ ಸ್ವೀಕರಿಸಿದ.

ಬ್ರಹ್ಮಸಮುದ್ರದಲ್ಲಿ ವಿಷ್ಣುದೇವಾಲಯವೊಂದನ್ನು ನಿರ್ಮಿಸಿದ ವಿಷಯವನ್ನು ಕ. 169 ಉಲ್ಲೇಖಿಸುತ್ತದೆ; ಶಾಸನದ ತೇದಿ ಕ್ರಿ.ಶ.1172. ವಿನಯಾದಿತ್ಯನಿಂದ ಒಂದನೆಯ ನರಸಿಂಹನವರೆಗಿನ ಹೊಯ್ಸಳ ವಂಶಾವಳಿಯನ್ನು ಅದು ಕೊಡುತ್ತದೆ; ಆಚಿ ರಾಜನ ಪ್ರಶಂಸೆ ಆದರದಲ್ಲಿದೆ. ಆತ ವಾಜಿವಂಶದ ಕೇಶವಾರ್ಯ ಮತ್ತು ಚೌಂಡವ್ವೆಯರ ಮಗ. ವಾಜಿವಂಶವು ಯಾಜ್ಞವಲ್ಕ್ಯನಿಂದ ಉಗಮಿಸಿತೆಂದು ಹೇಳಲಾಗಿದೆ..

ಹೊಯ್ಸಳ ವಂಶದ ಅತ್ಯಂತ ಪ್ರಬಲ ದೊರೆ ಎರಡನೆಯ ಬಲ್ಲಾಳ. ಆತನ ಆಳ್ವಿಕೆಗೆ ಸೇರಿದ ಸುಮಾರು ಐವತ್ತು ಶಾಸನಗಳಿವೆ. ಮುದಿಗೆರೆಯ ರಾಮೇಶ್ವರ ದೇವಾಲಯವನ್ನು ಕ್ರಿ.ಶ. 1172ರಲ್ಲಿ ಆದಿಗೌಡ ಮತ್ತು ಆತನ ಮಕ್ಕಳು ಕಟ್ಟಿಸಿದರು (ತ. 80). ದೇವರ ಸೇವೆಗೆ ಮಾಡಲಾದ ಭೂಮಿದಾನವನ್ನು ಸ್ವೀಕರಿಸಿದವನು ಕಲ್ಯಾಣಶಕ್ತಿದೇವ. ಕುಪ್ಪೆಹಾಳಿನ ಕ. 48ನೆಯ ಶಾಸನದ ಕಾಲ ಕ್ರಿ.ಶ. 1173ರ ಜುಲೈ 22 ಭಾನುವಾರ. ಈ ದಿನದಂದು ಆತ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತನಾದ. ಪಟ್ಟಬಂಧೋತ್ಸವದ ಆ ಶುಭ ಸಂದರ್ಭದಲ್ಲಿ ದೊರೆಯು ಆಸಂದಿನಾಡಿಗೆ ಸೇರಿದ ಕುಪ್ಪೆಹಾಳು ಗ್ರಾಮವನ್ನು ದೇವದಾನವಾಗಿ ಪ್ರಭಾಸದ (ಸೌರಾಷ್ಟ್ರ) ಸೋಮನಾಥ ದೇವರ ಅಂಗಭೋಗಕ್ಕಾಗಿ ದಾನ ನೀಡಿದ. ವಿಷ್ಣುವರ್ಧನನ ಸಾಧನೆಗಳನ್ನು ವಿವರಿಸುವಾಗ, ಪೂರ್ವ, ಪಶ್ಚಿಮ ಹಾಗೂ ದಕ್ಷಿಣಗಳಲ್ಲಿ ಸಾಗರಗಳು ಮತ್ತು ಉತ್ತರದಲ್ಲಿ ಪೆರ್ದೊರೆ ಆತನ ರಾಜ್ಯದ ಮೇರೆಗಳಾಗಿದ್ದವೆಂದು ತಿಳಿಸುತ್ತದೆ. ನಾಗದೇವನೆಂಬಾತ ಕೆರೆಯೊಂದನ್ನು ತೋಡಿಸಿದನು ಹಾಗೂ ನಂದಿಕೇಶ್ವರ ದೇವಾಲಯವನ್ನು ಕಟ್ಟಿಸಿದನು. ಅದೇ ದಿನ ಹಿರಿಯೂರಿನ ಸೋಮನಾಥದೇವರ ಸೇವೆಗಳಿಗೆ ಅಲ್ಲಿನ ಮಹಾನಾಳ್ಪ್ರಭು ಸಂಕಗಾವುಂಡನು ಭೂಮಿದಾನ ಮಾಡಿದನು (ಕ. 234); ಪ್ರತಿಗ್ರಹಿ ಹಂಪರಾಸಿ. ಅದೇ ಸ್ಥಳದ ಕಲ್ಲೇಶ್ವರ ದೇವರಿಗೆ ಸಂಕಗಾವುಂಡನು ಭೂದಾನ ನೀಡಿದ (ಕ. 237). ಪ್ರತಿಗ್ರಹಿ ಸಾವಿಸೆಟ್ಟಿ ಮತ್ತು ಹಿರಿಯ ಮಲ್ಲವ್ವೆಯರ ಮಗನಾದ ಹಂಪಜೀಯ. ಹಂಪಜೀಯ ಮತ್ತು ಹಂಪರಾಸಿ ಒಬ್ಬನೇ ಇದ್ದಿರಬಹುದು. ಕ. 234 ರಲ್ಲಿ ಬೊಪ್ಪಗೌಡನು ಹಂಪರಾಸಿಯ ಮಗನೆಂದು

ತಿಳಿಸಿದರೆ, ಈ ಶಾಸನದಲ್ಲಿ (ಕ. 237) ಹಂಪಜೀಯನ ಎಲ್ಲ ಗಂಡು ಮಕ್ಕಳ ಹೆಸರುಗಳಿವೆ; ಮಲ್ಲಗೌಡ, ಮಾದಿಗೌಡ, ಅಜಗೌಡ, ಬೊಪ್ಪಗೌಡ, ಚಟ್ಟಗೌಡ ಮತ್ತು ಮಾಕಗೌಡ. ನಿರ್ಗುಂದದ ಚಟ್ಟಯ್ಯನಾಯಕ ಹಿರಿಯೂರಿನ ಆಡಳಿತವನ್ನು ನಡೆಸುತ್ತಿದ್ದ. ಬಾಣೂರು ಅಗ್ರಹಾರದ ಕ. 130ರ ಕಾಲ ಕ್ರಿ.ಶ. 1174. ಹಾನಿಗೀಡಾದ ಈ ಶಾಸನದಲ್ಲಿ ಎರಡನೆಯ ಬಲ್ಲಾಳನ ಕೆಲವು ಮಾಮೂಲಿನ ವಿಶೇಷಣಗಳಿವೆ. ಕ. 75, 151 ಮತ್ತು 152ನೆಯ ಶಾಸನಗಳು ಕ್ರಮವಾಗಿ ಕೊತ್ತಗೆರೆ ಹಾಗೂ ಬ್ರಹ್ಮಸಮುದ್ರಗಳಿಗೆ ಸೇರಿದವು; ಅವುಗಳ ಕಾಲ ಕ್ರಿ.ಶ. 1175. ಚಳಿಕೆಯನಾಯಕ, ಆತನ ಅಳಿಯ ಕಲಿದೇವನಾಯಕ ಹಾಗೂ ಮಾದಿಗೌಡರು ಕೋತಿಕೆರೆಯಲ್ಲಿ ಬ್ರಹ್ಮೇಶ್ವರ ಲಿಂಗವನ್ನು ಪ್ರತಿಷ್ಠಾಪಿಸಿ, ಗಂಗರಸಜೀಯನಿಗೆ ಭೂಮಿದಾನ ಮಾಡಿದ ವಿಷಯವನ್ನು ಮೊದಲನೆಯ ಶಾಸನವು ತಿಳಿಸುತ್ತದೆ. ಹೆಗ್ಗಡೆ ನಾಕಿಮಯ್ಯನಿಗೆ ಮಹಾಜನರು ಭೂದಾನವಿತ್ತ ಸಂಗತಿಯನ್ನು ಎರಡನೆಯ ಶಾಸನವು ದಾಖಲಿಸಿದರೆ, ಮೂರನೆಯ ಶಾಸನವು ಬನದವೆ ಹೆಗ್ಗಡಿತಿಯು ದಾನ ನೀಡಿದ ವಿಷಯವನ್ನು ನಿರೂಪಿಸುವಂತೆ ಕಾಣುತ್ತದೆ. ಸಾವಂತಮಲ್ಲ ಮತ್ತು ಆತನ ಸೋದರ ತಮ್ಮ ತಂದೆಯ ನೆನಪಿಗಾಗಿ ದೇವಾಲಯವೊಂದನ್ನು ನಿರ್ಮಿಸಿದ ವಿಷಯ ನಂದಿಯ ಕ. 57 ರಿಂದ ತಿಳಿದುಬರುತ್ತದೆ. ಕಾರಣಗಟ್ಟದ ತ. 31ರಲ್ಲಿ ಕಾಳೆಯನಕಟ್ಟದ ಸಾಮಂತ ಮಿಕಣ್ಣ ನೀಡಿದ ದಾನದ ಉಲ್ಲೇಖವಿದೆ. ಇದರ ಕಾಲ ಕ್ರಿ.ಶ. 1179. ಕಾಳೆಯನಕಟ್ಟವೆ ಕಾರಣಗಟ್ಟವಾಗಿರಬಹುದೆ ? ಮಹಾಪ್ರಧಾನ ಲಕ್ಮರಸದಂಡನಾಯಕನಿಂದ ಅಮರಾವತೀಪುರ ಅಗ್ರಹಾರವು ಅಸ್ತಿತ್ವಕ್ಕೆ ಬಂತೆಂದು ಹಳೆಯೂರಿನ ತ. 97 ರಿಂದ ತಿಳಿದುಬರುತ್ತದೆ. ಇಲ್ಲಿನ ಪ್ರಸನ್ನ ಕೇಶವ ದೇವಾಲಯವು ಹೆಗ್ಗಡೆ ವಿಜಯಾದಿತ್ಯ ಮತ್ತು ಆತನ ಪತ್ನಿ ದೇಕವ್ವೆಯರಿಂದ ಕಟ್ಟಲ್ಪಟ್ಟಿತು. ಕೆಲವು ಭೂದಾನಗಳನ್ನು ನೀಡಲಾಯಿತು. ಸ್ವತಃ ರಾಜನೇ ಸ್ಥಳದ ಸಿದ್ಧಾಯದ ಮೊತ್ತದಿಂದ 7 ಗದ್ಯಾಣಗಳನ್ನು ಕೊಟ್ಟನು. ವಿಷ್ಣು ಸಮುದ್ರ ಅಥವಾ ಕೆರೆಸಂತೆಯ ಮಹಾಜನರು ಸಿದ್ದೇಶ್ವರ ದೇವಾಲಯವನ್ನು ಲಾಳವಂದಿಭಟ್ಟ ಎಂಬಾತನಿಗೆ ಒಪ್ಪಿಸಿದರು (ಕ. 66).

ಇಂದಾವರದ ತ. 18, ತರೀಕೆರೆಯ ತ. 51 ಹಾಗೂ ದುಗ್ಗಲಾಪುರದ ತ. 54 ಕ್ರಿ.ಶ. 1184ಕ್ಕೆ ಸೇರಿದವು. ಮೊದಲನೆಯದು ಕುತೂಹಲಕರವಾಗಿದೆ. ಚಿಕ್ಕ ಬಮ್ಮಲದೇವಿಗೆ "ಶಾನ್ತಿಯರ್ತ್ಥ"ವಾಗಿ ಮಹಾದಾನಗಳನ್ನು ಮಾಡುತ್ತಿದ್ದ ದೊರೆಯು ಅತ್ತಿಗನಹಾಳಿನಲ್ಲಿ ಕಾಂತವೂರಿನವರು ವಶಪಡಿಸಿಕೊಂಡಿದ್ದ ಕೆಲವು ಭೂಪ್ರದೇಶವನ್ನು ಬಿಡಿಸಿಕೊಟ್ಟನಂತೆ. ತ. 51 ಹುಲಿಮುದ್ರೆ ಸಹಿತವಾದ ಒಂದು ತಾಮ್ರಶಾಸನ; ಆಸಂದಿನಾಡಿನ ಮೊಲ್ಲೇಶ್ವರವನ್ನು ಒಂದು ಅಗ್ರಹಾರವನ್ನಾಗಿ ಮಾಡಲಾಯಿತೆಂದು ಅದು ತಿಳಿಸುತ್ತದೆ. ವಜ್ರೇಶ್ವರ ಮತ್ತು ನರಸಿಂಹದೇವರ ಉಲ್ಲೇಖಗಳಿವೆ. ಕೆರೆ ಮತ್ತು ಮಲ್ಲಿಕಾರ್ಜುನ ದೇವಾಲಯದ ನಿರ್ಮಾಣದ ವಿಷಯವನ್ನು ತ. 54 ದಾಖಲಿಸುತ್ತದೆ; ಕಟ್ಟಿಸಿದಾತ ನಾಳ್ಪ್ರಭು ಬಸವೇಗೌಡ; ಆತ ಸೋಮೇಶ್ವರಾಚಾರ್ಯನಿಗೆ ಭೂಮಿದಾನ ಮಾಡಿದ ವಿಷಯವನ್ನು ಈ ಶಾಸನದಲ್ಲಿ ತಿಳಿಸಿದೆ.

ವಕ್ಕಲಗೆರೆಯ ಕ. 200ನೆಯ ಶಾಸನದ ತೇದಿ ಕ್ರಿ.ಶ. 1187-88. ನಿರ್ಗ್ಗುಂದದ ಚಟ್ಟೆಯನಾಯಕನ ಪತ್ನಿ ಚಂದವೆ ನಾಯಕಿತಿಯು ಆ ಊರಿನಲ್ಲಿ ತನ್ನ ಮಗಳು ಕಾಚವ್ವೆ ಮತ್ತು ಅಳಿಯ ಮಲ್ಲಯ್ಯನಾಯಕರ ಅಭ್ಯುದಯಕ್ಕಾಗಿ (ತನ್ನಳಿಯನ ಮಗಳಭ್ಯುದಯ ನಿಮಿತ್ತಮಾಗಿಯುಂ) ಶಿವಾಲಯವೊಂದನ್ನು ಕಟ್ಟಿಸಿದ ವಿಷಯವನ್ನು ಅದು ದಾಖಲಿಸುತ್ತದೆ. ಶಾಸನದಲ್ಲಿ ಚಟ್ಟೆಯನಾಯಕ ಮತ್ತು ಇತರರನ್ನು ಪ್ರಶಂಸಿಸಲಾಗಿದೆ. ಚಂದಲೆ ಅಥವಾ ಚಂದವೆನಾಯಕಿತಿಯನ್ನು ವೈಷ್ಣವ ಶಿಖಾಮಣಿ ಎಂದು ಹೊಗಳುತ್ತದೆ. ಆಕೆ ದೇವಾಲಯವನ್ನು ನಿರ್ಮಿಸಿದ್ದು ತನ್ನ ಗಂಡನ ಪರೋಕ್ಷವಿನಯವಾಗಿ.

ಆಸಂದಿಯ ಕ. 17ರ ಕಾಲ ಕ್ರಿ.ಶ. 1191. ತನ್ನ ತಾಯಿ ಗಂಗಮಾದೇವಿಯ ಮರಣದ ಅನಂತರ ಸ್ಥಳದ ಬ್ರಹ್ಮೇಶ್ವರ ಮತ್ತು ಗಂಗೇಶ್ವರ ದೇವಾಲಯಗಳನ್ನು ಬಮ್ಮದೇವ ಕಟ್ಟಿಸಿದ ವಿಷಯವನ್ನು ಅದು ತಿಳಿಸುತ್ತದೆ. ದೇವಾಲಯಗಳನ್ನು ರಾಜಗುರು ಕ್ರಿಯಾಶಕ್ತಿದೇವ ಮತ್ತು ಸೇನಬೋವ ಕಲ್ಯಾಣದೇವರಿಗೆ ವಹಿಸಿಕೊಡಲಾಯಿತು. ಶ್ರೀಪರ್ವತದ ಪಾತಾಳಗಂಗೆಯಿಂದ ಲಿಂಗಗಳನ್ನು ತರಿಸಲಾಯಿತಂತೆ. ಕೆಲವು ದಾನಗಳನ್ನು ಅದು ನಮೂದಿಸುತ್ತದೆ. ಇದೇ ತೇದಿಯ, ವಕ್ಕಲಗೆರೆಯ ಕ. 201 ನೆಯ ಶಾಸನವು ಆ ಗ್ರಾಮದಲ್ಲಿ ದೇವಣ್ಣ ಮತ್ತು ಕೆರೆಯಣ್ಣ ಎಂಬುವರು ತಮ್ಮನ್ನು ಆಳಿದವನ (ಪಾಲಕ) ನೆನಪಿಗಾಗಿ ಚಟ್ಟೇಶ್ವರ ದೇವಾಲಯವನ್ನು ಕಟ್ಟಿಸಿದ ವಿಷಯವನ್ನು ದಾಖಲಿಸುತ್ತದೆ ಹಾಗೂ ಕೆಲವು ಭೂ ಮತ್ತು ತೆರಿಗೆ ದಾನಗಳನ್ನು ಉಲ್ಲೇಖಿಸುತ್ತದೆ. ಅವರ ಜೊತೆ ಈ ದಾನ ಕಾರ್ಯಗಳಲ್ಲಿ ಚಂದವೆನಾಯಕಿತಿ ಸೇರಿಕೊಂಡಳು. ಪ್ರತಿಗ್ರಹಿ ಬಲ್ಲಜೀಯ; ಮುದಿಗೆರೆಯ ಲಕ್ಷ್ಮಣೇಶ್ವರ, ಕೆರೆವೂರಿನ ಕನ್ನೇಶ್ವರ ಹಾಗೂ ಕಳ್ಳ ಮೆಣಸೆಯ ಕಲಿದೇವರ ಭಕ್ತನೆಂದು ವರ್ಣಿತನಾದ ಸಿಂಗರಾಸಿಪಂಡಿತನ ಮಗನೀತ.

ಚಟ್ಟನಹಳ್ಳಿಯ ಕ. 91ರ ತೇದಿ ಕ್ರಿ.ಶ. 1194. ನಿಡುಗಟ್ಟದ ಹುಲಿಯ ಚಟ್ಟಗಾವುಂಡನು ಆ ಗ್ರಾಮವನ್ನು (ಎಂದರೆ

ಚಟ್ಟನಹಳ್ಳಿ, ತಾನು ಮಾಡಿದ ಊರ) ಸ್ಥಾಪಿಸಿದನು ಹಾಗೂ ಅದರ ಈಶಾನ್ಯಕ್ಕೆ ಮಲ್ಲಿಕಾರ್ಜುನದೇವರ ಪ್ರತಿಷ್ಠೆ ಮಾಡಿಸಿದನು. ನಿಡುಗಟ್ಟದ ಕಲ್ಯಾಣಶಕ್ತಿಗೆ ಕೆಲವು ದಾನಗಳನ್ನು ನೀಡಲಾಯಿತು. ಇಟ್ಟಿಗೆಯ ತ. 17 ಒಂದು ಕೂಟ ಶಾಸನ; ತೇದಿ ಅದೇ. ಕೆಂಕೆರೆಯ ಕ. 53ರ ಕಾಲ ಕ್ರಿ.ಶ. 1195-96. ಬಲ್ಲಾಳನ ಪತ್ನಿ ಮಧುಕಲದೇವಿಯ ಆಡಳಿತವನ್ನು ಅದು ಉಲ್ಲೇಖಿಸುತ್ತದೆ. ಇದೊಂದು ವೀರಗಲ್ಲು ಶಾಸನ. ಕುಂದೂರಿನ ಕ. 261 ಕಲಿದೇವರ ಸೇವೆಗಳಿಗೆ ಭೂಮಿದಾನ ನೀಡಿದ ಸಂಗತಿಯನ್ನು ತಿಳಿಸುತ್ತದೆ. ಪ್ರತಿಗ್ರಹಿ ಸೋವರಾಸಿಪಂಡಿತ.

ಅಮೃತೇಶ್ವರದಣ್ಣಾಯಕನು ಅಮೃತಸಮುದ್ರದಲ್ಲಿ ಅಮೃತೇಶ್ವರ ದೇವಾಲಯವನ್ನು ಕಟ್ಟಿಸಿದ ವಿಷಯವನ್ನು, ಎರಡನೆಯ ಬಲ್ಲಾಳನ ಪ್ರಸಿದ್ಧ ಅಮೃತಾಪುರ ಶಾಸನವು (ತ. 12) ತಿಳಿಸುತ್ತದೆ. ಈ ಶಾಸನದ ಕಾಲ ಕ್ರಿ.ಶ. 1198. ಸುಕವಿಜನಮಿತ್ರ ಎಂದು ವರ್ಣಿತನಾದ ಕನ್ನಡ ಕವಿ ಜನ್ನ ಈ ಶಾಸನದ ರಚಯಿತ. ಈ ಶಾಸನ ಒಂದು ಖಂಡಕಾವ್ಯದಂತಿದೆ. ಅಮಿತಯ್ಯದಣ್ಣಾಯಕನ ಪ್ರಶಂಸೆ ಇದರಲ್ಲಿದೆ. ಆತನ ವಿಶೇಷಣಗಳಲ್ಲಿ ವೀರಬಲ್ಲಾಳರಾಜ್ಯಾಭ್ಯುದಯಕಾರಣಕಾರಣ ಎಂಬುದು ಗಮನಾರ್ಹ. ಆತ ಸುಗ್ಗಾಂಬಿಕೆಯ ಮಗ; ಕಲಿದೇವ, ಮಸಣಿದೇವ ಹಾಗೂ ಬಸವರಾಜ ಆತನ ಸೋದರರು.

ಕ್ರಿ.ಶ. 1202ರ ಆಸಂದಿಯ ಕ.42 ಹಾನಿಗೀಡಾಗಿದೆ. ಆಸಂದಿಯ ಗಂಗ ದೊರೆ ನರಸಿಂಹನು ಸೂರ್ಯದೇವರ ಸೇವೆಗಾಗಿ ಮಲ್ಲಿಕಾರ್ಜುನದೇವರಿಗೆ ಕೆಲವು ದಾನಗಳನ್ನು ನೀಡಿದನೆಂದು ಅದು ತಿಳಿಸುತ್ತದೆ. ಶಂಕರದಣ್ಣಾಯಕ ಮತ್ತು ಇತರರು ಸೂರ್ಯ ದೇಗುಲದ ಜೀರ್ಣೋದ್ಧಾರ ಮಾಡಿ ದಾನ ನೀಡಿದರು. ಅಮೃತಾಪುರ ಶಾಸನೋಕ್ತ (ತ. 12) ಅಮೃತೇಶ್ವರದಣ್ಣಾಯಕನಿಂದ ಅಭಿನ್ನನಾದ ಮಹಾಪ್ರಧಾನ ಅಮೃತಯ್ಯದಣ್ಣಾಯಕನು ದೇವಾಲಯ, ಕೆರೆ, ಸತ್ರ ಹಾಗೂ ಅಗ್ರಹಾರಗಳನ್ನು ಮಾಡಿಸಿದನು (ಕ. 199). ಆತ ತನ್ನ ಜನ್ಮಸ್ಥಳವಾದ ಲೊಕ್ಕುಗುಂಡಿಯಲ್ಲಿ ಅರವಂಟಿಗೆಯೊಂದನ್ನು ಸ್ಥಾಪಿಸಿದನೆಂದೂ ಹೇಳಿದೆ. ಸೋದರರಾದ ಕಲ್ಲಯ್ಯ, ಮಸಣಯ್ಯ ಮತ್ತು ಬಸವಯ್ಯರ ಜೊತೆಗೂಡಿ ಒಕ್ಕಲಗೆರೆಯಲ್ಲಿ ತನ್ನ ಪುಣ್ಯಕ್ಕಾಗಿ ಎಕ್ಕೋಟಿ ಜಿನಾಲಯವನ್ನು ಕಟ್ಟಿಸಿ ಅದರಲ್ಲಿ ಶಾಂತಿ ನಾಥನನ್ನು ಪ್ರತಿಷ್ಠಾಪಿಸಿದನಲ್ಲದೆ, ದಾನವನ್ನೂ ನೀಡಿದನಂತೆ, ನಯಕೀರ್ತಿಪಂಡಿತ ಪ್ರತಿಗ್ರಹಿ. ಬಲ್ಲಾಳ ಲೊಕ್ಕುಗುಂಡಿಯಿಂದ ರಾಜ್ಯವಾಳುತ್ತಿದ್ದ ನಿರ್ಗುಂದದ ಚಟ್ಟೆಯನಾಯಕನ ಪರಾಕ್ರಮವನ್ನು ಅದು ಉಲ್ಲೇಖಿಸುತ್ತದೆ. ಮಲ್ಲ ಚಂಗಾಳ್ವರ ವಿರುದ್ಧದ ಹೋರಾಟದಲ್ಲಿ ಮಾವುತನನ್ನು ಸಾಯಿಸಿ ಎರಡು ಆನೆಗಳನ್ನು ಸೆರೆಹಿಡಿದನಂತೆ. ಅಮಿತದಣ್ಣಾಯಕ ನಾಲ್ಕನೆಯ ವರ್ಣಕ್ಕೆ ಸೇರಿದವನು; ಆತನ ಜನ್ಮದಿಂದಾಗಿ ಅದು ಉಳಿದ ಮೂರು ವರ್ಣಗಳಿಗೆ 'ನವಮಣಿಕಳಸವಾಯಿತಂತೆ. ಆತನ ವಂಶಾವಳಿ:

ಚಟ್ಟಿಸೆಟ್ಟಿ ಪತ್ನಿ ಜಕ್ಕವ್ವೆ

|

ಹರಿಯಮಸೆಟ್ಟಿ ಪತ್ನಿ ಸುಗ್ಗವ್ವೆ

ಅಮಿತ | **ಕಲ್ಲಯ್ಯ** | **ಮಸಣಯ್ಯ** | **ಬಸವಯ್ಯ**

ಮತ್ತಿಹಳ್ಳಿಯ ಕ. 176ರ ತೇದಿ ಕ್ರಿ.ಶ. 1203. ಬಲ್ಲಾಳನು ಹಳ್ಳವೂರಿನಿಂದ ಆಳುತ್ತಿದ್ದ ವಿಷಯವನ್ನು ಅದು ಉಲ್ಲೇಖಿಸುತ್ತದೆ. ಮತ್ತಿಯಹಳ್ಳಿಯ ಮಾದಿಗೌಡ ಶಿವಾಲಯವನ್ನು ಕಟ್ಟಿಸಿ, ಕೆಲವರ ಉಪಸ್ಥಿತಿಯಲ್ಲಿ ದಾನವಿತ್ತ. ಪ್ರತಿಗ್ರಹಿ ತಿಪ್ಪಜೀಯಮಾದಿಜೀಯ. ದೇವಾಲಯವನ್ನು ಕಟ್ಟಿದವನು ಬಲೋಜ.

ತ. 9 ಮತ್ತು 10 ಅಮೃತಾಪುರದಲ್ಲಿರುವ ಶಾಸನಗಳು. ಎರಡೂ ಶಾಸನಗಳ ತೇದಿ ಕ್ರಿ. 1205. ಸಾಮಂತ ನಾಗಗಾವುಂಡ, ಆತನ ಮಕ್ಕಳು ಹಾಗೂ ಬಂಧುವರ್ಗದವರು ದೇವ ಸೇವೆಗೆ ಅಮೃತಾಪುರ ಗ್ರಾಮವನ್ನು ದಾನ ನೀಡಿದರು (ತ. 9). ತ. 10 ಒಂದು ಪೂರಕ ಶಾಸನ (ಹಿರಿಯ ಸಾಸನದ ಕೊಜಿತೆಯ ಸಾಸನ); ಅಮೃತೇಶ್ವರದೇವರ ಸೇವೆಗೆ ಭೂಮಿದಾನ ಮಾಡಿದ ವಿಷಯವನ್ನು ದಾಖಲಿಸುತ್ತದೆ. ದೇವರ ಪ್ರತಿಷ್ಠೆಯ ಕಾಲದಲ್ಲಿ ಅಮಿತಯದಂಡನಾಯಕನು 24 ವೃತ್ತಿಗಳನ್ನು ನೀಡಿದ.

ಕ. 9ರ ತೇದಿ ಕ್ರಿ.ಶ. 1206; ಆಸಂದಿಯ ಈ ಶಾಸನ ಹಾನಿಗೀಡಾಗಿದೆ. ಹರಹಸಾಹಣಿಯು ಬಲ್ಲೇಶ್ವರದೇವರ ಪ್ರತಿಷ್ಠೆ ಮಾಡಿಸಿ ತಾಂಡಗೆರೆಯನ್ನು - ಅದಕ್ಕೆ ಬಲ್ಲೇಶ್ವರಪುರವೆಂದು ಹೆಸರಿಟ್ಟು - ದೇವರ ಸೇವೆಗೆ ನೀಡಿದ ಭೂಮಿದಾನದ ಸಂಗತಿಯನ್ನೂ

ಅದು ತಿಳಿಸುತ್ತದೆ. ಈ ವರ್ಷದಲ್ಲಿ ಮರಳುಮಾರ್ಕಂಡದೇವ ಆಸಂದಿಯನ್ನು ಪಾಲಿಸುತ್ತಿದ್ದ (ಕ. 14). ಕ್ರಿ.ಶ. 1206 ರಲ್ಲಿ ಬಲ್ಲಾಳನು ಹಳ್ಳವೂರಿನಿಂದ ಆಳ್ವಿಕೆ ನಡೆಸುತ್ತಿದ್ದ (ಕ. 217). ಕ್ರಿ.ಶ. 1208ರಲ್ಲಿ ಕೂಡ ಆತ ಅಲ್ಲಿಂದಲೇ ರಾಜ್ಯಭಾರ ಮಾಡುತ್ತಿದ್ದಾಗ, ಮಹಾಪ್ರಧಾನ ಪಂಡಿತಯ್ಯದಣ್ಣಾಯಕರ ಸೇವಕನಾದ ಹೊದೆಯ ಬಿಟ್ಟಯ್ಯನು ಕೆರೆಯೊಂದನ್ನು ಮತ್ತು ಸೋಮನಾಥ ದೇವಾಲಯವನ್ನು ಕಟ್ಟಿಸಿದನು. ಆತ ದೇವ ಸೇವೆಗಾಗಿ ದಾನವನ್ನು ಕೂಡ ಚಿಕಜೀಯನಿಗೆ ನೀಡಿದನು (ಕ. 132). ಕ್ರಿ.ಶ. 1209-10, 1210-11ರಲ್ಲಿ ಮತ್ತು 1211ರ ಕೊನೆಯಲ್ಲಿ ಹೊಯ್ಸಳ ದೊರೆಯು ಹಳ್ಳವೂರಿನಲ್ಲಿದ್ದ (ಕ್ರಮವಾಗಿ ತ. 79 ಕ. 218 ಮತ್ತು ಕ. 133). ಹಾನಿಗೀಡಾದ ಕ. 27ನೆಯ ಶಾಸನವು ಕಂಚಿಗಲ್ಲಿನಲ್ಲಿದೆ; ಇದರ ತೇದಿ ಕ್ರಿ.ಶ. 1216. ಚಳೇಶ್ವರ ಮತ್ತು ಗುಂಡೇಶ್ವರ ದೇವರ ಪ್ರತಿಷ್ಠೆಯ ವಿಷಯವನ್ನು ಉಲ್ಲೇಖಿಸುವ ಈ ಶಾಸನದಲ್ಲಿ ಮಹಾಸಾಮಂತ ನೊಣಬೆಯನಾಯಕ ಮತ್ತು ಮಾಚೆಯನಾಯಕರು ದಾನವಿತ್ತ ವಿಷಯ ನಿರೂಪಿತವಾಗಿದೆ. ಅದೇ ತೇದಿಯ ಕ. 28 ಚಳಿಕೇಶ್ವರ (ಹಿಂದಿನ ಶಾಸನೋಕ್ತ ಚಳೇಶ್ವರ) ದೇವರ ಪ್ರತಿಷ್ಠಾಪನೆಯನ್ನು ಉಲ್ಲೇಖಿಸುತ್ತದೆ ಹಾಗೂ ಹಿಂದಿನ ಶಾಸನೋಕ್ತ ದಾನಿಗಳೇ ನೀಡಿದ ಭೂದಾನವನ್ನು ಪ್ರಸ್ತಾಪಿಸುತ್ತದೆ. ಅವರು ಚಿಕ್ಕ ಚಳಿಕೆಯನಾಯಕನ ಮಕ್ಕಳು. ಈ ಶಾಸನ ಆಸಕ್ತಿ ಕೆರಳಿಸುತ್ತದೆ. ಕಲ್ಯಾಣದ ಹಿರಿಯ ಹೆಮ್ಮಾಡಿರಾಯ ಬಿಟ್ಟಿದೇವನ ಆಸ್ಥಾನಕ್ಕೆ ಭೇಟಿ ನೀಡಿದನಂತೆ; ಆತ ಉತ್ತರದಿಂದ ಬರುತ್ತಿರುವಾಗ ಚಳುಕವ್ವೆ ವೋಲಗಿಕಾರ್ತಿಯಾಗಿದ್ದಳಂತೆ. ಚಿಕ್ಕ ಚಳುಕೆಯ ನಾಯಕ ಮತ್ತು ಆತನ ಮಕ್ಕಳು ತನ್ನದೇ ವಂಶಕುಡಿಗಳೆಂಬ ವಿಷಯ ಆತನಿಗೆ ಆಕೆಯಿಂದ ತಿಳಿಯಿತಂತೆ. ಆತ ಅವರಿಗೆ ಚಳಿಕೆಯ ವೃತ್ತಿಗಳನ್ನು ಅನುಗ್ರಹಿಸಿ ಕಂಚಿಕಲ್ಲು ಮತ್ತು ಬಿದಿರೆಗಳನ್ನು ನೀಡಿದನಂತೆ.

ಕ. 185 ಮಾದಾಪುರದಲ್ಲಿರುವ ಕ್ರಿ.ಶ. 1218ರ ಶಾಸನ, ಎರಡನೆಯ ಬಲ್ಲಾಳನ ರಾಣಿ ಬೈಚಲಮಹಾದೇವಿಯನ್ನು ಅದು ಉಲ್ಲೇಖಿಸುತ್ತದೆ. ಆಕೆ ಮಾದಿಯಕ್ಕನ ಮಗಳು; ಕೇಶಿಯಹಳ್ಳಿಯಲ್ಲಿ ಪ್ರಸನ್ನ ಮಾಧವ ದೇವಾಲಯವನ್ನು ಕಟ್ಟಿಸಿದಾಕೆ. ಕೇಶಿಯಹಳ್ಳಿಗೆ ಪ್ರಸನ್ನ ಮಾಧವಪುರವೆಂಬ ಪ್ರತಿನಾಮಧೇಯ ಪ್ರಾಪ್ತವಾಯಿತು. ಮಗರೆ-300 ಪ್ರದೇಶದ ಚಳಿಕೆಯ ವೃತ್ತಿಗೆ ಅದು ಸೇರಿತ್ತು. ಆಕೆ ಸೇಸೆ ಮತ್ತು ಸಿದ್ಧಾಯಗಳನ್ನು ದಾನವಿತ್ತಳು; ಅರಸನ ಸಹಿ ಸಹಿತವಾದ ತಾಮ್ರಶಾಸನವನ್ನೂ ನಾಲ್ವತ್ತಿರ್ಬರ್ಗೆ ಕೊಟ್ಟಳು.

ಎರಡನೆಯ ನರಸಿಂಹನ ಆಳ್ವಿಕೆಗೆ ಸೇರಿದ ಹತ್ತು ಶಾಸನಗಳಿವೆ. ಕ. 252 ಮಚ್ಚೇರಿಯಲ್ಲಿ ಈಚೆಗೆ ಅನ್ವೇಷಿತವಾದ ಹೊಸ ಶಾಸನ; ಅದರ ಕಾಲ ಕ್ರಿ.ಶ. 1221; ಸ್ಥಳದ ಮಹಾಜನರು ಅಲ್ಲಿನ ಉದ್ಭವಗೋಪಾಲದೇವರ ಸೇವೆಗೆ 20 ನಿಷ್ಕಗಳನ್ನು ಕೊಟ್ಟ ವಿಷಯವನ್ನು ಅದು ದಾಖಲಿಸುತ್ತದೆ. ಪ್ರತಿಗ್ರಹಿ ಯೋಗೀಶ್ವರನನ್ನು ವೈಷ್ಣವಾಗ್ರೇಸರ ಮತ್ತು ಮಂತ್ರವಿದನೆಂದು ಬಣ್ಣಿಸಲಾಗಿದೆ. ಹೊಯ್ಸಳ ದೊರೆಯ ರಾಜಕೀಯ ಸಾಧನೆಗಳನ್ನು ಈ ಶಾಸನ ಉಲ್ಲೇಖಿಸುತ್ತದೆ. ಕ್ರಿ.ಶ. 1223ರ ಕೆರೆಸಂತೆ ಶಾಸನವು (ಕ. 54) ರಾಜಗುರು ಆದಿತ್ಯಭಟ್ಟಯ್ಯ ಭೂಮಿದಾನ ನೀಡಿದ ವಿಷಯವನ್ನು ಪ್ರಸ್ತಾಪಿಸುತ್ತದೆ. ಆತನ ತಂಗಿ ಆಚೆಯಕ್ಕ, ಮಹಾಪ್ರಧಾನ ಗೋಪಾಲದಣ್ಣಾಯಕ ಮತ್ತು ಇತರರು ದಾನಗಳನ್ನಿತ್ತರು. ಚೌಂಡಿಸೆಟ್ಟಿ ಕ್ರಿ.ಶ. 1224ರಲ್ಲಿ ಕೆರೆಸಂತೆಯಲ್ಲಿ ಶಂಭು ದೇವಾಲಯವನ್ನು ಕಟ್ಟಿಸಿ, ವಿಷ್ಣುಸಮುದ್ರದ ಮಹಾಜನರ ಅನುಮತಿ ಪಡೆದು ಅದನ್ನು ಆಳಿಭಟ್ಟನಿಗೆ ಒಪ್ಪಿಸಿದ (ಕ. 64). ಸಂತೆಯಕೆರೆ, ಎಂದರೆ ಕೆರೆಸಂತೆಯ ತೆಲ್ಲಿಗರು ಮತ್ತು ನಕರಂಗಳು ದೇವರ ಸೇವೆಗೆ ದಾನಗಳನ್ನು ಮಾಡಿದರು. ತ. 34ರ ಕಾಲ ಕ್ರಿ.ಶ. 1230. ನರಸಿಂಹ ಮತ್ತು ಸೋವಲದೇವಿಯರನ್ನು ಅದು ಉಲ್ಲೇಖಿಸುತ್ತದೆ. ಅದೇ ಅರಸನ ಮತ್ತು ಅದೇ ತೇದಿಯ ತ. 78 ರಿಂದ ರಾಮಗವುಡ ಮತ್ತು ಇತರರು ಮುದಿಗೆರೆಯಲ್ಲಿ ನಾರಸಿಂಗೇಶ್ವರ ದೇವಾಲಯವನ್ನು ಕಟ್ಟಿಸಿದರೆಂದು ತಿಳಿದುಬರುತ್ತದೆ. ಆಸಂದಿಯ ಕ. 254 ಕುತೂಹಲಕಾರಿಯಾದ ವೀರಗಲ್ಲು ಶಾಸನ; ಹೊಸದಾಗಿ ಅನ್ವೇಷಿತವಾದ್ದು. ಸೇವುಣ ಮತ್ತು ಹೊಯ್ಸಳ ಸೈನ್ಯಗಳ ನಡುವೆ ಹೋರಾಟ ನಡೆಯಿತೆಂದು ತೋರುತ್ತದೆ. ಅದೊಂದು ಕೋಟೆಕಾಳಗ. ದೇವಗೋಯಿರಾಹುತ ಹೋರಾಡಿ ಮಡಿದ. ಆತ ಮಹಾರಾಷ್ಟ್ರಕ್ಕೆ ಸೇರಿದವನು. ಹೀಗಾಗಿ ಈ ಶಾಸನವು ಕನ್ನಡಲಿಪಿ ಮತ್ತು ಮರಾಠಿ ಭಾಷೆಯಲ್ಲಿದೆ; ಕೆಲವು ಶಬ್ದಗಳು ಮಾತ್ರ ಕನ್ನಡ ಭಾಷೆಯವು. ಪ್ರಾಚೀನ ಮರಾಠೀ ಶಾಸನಗಳಲ್ಲಿ ಇದೊಂದು. ಈ ವೀರಗಲ್ಲು ಶಾಸನವು ವಿದ್ವಜ್ಜನರಿಂದ ಹೆಚ್ಚಿನ ಅಧ್ಯಯನವನ್ನು ಬಯಸುತ್ತದೆ. ಕುಂಟನ ಮಡುವಿನ ತ. 36ರ ತೇದಿ ಕ್ರಿ.ಶ. 1233. ಬೇರೆ ಬೇರೆ ಹಳ್ಳಿಗಳಲ್ಲಿ 300 ವೃತ್ತಿಗಳನ್ನು 'ಇಚ್ಛಾವೃತ್ತಿ'ಯಾಗಿ ಸ್ಥಳದ ಮಹಾಜನರು ವಿಂಗಡಿಸಿದರೆಂದು ಅದು ತಿಳಿಸುತ್ತದೆ; ಈ ಶಾಸನವು ಕೆಲವು ನಿಬಂಧನೆಗಳನ್ನು ವಿಧಿಸುತ್ತದೆ.

ಹದಿಮೂರು ಶಾಸನಗಳು ಸೋಮೇಶ್ವರನ ಆಳ್ವಿಕೆಗೆ ಸೇರಿವೆ. ಪ್ರಾಚೀನತಮವಾದ್ದು ಪಟ್ಟಣಗೆರೆಯ ಕ. 119; ಅದರ ತೇದಿ ಕ್ರಿ.ಶ. 1237.[23] ಬಗ್ಗವಳ್ಳಿಯ ತ. 68 ಅರಸನ 5ನೆಯ ಆಳ್ವಿಕೆಯ ವರ್ಷಕ್ಕೆ (ಕ್ರಿ.ಶ. 1239) ಸೇರಿದ್ದು. ಕೆರೆಸಂತೆಯ ಕ. 71ರಿಂದ ಹೊಯ್ಸಳ ದೊರೆಯು ಕ್ರಿ.ಶ. 1240ರಲ್ಲಿ ಗಂಡಗೋಪಾಲನ ವಿರುದ್ಧ ಮುನ್ನಡೆದು ಮಾಪೆಯದ ದಂಡಿನಲ್ಲಿ ಬೀಡು

ಬಿಟ್ಟಿದ್ದನೆಂದು ತಿಳಿದುಬರುತ್ತದೆ. ಗಂಡಗೋಪಾಲ ನೆಲ್ಲೂರಿನ ಆಳರಸ. ಆ ಸಮಯಕ್ಕೆ ಹೊಯ್ಸಳ ದೊರೆಗೆ ಒಬ್ಬ ಮಗ- ಪ್ರಾಯಶಃ ಮೂರನೆಯ ನರಸಿಂಹ - ಜನಿಸಿದ್ದ. ಕ್ರಿ.ಶ. 1252ರಲ್ಲಿ ಸೋಮೇಶ್ವರ ಹಲಗೆರೆಗೆ ಮುನ್ನಡೆದ ಮತ್ತು ದೋರಸಮುದ್ರಕ್ಕೆ ಹಿಂದಿರುಗಿದ (ಕ. 72).

ಮೂರನೆಯ ನರಸಿಂಹನ ಆಳ್ವಿಕೆಗೆ ಒಂದು ಡಜನ್ ಶಾಸನಗಳು ಸೇರಿವೆ. ಕ್ರಿ.ಶ. 1259ರ ತೇದಿಯ ಕ. 61 ಅತಿ ಪ್ರಾಚೀನವಾದ್ದು. ಆತ ದೋರಸಮುದ್ರದಿಂದ ರಾಜ್ಯವಾಳುತ್ತಿದ್ದಾಗ ಮಹಾವಡ್ಡವ್ಯವಹಾರಿ ಸೋವಾಸಿ ಮಾಧವಭಟ್ಟನ ಮಗನಾದ ಅಲ್ಲಾಳದೇವನು ವಿಷ್ಣುಸಮುದ್ರದ ನಿರ್ವಹಣೆಗೆ (ಕೆರೆಯ ಧರ್ಮ) ಇನ್ನೂರು ಗದ್ಯಾಣಗಳನ್ನು ನೀಡಿದ. ಸೋಮಪುರದ ತ. 89ನೆಯ ಶಾಸನದ ತೇದಿ ಕ್ರಿ.ಶ. 1261; ಹಲಸೂರಿನ ಸೋಮನಾಥದೇವರಿಗೆ ಭೂದಾನವಿತ್ತ ವಿಷಯವನ್ನು ಅದು ತಿಳಿಸುತ್ತದೆ. ದೇವಸ್ಥಾನದ ಸ್ಥಾನಿಕ ಸಂಗಮಯ್ಯ ಈ ದಾನದ ಪ್ರತಿಗ್ರಹಿ. ಕ್ರಿ.ಶ. 1267ರಲ್ಲಿ ಮಚ್ಚೇರಿಯ ಚಂದ್ರಭೂಷಣದೇವ ಮತ್ತು ಇತರರು ಚಿಕ್ಕಪಟ್ಟಣಗೆರೆಯ ಸಿಂಗೇಶ್ವರದೇವರಿಗೆ ಭೂಮಿದಾನ ಮಾಡಿದರು (ಕ. 96). ಚಿಕ್ಕಜೀಯ ಮತ್ತು ಇತರರು ದಾನ ಪ್ರತಿಗ್ರಹಿಗಳು. ನಾರಸಿಂಹನು ಸೋಯಿದೇವ ಮತ್ತು ಬಿಜ್ಜಲದೇವಿಯರ ಮಗ (ಕ. 247 ಮತ್ತು 248). ಬೊಮ್ಮಲೆನಾಯಕಿತಿ ಸ್ಥಾಪಿಸಿದ ಬ್ರಹ್ಮಲಾಪುರ ಅಗ್ರಹಾರದಲ್ಲಿ ನೊಣಬಿಸೆಟ್ಟಿಯು ತನ್ನ ಅಜ್ಜ ಮಾಚಿಸೆಟ್ಟಿಯ ಹೆಸರಿನಲ್ಲಿ ಶಿವಾಲಯವೊಂದನ್ನು ಕಟ್ಟಿಸಿದ ವಿಷಯವನ್ನು ಅವು ದಾಖಲಿಸುತ್ತವೆ. ಇವೆರಡೂ ಶಾಸನಗಳ ಕಾಲ ಕ್ರಿ.ಶ. 1272. ಕ್ರಿ.ಶ. 275ರ ಕ. 74ರಿಂದ ಹಡಿಹಾರ ವಾಮಯ್ಯನಿಗೆ ಪಂಚಮಠಾಚಾರ್ಯರು 3½ ಸ್ಥಾನಗಳನ್ನು ನೀಡಿದ ಸಂಗತಿ ತಿಳಿದುಬರುತ್ತದೆ. ರಾಜಗುರು ರುದ್ರಶಕ್ತಿದೇವನ ಉಲ್ಲೇಖವಿದೆ. ಇದೇ ತೇದಿಯ ಮತ್ತಿಹಳ್ಳಿ ಶಾಸನವು (ಕ. 177) ಭೂದಾನವೊಂದನ್ನು ದಾಖಲಿಸುತ್ತದೆ. ಕ್ರಿ.ಶ. 1278ರ ತ. 45ರಲ್ಲಿ ಹಿರಿಯಕೆರೆಯ ರಾಮನಾಥದೇವ ಮತ್ತು ಆದಿಕಲಿನಾಥದೇವರ ಸೇವೆಗೆ ಗೊಟ್ಟಗಡಿಯಲ್ಲಿ ಹೆಜ್ಜುಂಕವನ್ನು ನೀಡಿದ ವಿಷಯ ನಿರೂಪಿತವಾಗಿದೆ; ಮಹಾಪ್ರಧಾನ ಸೇನಬೋವ ಬಮ್ಮಣ್ಣ ದಾನಿ. ಈ ಶಾಸನದಲ್ಲಿ ನಾನಾದೇಸಿಗಳು, ಕೋಲುಕಾರರು, ಬೋವಕ್ಕಳು ಮುಂತಾದವರ ಪ್ರಸ್ತಾಪವಿದೆ. ಮಾರನೆಯ ವರ್ಷ ಎಂದರೆ 1279ರಲ್ಲಿ ಕೇಶವದೇವಣ್ಣ ಎಂಬಾತ ಹೊಸ ತರಿಯಕೆರೆಯನ್ನು ಸ್ಥಾಪಿಸಿ, ತನ್ನ ಗುರು ಅಮೃತಾನಂದರ ಹೆಸರಿನಲ್ಲಿ ದೇವರ ಪ್ರತಿಷ್ಠೆಯನ್ನು ಮಾಡಿಸಿದ (ತ. 50). ಕೇಶವದೇವನಿಗೆ ಭೂದಾನವನ್ನು ನೀಡಲಾಯಿತು. ಹಿಮಗಿರಿಯ ಲಕ್ಷ್ಮೀನರಸಿಂಹದೇವರಿಗೆ ಕ್ರಿ.ಶ. 1281ರಲ್ಲಿ ಭೂದಾನ ಸಂದಿತು (ಕ. 55).

ಹೊಯ್ಸಳ ಮೂರನೆಯ ನರಸಿಂಹ ಮತ್ತು ರಾಮನಾಥರ ತಿಕ್ಕಾಟ ಸುಪರಿಚಿತವಾದ್ದು.[24] ಕ್ರಿ.ಶ. 1283ರಲ್ಲಿ ಅವರಿಬ್ಬರ ನಡುವೆ ಅತಿಘೋರೆಯಲ್ಲಿ ಹೋರಾಟವೊಂದು ನಡೆಯಿತು. ರಾಮನಾಥನ ಗಜಸೈನ್ಯದ ವಿರುದ್ಧ ರಾಯಗವುಡ ಎಂಬ ವೀರ ಹೋರಾಡಿ ಮಡಿದ; ಆತನ ಪತ್ನಿ ಲಕುಮಾದೇವಿ ಸಹಗಮನವನ್ನು ಆಚರಿಸಿದಳು.

ಮೂರನೆಯ ಬಲ್ಲಾಳನಿಗೆ ಸಂಬಂಧಿಸಿದಂತೆ ಏಳು ಶಾಸನಗಳಿವೆ. ಅವು ಕ್ರಿ.ಶ. 1291ರಿಂದ ಕ್ರಿ.ಶ. 1342ರ ಅವಧಿಗೆ ಸೇರಿದವು. ಬಾಣೂರು ಅಗ್ರಹಾರದ ಕ. 126 ಒಂದು ದೀರ್ಘಶಾಸನ. ಪಾಳು ಬಿದ್ದಿದ್ದ ಬಾಣೂರನ್ನು ಅದರ ಉಪಗ್ರಾಮಗಳ ಸಹಿತವಾಗಿ ಕಾಶ್ಯಪಗೋತ್ರದ ಕಳುವ ಸಾಯಣ್ಣನಿಗೆ ಅದನ್ನು ಅಗ್ರಹಾರವಾಗಿ ಮಾಡಲೆಂದು ನೀಡಲಾಯಿತು. ಹೊಸದಾಗಿ ಸ್ಥಾಪಿಸಿದ ಅಗ್ರಹಾರವನ್ನು ಉದ್ಭವಸರ್ವಜ್ಞಲಕ್ಷ್ಮೀಪರವೆಂದು ಕರೆಯಲಾಯಿತು. ಅದನ್ನು ಅನೇಕ ವೃತ್ತಿಗಳಾಗಿ ವಿಭಜಿಸಿ ದೇವರು ಮತ್ತು ಬ್ರಾಹ್ಮಣರಿಗೆ ಹಂಚಿಕೊಡಲಾಯಿತು. ವಿವರಗಳನ್ನು ನೀಡಿದೆ. ಕ್ರಿ.ಶ. 1296ರ ತ. 69 ಬಗ್ಗವಳ್ಳಿಯಲ್ಲಿರುವ ಶಾಸನ, ಮಹಾಪಸಾಯಿತ ಚೆವುಡರಸ ಮತ್ತು ಇತರರು ಅಲ್ಲಿನ ಪಂಚಿಕೇಶ್ವರದೇವರಿಗೆ ಬೀಜಹೊನ್ನಾಗಿ ಧನದಾನ ಮಾಡಿದುದನ್ನು ಅದು ತಿಳಿಸುತ್ತದೆ. ನರಸಿಂಹಪುರದ ಕೊ. 9ರ ಕಾಲ ಕ್ರಿ.ಶ. 1327. ಸುಂಕಾಧಿಕಾರಿ ಮಾದಣ್ಣನ ಮಗ ನಾಗಣ್ಣ ಮಾಡಿದ ಧರ್ಮವನ್ನು ಅದು ಉಲ್ಲೇಖಿಸುತ್ತದೆ. ಅದೇ ತೇದಿಯ ಕೊ. 10 ನರಸಿಂಹದೇವರಿಗೆ ಅನಂತಣ್ಣ ನೀಡಿದ ದಾನದ ವಿಷಯವನ್ನು ತಿಳಿಸುತ್ತದೆ. ಕೃಷ್ಣಪ್ಪನೆಂಬಾತ ಪಾತಾಳ ನರಸಿಂಹದೇವರಿಗೆ ಪೂಜಾದಿ ಸೇವೆಗೆ ದಾನವಿತ್ತ ವಿಷಯವು ಕ್ರಿ.ಶ. 1339 ಕೊ. 9 ರ ವಸ್ತು.

ಬಿದಿರೆಯ ಕ. 137ರ ಕಾಲ ಕ್ರಿ.ಶ. 1367. ಇದೊಂದು ಐತಿಹಾಸಿಕ ಪ್ರಾಮುಖ್ಯದ ವೀರಗಲ್ಲು ಶಾಸನ. ಮೂರನೆಯ ಬಲ್ಲಾಳ ಮತ್ತು ತುರುಕರ ನಡುವಣ ಹೋರಾಟವೊಂದನ್ನು ಅದು ಉಲ್ಲೇಖಿಸುತ್ತದೆ. ಅದು ನಡೆದುದು ಕ್ರಿ.ಶ. 1342ರ ಸೆಪ್ಟೆಂಬರ್ 8 ರಂದು ಬೆರಿಚಿರಪಳ್ಳಿಯಲ್ಲಿ. ರೈಸರ ಶಾಸನಪಾಠ ಪರಿಷ್ಕೃತವಾಗಿದೆ. "‥‥ ಮಹಮ್ಮದೀಯರ ವಿರುದ್ಧ ಆತ ತಿರುಚಿನಾಪಳ್ಳಿಯಲ್ಲಿ ಹೋರಾಡುತ್ತಿದ್ದನೆನ್ನಲಾಗಿದೆ. ಈ ಹೇಳಿಕೆ ಸಾಕಷ್ಟು ಸ್ಪಷ್ಟವಾಗಿ ಕಡೂರು ಜಿಲ್ಲೆಯ ಹಳ್ಳಿಯೊಂದರಲ್ಲಿರುವ ಒಂದು ವೀರಗಲ್ಲಿನಲ್ಲಿ

ಕಂಡುಬರುತ್ತದೆ. ಮಹಮ್ಮದೀಯರೊಡನೆ ಉಂಟಾದ ಹೋರಾಟದಲ್ಲಿ ಬಿದ್ದು 'ದೇವರ ಕೂಡೆ ದೇವಲೋಕಕೆ ಹೋದ' ಗೌಡ (ಗ್ರಾಮಧುರೀಣ) ಕಂಕಯನ ಗೌರವಾರ್ಥವಾಗಿ ಈ ಕಲ್ಲನ್ನು ನಿಲ್ಲಿಸಲಾಯಿತು. ವಾಸ್ತವವಾಗಿ ಕಲ್ಲನ್ನು ನಿಲ್ಲಿಸಿದ್ದು ಶಕ 1290ರ ಪ್ಲವಂಗಸಂವತ್ಸರದಲ್ಲಿ; ಆದರೆ ನಿಜವಾಗಿ ಸಾವು ಸಂಭವಿಸಿದುದು, ಶಾಸನದಲ್ಲಿ ಉಲ್ಲೇಖಿಸಿರುವಂತೆ, (ಇಪ್ಪತ್ತೈದು ವರ್ಷಗಳ ಹಿಂದಿನ) ಚಿತ್ರಭಾನುಸಂವತ್ಸರದ ಆಶ್ವಯುಜ ಶು 8ರಂದು (ಕ್ರಿ.ಶ. 1342 ರ ಸೆಪ್ಟೆಂಬರ್ 8 ರ ತೇದಿಗೆ ಹೊಂದುತ್ತದೆ). ಆದರೆ ಈ ಶಾಸನದ ಪಾಠದ ಓದುವಿಕೆಯಲ್ಲಿ ಅತ್ಯಂತ ಪ್ರಮುಖವೆಂದರೆ ಸ್ಥಳದ ಹೆಸರು. ಮೈಸೂರಿನಲ್ಲಿ ಪುರಾತತ್ತ್ವ ಸಂಶೋಧನಾಲಯದ ನಿರ್ದೇಶಕರಾದ ರಾವ್ ಬಹದೂರ್ ಆರ್. ನರಸಿಂಹಾಚಾರ್ಯರ ಕೃಪೆಯಿಂದ ನನಗೆ ಶಾಸನದ ಮೂಲವನ್ನು ಪರೀಕ್ಷಿಸಲು ಸಾಧ್ಯವಾಗಿದೆ; ಶಾಸನದ ಪಾಠ 'ಚಿರಿಚಿರಪಳಿ'. 'ರ' ಎಂಬ ಅಕ್ಷರ ಮೊದಲರ್ಧದಲ್ಲಿ ಸವೆದಿದೆಯಾದರೂ ಅದು 'ರ' ಎಂಬುದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ಇಡೀ ಶಬ್ದ ತಿರುಚಿನಾಪಳ್ಳಿಯ ಕನ್ನಡ ಉಚ್ಚಾರಣಾ ರೂಪವಾಗಿದೆ. ಮೂರನೆಯ ವೀರಬಲ್ಲಾಳ ಬಿದ್ದ ಕದನದ ಪ್ರದೇಶ ಅದೇ ಇರಬೇಕು."[25] ಆದರೆ ಜೆ.ಡಿ.ಎಂ. ಡೆರೆಟ್ ಎಂಬ ವಿದ್ವಾಂಸರು "ಮೇ ಅಂತ್ಯಭಾಗ ಮತ್ತು ಆಗಸ್ಟ್ ಮಧ್ಯ ಭಾಗಗಳ ನಡುವೆ ಯಾವಾಗಲೋ ಬಲ್ಲಾಳ ಮರಣ ಹೊಂದಿರಬೇಕು" ಎಂದು ಹೇಳುತ್ತಾರೆ.[26]

ಈ ಕಾಲದಲ್ಲಿ ಮದುರೆಯಲ್ಲಿದ್ದ ಇಬ್ನ್ ಬತೂತನ ವೃತ್ತಾಂತ ನಮಗೆ ಲಭ್ಯವಿದೆ. ಬತೂತನ ಬಂಧುವಾದ ಮದುರೆಯ ಸುಲ್ತಾನ ಘಿಯಾಸ್-ಉದ್-ದೀನ್ ಮತ್ತು ಮೂರನೆಯ ಬಲ್ಲಾಳರ ನಡುವೆ ಕದನ ನಡೆಯಿತು. ಆದರೆ ಬತೂತನ ಪ್ರಕಾರ ಕದನ ನಡೆದ ಸ್ಥಳ ಕೊಬ್ಬನ್, ಎಂದರೆ ಕೊಪ್ಪಂ. ಇದನ್ನು ಕಣ್ಣನೂರು ಕೊಪ್ಪಂ ಎಂದು ಗುರುತಿಸಬಹುದು. ಅದು ತಿರುಚಿನಾಪಳ್ಳಿಗೆ ಅನತಿ ದೂರದಲ್ಲಿದೆ.

ಕೆಲವು ಶಾಸನಗಳು ಹೊಯ್ಸಳರವೇ ಆದರೂ ಅವು ಉಲ್ಲೇಖಿಸುವ ದೊರೆಯನ್ನು ಗುರುತಿಸಲು ಸಾಧ್ಯವಾಗುವುದಿಲ್ಲ (ಉದಾಹರಣೆಗೆ ಕ. 58, ತ.42, 66 ಇತ್ಯಾದಿ).

ಹೊಯ್ಸಳ ರಾಜಧಾನಿಗಳು/ಬೀಡುಗಳು

ಹೊಯ್ಸಳರು ಬೇರೆ ಬೇರೆ ರಾಜಧಾನಿಗಳು ಹಾಗೂ ಬೀಡುಗಳಿಂದ ರಾಜ್ಯವಾಳುತ್ತಿದ್ದರೆಂಬ ಅಂಶವನ್ನು ಈ ಕೆಳಗೆ ನೀಡಿದ ಪಟ್ಟಿಯು ತಿಳಿಸುತ್ತದೆ; ಕಾಲಾನುಕ್ರಮದಲ್ಲಿ ಅವನ್ನು ಜೋಡಿಸಲಾಗಿದೆ.

ಕಾಲ (ಕ್ರಿ.ಶ. ದಲ್ಲಿ)	ಸಂಖ್ಯೆ	ಸ್ಥಳ
1095	ಕ. 73	ಬೇಲೂರು
1136	ಕ. 198	ದೋರಸಮುದ್ರ
1139	ಕ. 38	ದೋರಸಮುದ್ರ
1140	ಕ. 116	ಬೇಲೂರು
1141	ಕ. 221 ಮತ್ತು 223	ದೋರಸಮುದ್ರ
1141	ಕ. 67	ಬಂಕಾಪುರ
1143	ಕ. 70	ಬಂಕಾಪುರ
1148	ಕ. 178 ಮತ್ತು ತ 20	ದೋರಸಮುದ್ರ
1153	ಕ. 186	ದೋರಸಮುದ್ರ
1158	ತ. 88 ಮತ್ತು 96	ದೋರಸಮುದ್ರ
1159	ಕ. 43	ದೋರಸಮುದ್ರ
1162	ಕ. 134	ದೋರಸಮುದ್ರ

1170	ಕ. 179	ದೋರಸಮುದ್ರ
1172	ಕ.169	ದೋರಸಮುದ್ರ
1178	ಕ. 57	ದೋರಸಮುದ್ರ
1184	ತ. 51 ಮತ್ತು 54	ದೋರಸಮುದ್ರ
1187-88	ಕ. 200	ದೋರಸಮುದ್ರ
1189-90	ಕ. 148	ದೋರಸಮುದ್ರ
1196	ತ. 12	ಹಳ್ಳವೂರು (ವಿಜಯಸಮುದ್ರ)
12-13ನೇ ಶತಮಾನ	ಕ. 101	ಲೊಕ್ಕುಗುಂಡಿ
1202	ಕ. 199	ಲೊಕ್ಕುಗುಂಡಿ
1206	ಕ. 217	ಹಳ್ಳವೂರು
1208	ಕ. 132	ಹಳ್ಳವೂರು
1209-10	ತ. 79	ಹಳ್ಳವೂರು
1210-11	ಕ. 218	ಹಳ್ಳವೂರು
1211	ಕ. 29	ದೋರಸಮುದ್ರ
1211	ಕ. 133	ಹಳ್ಳವೂರು
1216	ಕ. 28	ದೋರಸಮುದ್ರ
1218	ಕ. 185	ದೋರಸಮುದ್ರ
1227	ತ. 94	ದೋರಸಮುದ್ರ
1237	ಕ. 119	ದೋಚಲೆ (?)
1240	ಕ. 71	ಮಾಪೆಯದದಂಡು
1241	ಕ. 146	ಕಣ್ಣನೂರು
1243	ಕ. 120	ಪಾಚಲೆ
1252	ಕ. 72	ದೋರಸಮುದ್ರ
1253	ಕ. 106	ಕಣ್ಣನೂರು
1259	ಕ. 61	ದೋರಸಮುದ್ರ
1267	ಕ. 96	ದೋರಸಮುದ್ರ
1275	ಕ. 74	ದೋರಸಮುದ್ರ
1278	ತ. 45	ದೋರಸಮುದ್ರ
1281	ಕ. 55	ದೋರಸಮುದ್ರ
1291	ಕ. 126	ದೋರಸಮುದ್ರ
13ನೇ ಶತಮಾನ	ತ.1	ದೋರಸಮುದ್ರ

ಬಿಟ್ಟೇನಹಳ್ಳಿಯ ಕ. 133ರಲ್ಲಿ ಕೊಟ್ಟಿರುವ ಕಾಲ ಶಕ 1134, ಪ್ರಜಾಪತಿ, ಪುಷ್ಯ ಶು. 1, ಸೋಮವಾರ ಮತ್ತು ಉತ್ತರಾಯಣ ಸಂಕ್ರಮಣ. ಈ ತೇದಿ ವಿವರಗಳು ಕ್ರಿ.ಶ. 1211ರ ಡಿಸೆಂಬರ್ 17ಕ್ಕೆ ಸಮನಾಗುತ್ತವೆ. ಆದರೆ ಸಂಕ್ರಮಣವಿರಲಿಲ್ಲ.

ಈ ತೇದಿಯಂದು ಹೊಯ್ಸಳ ಎರಡನೆಯ ಬಲ್ಲಾಳ ಹಳ್ಳವುರದ ನೆಲೆವೀಡಿನಿಂದ ರಾಜ್ಯವಾಳುತ್ತಿದ್ದ. ಕಂಚಿಗಲ್ಲಿನ ಕ.29 ರಲ್ಲಿ ಕೊಟ್ಟಿರುವ ಕಾಲ ಪ್ರಜಾಪತಿಸಂವತ್ಸರ ಮತ್ತು ಉತ್ತರಾಯಣ ಸಂಕ್ರಾಂತಿ. ಹೊಯ್ಸಳ ದೊರೆಯ ಹೆಸರು ನಷ್ಟವಾಗಿದೆ; ಶಕವರ್ಷವನ್ನೂ ಕೊಟ್ಟಿಲ್ಲ. ರೈಸ್ ಅವರ ಪ್ರಕಾರ ಇದರ ತೇದಿ ಕ್ರಿ.ಶ. 1211. ಶಾಸನೋಕ್ತ ಸಂಕ್ರಾಂತಿ ಇದ್ದುದು ಆ ವರ್ಷದ ಡಿಸೆಂಬರ್ 26 ರಂದು. ದೊರೆ ದೋರಸಮುದ್ರದಿಂದ ಆಳುತ್ತಿದ್ದ. ಕೇವಲ ಎಂಟು ದಿನಗಳ ಅವಧಿಯಲ್ಲಿ ಆಗಿನ ದಿನಗಳಲ್ಲಿ ಇಂದಿನ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಹಳ್ಳವೂರಿನಿಂದ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ದೋರಸಮುದ್ರಕ್ಕೆ (ಹಳೇಬೀಡು) ಪ್ರಯಾಣ ಮಾಡಲು ಸಾಧ್ಯವಿತ್ತೆ? ಇದು ಸ್ವಾರಸ್ಯಕರವಾದ ಅಂಶ ಹಾಗೂ ಹೆಚ್ಚಿನ ಗಮನಕ್ಕೆ ಅರ್ಹವಾದ್ದು.

ಪಾಚಲೆಯು ಚೋಳು ನಾಡಿನಲ್ಲಿತ್ತೆಂಬುದು ನಮಗೆ ತಿಳಿದಿದೆ.[27] ಕ್ರಿ.ಶ. 1237ರಲ್ಲಿ ಹೊಯ್ಸಳ ಸೋಮೇಶ್ವರನು ದೋಚಲೆ ಬೀಡಿನಿಂದ ರಾಜ್ಯವಾಳುತ್ತಿದ್ದ (ಕ. 119) ಹಾಗೂ ಕ್ರಿ.ಶ. 1243ರಲ್ಲಿ ಪಾಚಲೆವೀಡಿನಿಂದ ಆಳ್ವಿಕೆ ನಡೆಸುತ್ತಿದ್ದ (ಕ. 120). ಎರಡೂ ಶಾಸನಗಳು ಪಟ್ಟಣಗೆರೆಯವು. ಇಲ್ಲಿ ಊಹೆಯೊಂದನ್ನು ಮಾಡಬಹುದು. ಹೊಯ್ಸಳ ಕಾಲದ 'ದೋ' ಮತ್ತು 'ಪಾ' ಎಂಬ ಕನ್ನಡ ಅಕ್ಷರಗಳಲ್ಲಿ ಬಹಳ ಹತ್ತಿರದ ಸಾಮ್ಯಗಳಿವೆ; ಆದ್ದರಿಂದ ಕ. 119ರಲ್ಲಿ ದೋಚಲೆ ಎಂದು ಓದಿರುವುದು ತಪ್ಪಾಗಿರಬಹುದು ಪಾಚಲೆ ಸರಿಯಾದ ಪಾಠವಿರಬೇಕು.

ವಿಜಯನಗರ

ಪ್ರಸ್ತುತ ಸಂಪುಟದಲ್ಲಿ ವಿಜಯನಗರದ ಅರಸರ ಆಳ್ವಿಕೆಗೆ ಸೇರಿದ ಅತಿ ಪ್ರಾಚೀನ ಶಾಸನಗಳೆಂದರೆ ಕ್ರಿ.ಶ. 1369ರ ನಪು. 18 ಮತ್ತು 20. ಮೊದಲನೆಯ ಶಾಸನದಲ್ಲಿ ಕುಮಾರ ವಿರುಪಣ್ಣವೊಡೆಯನನ್ನು ಆರಗದ ರಾಜ್ಯಪಾಲನನ್ನಾಗಿ ಉಲ್ಲೇಖಿಸಿದೆ. ಎರಡನೆಯ ಶಾಸನವು ಆತನ ಜೊತೆಗೆ ಮಾದರಸ ಒಡೆಯ ಮತ್ತು ಬೊಲ್ಲರಸರನ್ನು ಸಹ ಉಲ್ಲೇಖಿಸುತ್ತದೆ. ಬೊಲ್ಲರಸ ಅಥವಾ ಬೊಲ್ಲುಭೂಪನ ಪ್ರಸ್ತಾಪ ನಪು. 21 ರಲ್ಲಿದೆ. ಸಕ್ಕರೆಪಟ್ಟಣದ ಕ. 212 ಒಂದು ಅತೇದಿ ಶಾಸನ; ಬಳೆಗಾರ ಕುಲದ ಮಾಯಣ್ಣ ಮತ್ತು ಮಾಕಪ್ಪ ಎಂಬುವವರು ಲಕ್ಷ್ಮೀಸೇನಭಟ್ಟಾರಕರಿಗೆ ಹೊಸಪಟ್ಟಣದಲ್ಲಿ ಒಂದು ನಿಷಿಧಿಯನ್ನು ಕಟ್ಟಿಸಿದ ಉಲ್ಲೇಖ ಅದರಲ್ಲಿದೆ.

ಎರಡನೆಯ ಹರಿಹರನ ಆಳ್ವಿಕೆಗೆ ಸೇರಿದ ನಪು. 15ರ ಕಾಲ ಕ್ರಿ.ಶ. 1377. ಆರಗ ರಾಜ್ಯವನ್ನು ವಿರುಪಣ್ಣ ಹಾಗೂ ಕುಂಕುಸೆ ನಾಡನ್ನು ಲಕ್ಕಣ್ಣವೊಡೆಯ ಪಾಲಿಸುತ್ತಿದ್ದರು. ವಿದ್ಯಾರಣ್ಯ ಶ್ರೀಪಾದರು ಶೃಂಗೇರಿ ಪೀಠದ ಪ್ರಖ್ಯಾತ ಯೋಗಿಯಾಗಿದ್ದರು. ರಾಯದತ್ತವೆಂದು ವರ್ಣಿತವಾದ ನಾಗೂರು ಅಗ್ರಹಾರವನ್ನು ಅದು ಉಲ್ಲೇಖಿಸುತ್ತದೆ. ಭಂಡಿಗಡಿಯ ಕೊ. 25ನೆಯ ಶಾಸನೋಕ್ತ ವಿರುಪಣ್ಣನಿಂದ ನಪು. 15ರ ವಿರುಪಣ್ಣ ಅಭಿನ್ನ. ಮುನಿಯೂರಿನ ಪ್ರಸನ್ನ ವಿಶ್ವೇಶ್ವರದೇವರ ಸೇವೆಗೆ ದಾನ ನೀಡಿದ ಸಂಗತಿಯನ್ನು ಕೊ. 25 ಪ್ರಸ್ತಾಪಿಸುತ್ತದೆ. ಕ್ರಿ.ಶ. 1381ರಲ್ಲಿ ಚಿಕ್ಕರಾಯ ಆರಗವನ್ನು ಆಳುತ್ತಿದ್ದ (ಕೊ. 26). ಕುಂದ್ಕೆರೆಯಲ್ಲಿ ಇತ್ತೀಚೆಗೆ ಅನ್ವೇಷಿತವಾದ ಕೊ. 42ನೆಯ ಶಾಸನದ ಕಾಲ ಕ್ರಿ.ಶ. 1381; ಇದು ಕೂಡ ಚಿಕ್ಕರಾಯನ ರಾಜ್ಯಭಾರವನ್ನು ಉಲ್ಲೇಖಿಸುತ್ತದೆ. ಶೃಂಗೇರಿಯ ಮಠದ ವಿದ್ಯಾರಣ್ಯ ಶ್ರೀಪಾದರನ್ನು ಅದು ಉಲ್ಲೇಖಿಸುತ್ತದೆ. ಕ್ರಿ.ಶ. 1386ರ ಸಿಡಿಮನೆ ಶಾಸನವು (ಕೊ. 29) ಎರಡನೆಯ ಹರಿಹರನ ಆಳ್ವಿಕೆಗೆ ಸೇರಿದ್ದು. ಅಣ್ಣಯದೇವನಿಗೆ ವೀರಬಲ್ಲಾಳನು ಸಿಡಿಯಮಾನಿ ಗ್ರಾಮವನ್ನು ದಾನವಿತ್ತ ವಿಷಯವನ್ನು ಅದು ಪ್ರಸ್ತಾಪಿಸುತ್ತದೆ; ಪ್ರತಿಗ್ರಹಿಯ ಮೊಮ್ಮಗನಾದ ವಿದ್ಯಾಶಂಕರದೇವವೊಡೆಯನು ವಿಜಯನಗರದ ದೊರೆಯಿಂದ ಆ ದಾನವನ್ನು ಪುನರ್ದತ್ತಿಯಾಗಿ ಪಡೆದನು. ಕ್ರಿ.ಶ. 1392ರ ಹರಿಹರಪುರದ ಶಾಸನದಿಂದ (ಕೊ. 31) ಎರಡನೆಯ ಹರಿಹರನು 'ಸಕಲವರ್ಣಾಶ್ರಮಂಗಳನ್ನು ಧರ್ಮದಿಂದ' ಪರಿಪಾಲಿಸುತ್ತಿದ್ದ ವಿಷಯ ತಿಳಿದುಬರುತ್ತದೆ. ದೊರೆಯು ಪ್ರತಾಪಹರಿಹರಪುರವನ್ನು ಮಾಧವ ರಾಮಚಂದ್ರ ಸರಸ್ವತಿವೊಡೆಯರಿಗೆ ದಾನ ನೀಡಿದ. ಹಾಲ್ಮುತ್ತೂರಿನ ಕೊ. 37 ಹಾನಿಗೀಡಾಗಿದೆ. ಆ ಗ್ರಾಮ ಮತ್ತು ಅದರ ಉಪಗ್ರಾಮಗಳ ಕ್ರಯಪತ್ರವನ್ನು ಅದು ಒಳಗೊಂಡಿದೆ. ಕ್ರಿ.ಶ. 1403ರ ಕೊ. 17 ಮತ್ತು 18 ಎರಡನೆಯ ಹರಿಹರನ ಆಳ್ವಿಕೆಯ ಕಾಲದವು. ಉಪಗ್ರಾಮಗಳ ಸಹಿತವಾಗಿ ಆರು ಗ್ರಾಮಗಳನ್ನು ವಿಠಣ್ಣವೊಡೆಯನಿಗೆ ದಾನ ನೀಡಿದ ವಿಷಯವನ್ನು ಮೊದಲನೆಯ ಶಾಸನವು ತಿಳಿಸಿದರೆ, ಎರಡನೆಯದು ಅದೇ ವ್ಯಕ್ತಿಗೆ ಕ್ರಯದಾನ ಮಾಡಿದ ವಿಷಯವನ್ನು ದಾಖಲಿಸುತ್ತದೆ.

ಹಾಲ್ಮುತ್ತೂರಿನ ಕೊ. 38 ಎರಡನೆಯ ಬುಕ್ಕನ ಆಳ್ವಿಕೆಗೆ ಸೇರಿದ್ದು. ಕೆಲವು ಬ್ರಾಹ್ಮಣರಿಗೆ ಹಾಲ್ಮುತ್ತೂರು ಗ್ರಾಮವನ್ನು ದಾನವಿತ್ತ ಸಂಗತಿಯನ್ನು ಅದು ನಿರೂಪಿಸುತ್ತದೆ. ವಿಜಯನಗರ ದೊರೆಗಳ ವಂಶಾವಳಿಯನ್ನು ಅದು ಕೊಡುತ್ತದೆ:

ಸಂಗಮ

ಹರಿಹರ I — ಕಂಪರಾಯ — ಬುಕ್ಕ ಪತ್ನಿ ಗೌರಾಂಬಿಕೆ — ಮಾರಪ — ಮುದ್ದಪ

ಬುಕ್ಕ ಪತ್ನಿ ಗೌರಾಂಬಿಕೆ
|
ಹರಿಹರ II ಪತ್ನಿ ಪಂಪಾ
|
ಬುಕ್ಕ II

ಮುಂದಿನ ಶಾಸನೋಕ್ತ ದೊರೆ ಒಂದನೆಯ ದೇವರಾಯ. ದೊರೆಯ ಮಗ ಭಾಸ್ಕರರಾಯನನ್ನು ಕ್ರಿ.ಶ. 1407ರ ಕೊ. 47 ಉಲ್ಲೇಖಿಸುತ್ತದೆ. ಆತನ ಆದೇಶದ ಮೇರೆಗೆ ಆರಗ ಮತ್ತಿತರ ಪ್ರದೇಶಗಳನ್ನು ವಿಠಣ್ಣ ಒಡೆಯ ಪಾಲಿಸುತ್ತಿದ್ದ. ವಿದ್ಯಾಶಂಕರ ದೇವರ ಸೇವೆಗೆ ಭಾನುಪುರ ಗ್ರಾಮವನ್ನು ನೀಡಲಾಯಿತು. ಮಾರನೆಯ ವರ್ಷ ದೇವರಾಯನ ಅಪ್ಪಣೆಯ ಮೇರೆಗೆ ವೀರಣ್ಣೊಡೆಯ ವಿದ್ಯಾನಾಥದೇವರಿಗೆ ದಾನ ನೀಡಿದ (ಕೊ.36). ಕ್ರಿ.ಶ. 1409ರ ಕ. 175 ಮಚ್ಚೇರಿಯ ಒಂದು ತಾಮ್ರಶಾಸನ. ದೊರೆಯು ತುಲಾಭಾರ ಮತ್ತು ಬ್ರಹ್ಮಾಂಡ ಎಂಬ ಮಹಾದಾನಗಳ ಸಂಬಂಧದಲ್ಲಿ ಅನೇಕ ಮಹಾಜನರಿಗೆ ಹಿರಿಯ ಬಾಸೂರು ಮತ್ತು ಚಿಕ್ಕ ಬಾಸೂರು ಗ್ರಾಮಗಳನ್ನು ನೀಡಿದುದನ್ನು ಅದು ದಾಖಲಿಸುತ್ತದೆ. ಹರಿಹರಪುರದ ರಾಮಚಂದ್ರ ಸರಸ್ವತಿವೊಡೆಯರಿಗೆ ಗ್ರಾಮದಾನ ಮಾಡಿದ ವಿಷಯ ಕ್ರಿ.ಶ. 1410ರ ಕೊ. 30 ರಿಂದ ತಿಳಿದುಬರುತ್ತದೆ. ಕ್ರಿ.ಶ. 1413ರಲ್ಲಿ ಬಾಳೆಯಹಳ್ಳಿಯ ವೀರೇಶ್ವರದೇವರಿಗೆ ಅಧಿಕಾರಿ ಬೊಮ್ಮರಸ ಭೂದಾನವಿತ್ತ (ನಪು. 22). ಕೊ. 14 ಒಂದು ಅಪೂರ್ಣ ಶಾಸನ; ಅದರ ಕಾಲ ಕ್ರಿ.ಶ. 1417. ನಾಗಣ್ಣನಿಗೆ ಕುಪ್ಪಹಳ್ಳಿಯನ್ನು ಕೊಟ್ಟ ವಿಷಯ ಕ್ರಿ.ಶ. 1418ರ ಹರಿಹರಪುರದ ಕೊ. 34ರಲ್ಲಿ ನಿರೂಪಿತವಾಗಿದೆ. ಸಿರಿಗಿರಿನಾಥವೊಡೆಯ ಕ್ರಿ.ಶ. 1427ರಲ್ಲಿ ಆರಗ ರಾಜ್ಯದ ಪಾಲಕನಾಗಿದ್ದ (ಕೊ. 22); ಕ್ರಯಪತ್ರವೊಂದನ್ನು ಈ ಶಾಸನ ಉಲ್ಲೇಖಿಸುತ್ತದೆ.

ಕ್ರಿ.ಶ. 1448ರ ಕೊ. 27 ಮಲ್ಲಿಕಾರ್ಜುನನ ಆಳ್ವಿಕೆಗೆ ಸಂಬಂಧಿಸಿದ್ದು. ಆರಗ ರಾಜ್ಯವನ್ನು ಸಿರಿಗಿರಿನಾಥ ಒಡೆಯ ಪಾಲಿಸುತ್ತಿದ್ದ. ಕ್ರಿ.ಶ. 1451ರ ಕೊ. 1 ದೇವರಾಯನ ಆಳ್ವಿಕೆಗೆ ಸೇರಿದ್ದು ಶೃಂಗೇರಿ ಮಠದ ಪುರುಷೋತ್ತಮ ಭಾರತಿ ಸ್ವಾಮಿಗಳನ್ನು ಉಲ್ಲೇಖಿಸುತ್ತದೆ. ಈಚೆಗೆ ಪ್ರಕಟವಾದ ಕನ್ನಡ ವಿಶ್ವವಿದ್ಯಾಲಯ ಶಾಸನ ಸರಣಿಯ 3ನೆಯ ಸಂಪುಟದ ಪೀಠಿಕೆಯಲ್ಲಿ ಸಂಪಾದಕರು ಹೀಗೆ ಹೇಳುತ್ತಾರೆ:

"....ವಿದ್ಯಾರಣ್ಯ ಹೆಸರು ಕ್ರಿ.ಶ. ೧೪೩೯ ರ ಶಾಸನದಲ್ಲಿ ಕಾಣಿಸಿಕೊಂಡಿದೆ (ಕೊಪ್ಪ ೧೯).... ಕ್ರಿ.ಶ. ೧೫ನೆಯ ಶತಮಾನದಲ್ಲಿ ಒಬ್ಬ ವಿದ್ಯಾರಣ್ಯಮುನಿ ಇದ್ದರು ಎಂದು ಸ್ಪಷ್ಟವಾಗುತ್ತದೆ ಹಾಗೂ ವಿಜಯನಗರದ ಅರಸರು ಇವನಿಗೆ ದಾನ ನೀಡಿದ್ದಾರೆ. ಕ್ರಿ.ಶ. ೧೪೫೦ರಲ್ಲಿ ಸಿಂಗೇರಿಯ ಮುನಿಯೂ ಭಾರತಿ ಶ್ರೀಪಾದಂಗಳಿದ್ದ ಉಲ್ಲೇಖವಿದೆ (ಕೊಪ್ಪ ೪೪).[28]

ಆದರೆ ಮೇಲಿನ ಅಭಿಪ್ರಾಯಗಳು ಪರಿಷ್ಕೃತವಾಗಬೇಕಾದ ಅಗತ್ಯವಿದೆ. ನಪು. 15ರ (ಹಿಂದಿನ ಆವೃತ್ತಿಯ ಕೊ. 19) ಶಕವರ್ಷವನ್ನು 1299 ಎಂದು ತೆಗೆದುಕೊಳ್ಳಬೇಕಾಗುತ್ತದೆ; ಇತರ ತೇದಿ ವಿವರಗಳು ಸಮರ್ಪಕವಾಗಿ ಕ್ರಿ.ಶ. 1377ರ ಅಕ್ಟೋಬರ್ 5ಕ್ಕೆ ಹೊಂದಿಕೆಯಾಗುತ್ತವೆ. ಅದು ವಿದ್ಯಾರಣ್ಯರು ಜೀವಿಸುತ್ತಿದ್ದ ಕಾಲವೂ ಹೌದು. ಭಾರತೀ ಶ್ರೀಪಾದ ಎಂಬ ಹೆಸರಿನ ಯಾವ ಗುರುಗಳೂ ಶೃಂಗೇರಿ ಪೀಠದಲ್ಲಿರಲಿಲ್ಲ. ಕೊ. 1ರ ಶಾಸನ ಪಾಠವನ್ನು ಪುರುಷ್ಯುತ್ತಮ ಭಾರತೀ ಶ್ರೀಪಾದ ಎಂದು ಓದಿಕೊಳ್ಳಬೇಕು.[29] ಕ್ರಿ.ಶ. 1451ರಲ್ಲಿ ಅವರು ಶೃಂಗೇರಿ ಪೀಠಾಧಿಪತಿಗಳಾಗಿದ್ದರು.

ಬಂಕನಕಟ್ಟೆಯ ತ. 65 ಎರಡನೆಯ ನರಸಿಂಹನ ಆಳ್ವಿಕೆಗೆ ಸೇರಿದ್ದು, ಈ ಶಾಸನದ ಕಾಲ ಕ್ರಿ.ಶ. 1504, ಚಿಕ್ಕರಾಯನಿಗೆ ಬಂಕನಗಟ್ಟವನ್ನು ನೀಡಿದ ವಿಷಯ ಶಾಸನದ ವಸ್ತು.

ಯಗಟಿಯ ಕ. 189ರ ಕಾಲ ಕ್ರಿ.ಶ. 1518; ಆಳುತ್ತಿದ್ದ ದೊರೆ ಕೃಷ್ಣದೇವರಾಯ. ಹಡಪದ ಜಿಯ್ಯಪನಾಯಕನ ಉಲ್ಲೇಖವಿದೆ. ಪುರದ ಕ. 123ರಲ್ಲಿ ಉಕ್ತನಾದ ಹಡಪದ ಬಯ್ಯಪನಾಯಕನ ತಂದೆ ತಿಮ್ಮಣ್ಣನಾಯಕ. ಈತನ ಪುಣ್ಯಾರ್ಥವಾಗಿ ಈತನ ವಂಶಜ ಚೆನ್ನಪನು ಕಾರೆಯಹಳ್ಳಿ ಗ್ರಾಮವನ್ನು ಪುರದ ಮಲ್ಲಿಕಾರ್ಜುನದೇವರಿಗೆ ದಾನವಿತ್ತ. ಈ ಶಾಸನದ ತೇದಿ ಕ್ರಿ.ಶ. 1526. ಮಾರನೆಯ ವರ್ಷ ಬಯ್ಯಪನಾಯಕನು ರಾಜನ ಸಮ್ಮತಿ ಪಡೆದು ಯಗಟಿ-10000 ಪ್ರದೇಶದ ಶೂದ್ರರಿಗೆ ಮದುವೆಯ ಮೇಲಿನ ತೆರಿಗೆಯನ್ನೇ ಮನ್ನಾ ಮಾಡಿದನು.

ಅಚ್ಯುತರಾಯನ ಆಳ್ವಿಕೆಗೆ ಸೇರಿದ ಕ. 140ರ ತೇದಿ ಕ್ರಿ.ಶ. 1530. ರಾಜನಿಂದ ಬೂದಿಹಾಳ ಸೀಮೆಯನ್ನು ಸಿಂಗಣನಾಯಕ ಪಡೆದ. ಬೆಲಗೂರಿನ ಸಿದರಾಮೇಶ್ವರದೇವರಿಗೆ ಸಿರಿಗಿರಿಪುರವನ್ನು ಸಿಂಗಣನಾಯಕನ ಬಾಗಿಲಪ್ರಧಾನನಾದ ಸಂಕರಸೈಯ ದಾನವಿತ್ತ. ಕ್ರಿ.ಶ. 1532 ರಲ್ಲಿ ಹೇರಡಿಗಟ್ಟ ಗ್ರಾಮವನ್ನು ದಂಡಿಗೆ ಉಂಬಳಿಯಾಗಿ ಸಿಂಗಟಿಗೆರೆಯ ಲಿಂಗಣಗೌಡನಿಗೆ ನೀಡಲಾಯಿತು. ದಾನಿ ರಾಮಪಯ ದೊರೆಯ ಕೈಕೆಳಗಿನ ಒಬ್ಬ ಅಧಿಕಾರಿಯಾಗಿದ್ದ (ಕ. 249).

ಆಸಂದಿಯ ಕ. 22ರ ಕಾಲ ಕ್ರಿ.ಶ. 1542. ಅರಸನ ಪುಣ್ಯಪ್ರಾಪ್ತಿಗಾಗಿ ಔಭಳರಾಜನು ಮುಕ್ತಿಹಳ್ಳಿಯಲ್ಲಿ ಹದಿನೆಂಟು ಜಾತಿಗಳವರಿಗೆ ಮದುವೆದೆರಿಗೆ ನಾಡತಳವಾರಿಕೆ ಮುಂತಾದ ಕೆಲವು ತೆರಿಗೆಗಳನ್ನು ಮನ್ನಾ ಮಾಡಿದ ವಿಷಯವನ್ನು ಅದು ನಮೂದಿಸುತ್ತದೆ. ಅದೇ ವರ್ಷಕ್ಕೆ ಸೇರಿದ ಕ. 98 ನೆಯ ಶಾಸನದಲ್ಲಿ ಅರಸನ ಬಾಗಿಲ ದಳವಾಯಿಯಾದ ವೆಂಗಳರಾಜನು ಕುಕಸಮುದ್ರದ ನಿರ್ಮಾಣ ಮಾಡಿದ ವಿಷಯ ದಾಖಲುಗೊಂಡಿದೆ.

ಕಾತೂರಿನ ತ. 48 ಕ್ರಿ.ಶ. 1545ರ ತೇದಿಯದು. ಸದಾಶಿವರಾಯನ ಕೈಕೆಳಗಿದ್ದ ರಾಮರಾಜವೊಡೆಯನೆಂಬ ಅಧಿಕಾರಿಯನ್ನು ಅದು ಉಲ್ಲೇಖಿಸುತ್ತದೆ. ಆತ ಕೊಂಡೋಜನೆಂಬ ನಾಯಿಂದನಿಗೆ ಕೆಲವು ತೆರಿಗೆಗಳ ಆದಾಯವನ್ನು ನೀಡಿದ ವಿಷಯವನ್ನು ಅದರಲ್ಲಿ ನಿರೂಪಿಸಿದೆ. ಹಿರಿಯಂಗಳದ ಕ. 230ರ ಕಾಲ ಕ್ರಿ.ಶ. 1546; ಅಂಥದೇ ದಾನವೊಂದನ್ನು ಅದು ಉಲ್ಲೇಖಿಸುತ್ತದೆ. ದಾನಿ ಮತ್ತು ಪ್ರತಿಗ್ರಹಿಗಳೂ ಅವರೇ. ಕ್ರಿ.ಶ. 1547ರ ತ. 6ರಿಂದ ಅಮೃತೇಶ್ವರದೇವರ ಸೇವೆಗಳಿಗೆ ಕೆಲವು ಆದಾಯವನ್ನು ನೀಡಿದ ವಿಷಯ ತಿಳಿಯುತ್ತದೆ. ಆದರೆ ಪ್ರತಿಗ್ರಹಿಯ ಹೆಸರು ಸ್ಪಷ್ಟವಿಲ್ಲ. ರಾಜ ರಾಮರಾಜ ಅಯ್ಯನ ಪುಣ್ಯ ಪ್ರಾಪ್ತಿಗಾಗಿ ದಾನವನ್ನು ಮಾಡಲಾಯಿತು. ಕೆರೆಸಂತೆಯ ಕ. 65ರಲ್ಲಿ ಸಿದೆದೇವ ಮಹಾಅರಸು ತನ್ನ ತಂದೆತಾಯಿಗಳಿಗಾಗಿ ವಿಠಲದೇವರಿಗೆ ಭೂಮಿದಾನ ಮಾಡಿದ ವಿಷಯ ನಿರೂಪಿತವಾಗಿದೆ. ಈ ಶಾಸನದ ಕಾಲ ಕ್ರಿ.ಶ. 1550. ನಪು. 36 ಲಿಂಗಾಪುರದಲ್ಲಿದೆ. ಆ ಗ್ರಾಮದಲ್ಲಿ ಲಿಂಗಣ್ಣನಾಯಕನು ವಿರೂಪಾಕ್ಷ ಲಿಂಗವನ್ನು ಪ್ರತಿಷ್ಠೆ ಮಾಡಿಸಿ ಭೂಮಿದಾನ ನೀಡಿದನೆಂದು ಅದು ತಿಳಿಸುತ್ತದೆ. ಎರ ಕೃಷ್ಣಪ್ಪನಾಯಕನನ್ನು ಉಲ್ಲೇಖಿಸುವ ತ. 75ರ ಕಾಲ ಕ್ರಿ.ಶ. 1555.

ಕ್ರಿ.ಶ. 1573ರ ತೇದಿಯ ಕೊ. 32 ಹರಿಹರಪುರದಲ್ಲಿದೆ. ಈ ಶಾಸನದ ಮಹತ್ವವೆಂದರೆ ನಾಲ್ವರು ಮುಖ್ಯ ಮತ್ತು ಸಮಕಾಲೀನ ವ್ಯಕ್ತಿಗಳ ಉಲ್ಲೇಖವಿರುವುದು; ಅವರೆಂದರೆ ಪೆನುಗೊಂಡೆಯ ಶ್ರೀರಂಗರಾಯ, ಶೃಂಗೇರಿಯ ನರಸಿಂಹಭಾರತೀ ಸ್ವಾಮಿಗಳು, ಕಾರ್ಕಳದ ಭಯಿರರಸವೊಡೆಯ ಹಾಗೂ ಹರಿಹರಪುರದ ಮಾಧವ ಸರಸ್ವತಿವೊಡೆಯರು. ಕೊಡತಾಳಿನ ಕೊ. 4ರ ಕಾಲ ಕ್ರಿ.ಶ. 1575. ಪೆನುಗೊಂಡೆಯಿಂದ ಶ್ರೀರಂಗರಾಯನು ರಾಜ್ಯವಾಳುತ್ತಿದ್ದಾಗ ಶಿವಳಿಸಂಸ್ಥಾನದ ನರಸಿಂಹದೇವರ ನೈವೇದ್ಯಕ್ಕೆ ದಾನವೊಂದನ್ನು ನೀಡಲಾಯಿತು. ಹರಿಹರಪುರಮಠವು ಶಿವಳ್ಳಿಸ್ಮಾರ್ತ ಎಂದು ಪರಿಚಿತವಾದ ಸಾರ್ತ ಬ್ರಾಹ್ಮಣರ ಒಂದು ಉಪಪಂಗಡಕ್ಕೆ ಸೇರಿದ್ದು. ಮಠಕ್ಕೆ ಕೊನೆಯಪಕ್ಷ ಆರು ಶತಮಾನಗಳ ಇತಿಹಾಸವಿದೆ.

ತ.52 ವೆಂಕಟಪತಿರಾಯನ ಆಳ್ವಿಕೆಗೆ ಸೇರಿದ ಒಂದು ತಾಮ್ರಶಾಸನ; ಇದರ ತೇದಿ ಕ್ರಿ.ಶ. 1649. ಸರಜ್ಜಾ ಹನುಮಪ್ಪ ನಾಯಕನನ್ನು ಇದು ಉಲ್ಲೇಖಿಸುತ್ತದೆ. ಭಾರದ್ವಾಜಗೋತ್ರ, ಆಶ್ವಲಾಯನಸೂತ್ರ ಮತ್ತು ಋಕ್‌ಶಾಖೆಯ, ಯರಗುಳದ ಜಕ್ಕಾಭಟ್ಟ ಎಂಬಾತನಿಗೆ ಕೆಲವು ಗ್ರಾಮಗಳನ್ನು ದಾನ ನೀಡಲಾಯಿತೆಂದು ತಿಳಿದುಬರುತ್ತದೆ.

ಕಳಸ-ಕಾರ್ಕಳ

ಕ್ರಿ.ಶ. 1530ರ ಕೊ. 2ರಲ್ಲಿ ಬೊಮ್ಮಲದೇವಿಯ ಮಗನಾದ ವೀರಭೈರರಸವೊಡೆಯ ಕಾರ್ಕಳದಿಂದ ಆಳ್ವಿಕೆ ನಡೆಸುತ್ತಿದ್ದ ಪ್ರಸ್ತಾಪವಿದೆ. ದೊರೆಯ ಸೋದರಿ ಕಾಳಲದೇವಿಯು ಬಗುಂಜಿಸೀಮೆಯನ್ನು ಪಾಲಿಸುತ್ತಿದ್ದ ತನ್ನ ಮಗಳು ರಾಮಾದೇವಿಯು ಮೃತಳಾದಾಗ ಆಕೆ ತನ್ನ ಕುಲದೇವತೆ ಕಲ್ಲಬಸ್ತಿಯ ಪಾರಿಶ್ವ ತೀರ್ಥಂಕರರ ಸೇವೆಗಳಿಗೆ ಭೂಮಿದಾನ ಮಾಡಿದಳು. ಕೊ. 45ರ ಕಾಲ ಕ್ರಿ.ಶ. 1584. ಇಮ್ಮಡಿಬಯಿರಪಟ್ಟಣದ ವೀರಪಸೆಟಿಯು ಪಟ್ಟಣವೊಂದನ್ನು ಸ್ಥಾಪಿಸಿದ ವಿಷಯವನ್ನು ಅದು ಉಲ್ಲೇಖಿಸುತ್ತದೆ. ಕಳಸ-ಕಾರ್ಕಳ ಪ್ರಭುವು ಆತನಿಗೆ ಅನುಮತಿ ನೀಡಿ ಕೆಲವು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟನು. ಕ್ರಿ.ಶ. 1588ರ ಕೊ. 11 ರಿಂದ ಬಯಿರಸವೊಡೆಯನು ಗುಮ್ಮಟದೇವಿಯ ಮಗನೆಂದು ನಮಗೆ ತಿಳಿದುಬರುತ್ತದೆ. ಕೊಪ್ಪದ ಅಪ್ಪಾಜಿಸೇನಬೋವನು ತುಂಗಭದ್ರಾ

ತೀರದ ನಾರಿ ಎಂಬ ಊರಿನಲ್ಲಿ ಗೋಪಾಲಕೃಷ್ಣದೇವರನ್ನು ಪ್ರತಿಷ್ಠಾಪನೆ ಮಾಡಿಸಿದನು. ಕೊಪ್ಪದಲ್ಲಿರುವ ಕೊ. 6ರ ಕಾಲ ಕ್ರಿ.ಶ. 1598; ಅಲ್ಲಿನ ಪಾರ್ಶ್ವನಾಥದೇವರಿಗೆ ಭೂಮಿದಾನ ಮಾಡಿದ ವಿಷಯವನ್ನು ಅದು ನಿರೂಪಿಸುತ್ತದೆ.

ಕೆಳದಿ ನಾಯಕರು

ಕೆಳದಿಯ ನಾಯಕರು ವಿಜಯನಗರದ ದೊರೆಗಳ ಸಾಮಂತರಾಗಿ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದರು. ಅವರು ವೀರಶೈವ ಧರ್ಮದ ನಿಷ್ಠಾವಂತ ಅನುಯಾಯಿಗಳಾಗಿದ್ದರು; ಆದರೆ ಇತರ ಮತಧರ್ಮಗಳಿಗೆ ಕೂಡ ಪೋಷಣೆಯನ್ನು ನೀಡಿದರು. ಕ್ರಿ.ಶ. 1621ರ ತೇದಿಯ ನಪು. 41 ವೆಂಕಟಪ್ಪನಾಯಕನ ಕಾಲದ್ದು; ಕೇದಗೆ ಸಾಲೂರಿನಲ್ಲಿ ನಾಯಕನಿಗೂ ತ್ರಿಣಾಮಲೆಯ ಸಿದ್ಧಬಸವರಾಜನಿಗೂ ಉಂಟಾದ ಭೂವಿಕ್ರಯದ ಪತ್ರವನ್ನು ಉಲ್ಲೇಖಿಸುತ್ತದೆ. ಶಿವಪ್ಪನಾಯಕನ ಮಚ್ಚೇರಿ ಶಾಸನದ ಕಾಲ ಕ್ರಿ.ಶ. 1652; ಅದರಲ್ಲಿ ಎರಡನೆಯ ಹರಿಹರನು ವಿದ್ಯಾರಣ್ಯಪುರ ಅಗ್ರಹಾರವನ್ನು ಸ್ಥಾಪಿಸಿದ ವಿಷಯ ಪ್ರಸ್ತಾಪಿತವಾಗಿದೆ. ಆ ಗ್ರಾಮವು ಕೆಳದಿ ನಾಯಕನಿಂದ ಜೀರ್ಣೋದ್ಧಾರಗೊಂಡಿತು. ಶೃಂಗೇರಿ ಮಠದ ಸಚ್ಚಿದಾನಂದಭಾರತಿಸ್ವಾಮಿಗಳಿಗೆ ಗ್ರಾಮವನ್ನು ಒಪ್ಪಿಸಿಕೊಡಲಾಯಿತು. ಕೆಳದಿ ರಾಣಿ ಚೆನ್ನಮ್ಮಾಜಿಯ ಕುಡುನೆಲ್ಲಿ ಶಾಸನವು ಆ ಗ್ರಾಮದಲ್ಲಿ ಗಂಗಾಧರದೇವರನ್ನು ಪ್ರತಿಷ್ಠೆ ಮಾಡಿಸಿದ್ದ ಚೆನ್ನಣ್ಣನಿಗೆ ಭೂಮಿದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಚೆನ್ನಮ್ಮಾಜಿಯೇ ದಾನ ನೀಡಿದಾಕೆ. ಕ್ರಿ.ಶ. 1674ರ ನಪು. 28 ಒಂದು ಕೂಟ ತಾಮ್ರಶಾಸನವಾಗಿದೆ. ಸೋಮಶೇಖರನಾಯಕನ ಆಳ್ವಿಕೆಯನ್ನು ಅದು ಉಲ್ಲೇಖಿಸುತ್ತದೆ. ಬಾಳೆಹಳ್ಳಿಮಠದ ನಪು. 30 ಹದಿನೇಳನೆಯ ಶತಮಾನಕ್ಕೆ ಸೇರಿದುದು. ಬಗ್ಗುಂಜಿಸೀಮೆಯಲ್ಲಿ ಸೀತಾನದಿ ತೀರದಲ್ಲಿ ಕೆಂಚೌವ ಎಂಬಾಕೆ ವಿರಕ್ತಮಠವೊಂದನ್ನು ಕಟ್ಟಿಸಿ ಅದಕ್ಕೆ ಭೂದಾನವಿತ್ತ ಸಂಗತಿಯನ್ನು ಅದು ನಿರೂಪಿಸುತ್ತದೆ. ನಪು. 25 ಕ್ರಿ.ಶ. 1708ರ ತೇದಿಯ ಮತ್ತು ಬಸಪ್ಪನಾಯಕನ ಆಳ್ವಿಕೆಗೆ ಸೇರಿದ ಶಾಸನ. ಬಸಪ್ಪನಾಯಕ, ಸೋಮಶೇಖರನಾಯಕ ಮತ್ತು ಚೆನ್ನಮ್ಮಾಜಿಯರ ಮಗ. ಆ ಶಾಸನದಲ್ಲಿ ಕಳಸದಲ್ಲಿನ ವೀರಶೈವ ಮಠವೊಂದಕ್ಕೆ ಭೂಮಿದಾನ ನೀಡಿದ ವಿಷಯವನ್ನು ಹೇಳಿದೆ. ನಪು. 40ರ ತೇದಿ ಕ್ರಿ.ಶ. 1709; ಸಿದ್ಧಬಸವರಾಜದೇವನು ಕುರಕಲಮಾನಿಯನ್ನು ದಾನವಿತ್ತುದನ್ನು ದಾಖಲಿಸುತ್ತದೆ. ಮೇಲೆ ಉಲ್ಲೇಖಿಸಿದ ಕೆಂಚೌವ ಕಟ್ಟಿಸಿದ ವಿರಕ್ತಮಠಕ್ಕೆ ಸೋಮಶೇಖರನಾಯಕ ಭೂದಾನ ನೀಡಿದ (ಕೊ. 14). ನಪು. 27 ಒಂದು ಕೂಟ ಶಾಸನ; ಸೋಮಶೇಖರನಾಯಕನನ್ನು ಉಲ್ಲೇಖಿಸುವ ಅದರಲ್ಲಿ ಕ್ರಿ.ಶ. 1727ರ ತೇದಿ ಇದೆ.

ಮೈಸೂರು

ಹೆಚ್ಚೆ ತಿಮ್ಮಯ್ಯ ಎಂಬಾತ ಉಮಾಮಹೇಶ್ವರ ಮತ್ತು ಇತರ ದೇವಾಲಯಗಳನ್ನು ಕಟ್ಟಿಸಿದ (ಕೊ. 39). ಆತನ ಕೋರಿಕೆಯ ಮೇರೆಗೆ, ಮೈಸೂರು ದೊರೆ ಕೃಷ್ಣರಾಜವೊಡೆಯನು ಗಂಜೂರಿನವನಾದ ಅಮಲ್ದಾರ ಮನಘೂರು ಫಯಾಜ್ ಎಂಬಾತನನ್ನು ಕಳುಹಿಸಿಕೊಟ್ಟ. ಪಾಳ್ಯದಮಕ್ಕಿ ಗ್ರಾಮವನ್ನು ಹಾಗೂ ಸೀತಾನದಿ ತೀರದ ಕೆಲವು ಭೂಪ್ರದೇಶವನ್ನು ದೇವರುಗಳ ನೈವೇದ್ಯ, ದೀಪಗಳು ಹಾಗೂ ಬ್ರಾಹ್ಮಣರ ಆಹಾರಗಳಿಗಾಗಿ ದಾನವೀಯಲಾಯಿತು. ಈ ಶಾಸನದ ಕಾಲ ಕ್ರಿ.ಶ. 1809. ಇದೇ ವರ್ಷ ದೊರೆಯು ಸಕ್ಕರೆಪಟ್ಟಣದ ರಂಗನಾಥ ದೇವಾಲಯದ ಮುಂದಿನ ಗರುಡಗಂಬವನ್ನು ಮಾಡಿಸಿದನು (ಕ. 209). ಕ್ರಿ.ಶ. 1821ರಲ್ಲಿ ಉಡುಪಿಗೆ ಭೇಟಿಕೊಟ್ಟ ಆ ದೊರೆಯು ಆಗ ಪರ್ಯಾಯ ಪೀಠದಲ್ಲಿದ್ದ ವಿಶ್ವಪ್ರಿಯತೀರ್ಥ ಶ್ರೀಪಾದರಿಗೆ ದಾನ ನೀಡಿದ (ಕ. 263). ಬಾಳೆಹಳ್ಳಿಮಠದ ಕೆಲವು ಸ್ವಾಮಿಗಳನ್ನು ಕ್ರಿ.ಶ. 1828ರ ನಪು. 44ರಲ್ಲಿ ಉಲ್ಲೇಖಿಸಿದೆ; ಹಗಲುದೀವಟಿಗೆಯೊಡನೆ ಮೆರವಣಿಗೆಯಲ್ಲಿ ಹೋಗುವ ವಿಶೇಷ ಸವಲತ್ತಿನ ಪ್ರಸ್ತಾಪ ಅದರಲ್ಲಿದೆ. ಈ ಸವಲತ್ತನ್ನು 1830ರಲ್ಲಿ ಸ್ಥಿರೀಕರಿಸಲಾಯಿತು (ನಪು. 43). ಕ್ರಿ.ಶ. 1830ರಲ್ಲಿ ತರೀಕೆರೆಯ ಅಧಿಪ ರಂಗಪ್ಪನಾಯಕನನ್ನು - ಆತನ ಪತ್ನಿ, ಮಗ ಮತ್ತು ಚಿಕ್ಕಪ್ಪಂದಿರ ಸಹಿತವಾಗಿ - ಮೈಸೂರು ಸಂಸ್ಥಾನದ ಕೃಷ್ಣರಾವ್ ಮತ್ತು ಇತರ ಅಧಿಕಾರಿಗಳು ಸೆರೆಹಿಡಿದರು (ಕ. 262). ಅದೇ ವರ್ಷ ಮೈಸೂರು ದೊರೆಯು ಕಾಶಿಯ ಜಂಗಮವಾಟಿ ಮಠದ ಸಿದ್ಧಲಿಂಗಸ್ವಾಮಿಯವರಿಗೆ 600 ಕುಂಪಣಿ ರೂಪಾಯಿಗಳ ವಾರ್ಷಿಕ ಅನುದಾನವನ್ನು ಕೊಟ್ಟನು. ದೊರೆಯ ಜನ್ಮದಿನದಂದು (ಜುಲೈ 10) ಹನ್ನೆರಡು ಜನರ ಗಣಾರಾಧನೆಯನ್ನು ನಡೆಸಲೆಂದು ಈ ದಾನವನ್ನು ನೀಡಲಾಯಿತು. ದೊರೆಯ ಕೆಲವು ಬಿರುದುಗಳನ್ನು ಈ ಶಾಸನ (ನಪು. 26) ತಿಳಿಸುತ್ತದೆ.

ಸಂತೆಬೆನ್ನೂರು ನಾಯಕರು

ಇವರಿಗೆ ಸೇರಿದ ಆರು ಶಾಸನಗಳು ಈ ಸಂಪುಟದಲ್ಲಿವೆ. ಕ್ರಿ.ಶ. 1614ರಲ್ಲಿ ಸೀತಾರಾಮಪ್ಪನಾಯಕನು ಕಾಮನದುರ್ಗದ ಚೆನಿರಾಮಸ್ವಾಮಿದೇವರಿಗೆ ತಿಮ್ಮಾಪುರ ಗ್ರಾಮವನ್ನು ದಾನ ನೀಡಿದನು (ತ. 100). ಆಲನಹಳ್ಳಿಯ ಕ. 8ನೆಯ ಶಾಸನವನ್ನು 17ನೆಯ ಶತಮಾನಕ್ಕೆ ಸೇರಿಸಬಹುದು. ಚಿಕ್ಕಣನಾಯಕನಿಗೆ ಕಿಟ್ಟಪ್ಪನಾಯಕನು ನಾಲ್ಕು ಗ್ರಾಮಗಳನ್ನು ದಾನವಾಗಿ ನೀಡಿದ್ದನು; ಚಿಕ್ಕಣನಾಯಕನು ಆಲದಹಳ್ಳಿಯನ್ನು ಕಲತಿ ವೀರಣದೇವರಿಗೆ ದಾನವಿತ್ತ ವಿಷಯವನ್ನು ಅದು ತಿಳಿಸುತ್ತದೆ. ತ. 52 ಒಂದು ತಾಮ್ರಶಾಸನ; ಅದರ ಕಾಲ ಕ್ರಿ.ಶ. 1649. ಸರಜ್ಜಾ ಹನುಮಪ್ಪನಾಯಕನು ಜಕ್ಕಾಭಟ್ಟನಿಗೆ ಕೆಲವು ಹಳ್ಳಿಗಳನ್ನು ದಾನ ನೀಡಿದ ವಿಷಯ ಅದರಲ್ಲಿ ಪ್ರಸ್ತಾಪಿತವಾಗಿದೆ. ಸೀತಾರಾಮಪ್ಪನಾಯಕನ ಆಳ್ವಿಕೆಯ ಕಾಲಕ್ಕೆ ಸೇರಿದ ತ. 53ರ ಕಾಲ ಕ್ರಿ.ಶ. 1681. ಆ ನಾಯಕನು ತೀರ್ಥರಾಜಪುರದ ವೆಂಕಟೇಶ್ವರದೇವರ ಸೇವೆಗೆ ಗೋವಿಂದಪುರವನ್ನು ಕೊಟ್ಟ ವಿಷಯವನ್ನು ಅದು ತಿಳಿಸುತ್ತದೆ. ಪ್ರತಿಗ್ರಹಿ ರಾಯಸದ ವೆಂಕೈಯ.

ಬೇಲೂರು ನಾಯಕರು

ಈ ಸಂಪುಟದಲ್ಲಿ ಬೇಲೂರು ನಾಯಕರಿಗೆ ಸೇರಿದ ಅತಿ ಪ್ರಾಚೀನ ಶಾಸನವೆಂದರೆ ಬುಕ್ಕಾಂಬುಧಿಯ ತ. 75. ಅದರ ಕಾಲ ಕ್ರಿ.ಶ. 1555. ವಿಜಯನಗರದ ಅರಸರ ಕೈಕೆಳಗೆ ಸೇವೆ ಸಲ್ಲಿಸಿದ ಎರಕೃಷ್ಣಪ್ಪನಾಯಕನನ್ನು ಅದು ಉಲ್ಲೇಖಿಸುತ್ತದೆ. ಈ ಶಾಸನ ತುಂಬ ಸವೆದುಹೋಗಿದೆ. ಕ್ರಿ.ಶ. 1585ರ ತೇದಿಯ ತ. 59ನೆಯ ಶಾಸನವು ನಂದಿಗ್ರಾಮದ್ದು. ಕೃಷ್ಣಪ್ಪನಾಯಕನ ಕಾರ್ಯಕರ್ತನಾದ ಕಾಮರಸವೊಡೆಯನು ಸಿದೇದೇವ ಮಂದಿರದ ಸ್ಥಾನಿಕರಿಗೆ ಧನ ದಾನ ನೀಡಿದ. ಈ ಶಾಸನವನ್ನು ಭಾಷಾಪತ್ರವೆಂದು ಕರೆದಿದೆ.

ದಾನಿವಾಸ ವೊಡೆಯರು

ಒಂಬತ್ತು ಶಾಸನಗಳು ದಾನಿವಾಸ ಒಡೆಯರಿಗೆ ಸಂಬಂಧಿಸಿದವು. ಕ್ರಿ.ಶ. 1553ರಿಂದ ಕ್ರಿ.ಶ. 1587ರವರೆಗಿನ ತೇದಿಯನ್ನು ಅವು ಹೊಂದಿವೆ. ಹೆಚ್ಚಿನ ಶಾಸನಗಳು ಸಾಲ ಇಲ್ಲವೇ ಕ್ರಯಪತ್ರಕ್ಕೆ ಸಂಬಂಧಪಟ್ಟವು. ಅವರ ವಂಶಾವಳಿಯನ್ನು ಹೀಗೆ ರೂಪಿಸಬಹುದು:

ವಿರೂಪಾಕ್ಷವೊಡೆಯ
|
ಚನ್ನರಾಯವೊಡೆಯ
|
ಲಿಂಗಣ್ಣನಾಯಕ
|
ಅರಸಪ್ಪವೊಡೆಯ
|
ಚನ್ನವೀರಣ್ಣನಾಯಕ — ಲಿಂಗನಾಯಕ — ಮಲ್ಲಣ್ಣನಾಯಕ

ಚನ್ನವೀರಣ್ಣನಾಯಕ
|
ಚಿಕ್ಕಮಲ್ಲಣ್ಣನಾಯಕ
|
ಚಿಕ್ಕವೀರಪ್ಪನಾಯಕ
|
ಚನ್ನವೀರಪ್ಪನಾಯಕ

ದಾನಿವಾಸಗ್ರಾಮವು ಈಗ ಭದ್ರಾ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಿಹೋಗಿದೆ. ಈ ವೊಡೆಯರ ಉಗಮ ಅಸ್ಪಷ್ಟವಾಗಿದೆ.

ಹಾಗಿದ್ದರೂ ದಾನಿವಾಸ ಸೀಮೆಯು ಅವರಿಗೆ ಹೊಯ್ಸಳ ದೊರೆ ಬಲ್ಲಾಳನಿಂದ ಪ್ರಾಪ್ತವಾಗಿತ್ತೆಂದು ಒಂದು ಶಾಸನದಲ್ಲಿ ತಿಳಿಸಿದೆ. (ಕ್ರಿ.ಶ. 1553ರ ತೇದಿಯ ಲಿಂಗಾಪುರದ ನಪು. 36). ಹೊಯ್ಸಳ ಶಾಸನಗಳಲ್ಲಿ ಎಲ್ಲಿಯೂ ದಾನಿವಾಸದ ಉಲ್ಲೇಖವಿಲ್ಲ. ಪ್ರಾಯಶಃ ವಿಜಯನಗರದ ಅರಸರ ಕೈಕೆಳಗೆ ದಾನಿವಾಸ ವೊಡೆಯರು ಸೇವೆ ಸಲ್ಲಿಸಿದ್ದಿರಬಹುದು. ಅವರು ಆರ್ಥಿಕ ಮುಗ್ಗಟ್ಟಿಗೆ ಒಳಗಾಗಿ, ಬಾಳೆಹಳ್ಳಿಮಠದಿಂದ ಸಾಲ ಪಡೆದುಕೊಂಡು ಆ ಮಠಕ್ಕೆ ಕೆಲವು ಗ್ರಾಮಗಳನ್ನು ಒಪ್ಪಿಸಿಕೊಟ್ಟರು.

ದಾನಿವಾಸವೊಡೆಯರು ತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಯವರ ಶಿಷ್ಯರಾಗಿದ್ದರು.[30] ಅಲ್ಲಿನ ಸ್ವಾಮಿಯವರಿಗೆ ಚನ್ನವೀರಪ್ಪನು ಕಲ್ಲಿನ ಮಠವೊಂದನ್ನು ಕಟ್ಟಿಸಿಕೊಟ್ಟನು. ದಾನಿವಾಸದಲ್ಲಿ ವಿರೂಪಾಕ್ಷಲಿಂಗವನ್ನು ಪ್ರತಿಷ್ಠಾಪಿಸಲಾಯಿತು; ಅಲ್ಲಿ ಬಸವೇಶ್ವರ ಗುಡಿಯನ್ನು ಕಟ್ಟಲಾಯಿತು.

ದುರ್ಗ

ಬಿದರೆ ಕ. 138ನೆಯ ಶಾಸದ ಕಾಲದ ಕ್ರಿ.ಶ. 1513. ದುರ್ಗದ ಪ್ರಭುವನ್ನು ಇದು ಉಲ್ಲೇಖಿಸುತ್ತದೆ; ಆದರೆ ಆತನ ಹೆಸರು ನಷ್ಟವಾಗಿದೆ. ಆತನ ಕೈಕೆಳಗೆ ಸಿವಗೆನಾಯಕ ಎಂಬಾತ ಅಧಿಕಾರಿಯಾಗಿದ್ದ, ಆ ಸ್ಥಳದ ಹನುಮಂತದೇವರ ಸೇವೆಗೆ ಒಂದು ಗ್ರಾಮವನ್ನು ದಾನವಾಗಿ ನೀಡಲಾದ ವಿಷಯವನ್ನು ಅದು ತಿಳಿಸುತ್ತದೆ. ದಾಸಯ್ಯ ಎಂಬುವವನು ಪ್ರತಿಗ್ರಹಿ. ಪುರದ ಶಾಸನದ ಕಾಲ ಕ್ರಿ.ಶ. 1599 (ಕ. 122). ಇದರಲ್ಲಿ ಉಕ್ತನಾದ ತಿಮ್ಮಪ್ಪನಾಯಕನ ತಂಗಿ ಕೆಂಪೆಯನಾಯಕಿತಿ. ಅರೆನ್‌ತೊಳಲ ಮಲ್ಲಿಕಾರ್ಜುನದೇವರ ಸೇವೆಗೆ ಭೂಮಿದಾನವನ್ನು ಮಾಡಲಾಯಿತು.

ಸ್ಮಾರಕ ಶಾಸನಗಳು

ಸುಮಾರು ಅರವತ್ತು ಶಾಸನಗಳು ಈ ವರ್ಗಕ್ಕೆ ಸೇರಿದವು. ಹೆಚ್ಚಿನವು ವೀರಗಲ್ಲುಗಳು. ಶ್ರೇಷ್ಠವಾದ ಒಂದು ಕಾರಣಕ್ಕಾಗಿ ಹೋರಾಡಿ ಮರಣ ಹೊಂದಿದ ವೀರನೊಬ್ಬನ ವಿಷಯವನ್ನು ವೀರಗಲ್ಲು ಶಾಸನವು ತಿಳಿಸುತ್ತದೆ. ಗ್ರಾಮಗಳ ಮೇಲೆ ನಡೆದ ದಾಳಿಯ ಮತ್ತು ಗೋಗ್ರಹಣದ ಸಂದರ್ಭಗಳಲ್ಲಿ ವೀರರು ಗೋ-ಸ್ತ್ರೀರಕ್ಷಣೆಗೆ ಪರಾಕ್ರಮದಿಂದ ಹೋರಾಡುತ್ತಿದ್ದರು. ಬೇಟೆಗಾರರು, ಕಳ್ಳಕಾಕರು ಮತ್ತು ದರೋಡೆಕೋರರ ವಿರುದ್ಧ ಸಹ ಅವರು ಕಾದಾಡಿದ್ದುಂಟು. ಕೆಲವೊಮ್ಮೆ ದುಷ್ಟಮೃಗಗಳೊಡನೆ ಅವರು ಕಾದಿ ಮಡಿದರು. ಜೈನಭಕ್ತರು ಧಾರ್ಮಿಕ ವ್ರತಾಚರಣೆಯಿಂದ ಮುಡಿಪಿದರು. ಪ್ರಸ್ತುತ ಸಂಪುಟದಲ್ಲಿ ಇಂಥ ಕಾರಣಗಳಿಗೆ ಪ್ರಾಣತೆತ್ತ ಉದಾಹರಣೆಗಳು ಕಂಡುಬರುತ್ತವೆ.

ಕೆಲವೊಮ್ಮೆ ವೀರನೊಬ್ಬ ಮರಣ ಹೊಂದಿದಾಗ ಆತನ ಹೆಂಡತಿಯು 'ಸತಿ' ಅಥವಾ 'ಸಹಗಮನ'ವನ್ನು ಆಚರಿಸಿ ಸ್ವಇಚ್ಛೆಯಿಂದ ಮೃತಳಾಗುತ್ತಿದ್ದಳು; ಈ ವಿಷಯದಲ್ಲಿ ಆಕೆಯ ಮೇಲೆ ಬಲವಂತದ ಹೇರಿಕೆ ಇರಲಿಲ್ಲ.

ಹುಲಿಯೊಡನೆ ಹೋರಾಟ

ಕ್ರಿ.ಶ. 855-86ರಲ್ಲಿ ತಮ್ಮಗವುಣ್ಡ ಎಂಬ ವ್ಯಕ್ತಿಯು ಹುಲಿಯೊಡನೆ ಹೋರಾಡಿ, ಅದನ್ನು ಇರಿದು ಮೃತನಾದನೆಂದು ಚಿಕ್ಕ ಇಂಗಳ ಶಾಸನದಿಂದ (ಕ. 92) ತಿಳಿದುಬರುತ್ತದೆ. ಹಾಗೆಯೇ ಕ್ರಿ.ಶ. 1193ರಲ್ಲಿ ಅತ್ತಿಗನಹಾಳು ಗ್ರಾಮಕ್ಕೆ ಪಟ್ಟೆಹುಲಿಯೊಂದು ನುಗ್ಗಿದಾಗ ಬಮ್ಮನಾಯ ರಾಮ ಎಂಬ ವೀರ ಅದರೊಡನೆ ಹೋರಾಡಿ ಮಡಿದನಂತೆ (ತ. 55).

ನಿಶಿಧಿ

ಕ್ರಿ.ಶ. 9-10ನೆಯ ಶತಮಾನಕ್ಕೆ ಸೇರಿದ ಅರಕೆರೆ ಶಾಸನದಿಂದ (ಕ. 5) ಪ್ರಾಯಶಃ ಕರ್ಮಬೋಧಿ ಗುರುಗಳ ಶಿಷ್ಯೆಯಾದ ಮರಮತಿ ಕನ್ತಿ ಎಂಬಾಕೆಯ ಮರಣದ ವಿಷಯ ತಿಳಿಯುತ್ತದೆ. ಕ್ರಿ.ಶ. 971ರಲ್ಲಿ ಪಾಂಬಬ್ಬೆ ಮುಡಿಪಿದ (ಕ. 34) ವಿಷಯವನ್ನು ಹಿಂದೆ ಗಮನಿಸಲಾಗಿದೆ. ಕ್ರಿ.ಶ. 11-12ನೆಯ ಶತಮಾನದಲ್ಲಿ ರಾಚೆಯಗಾವುಣ್ಡನೆಂಬಾತ ಬಸದಿಯೊಂದರಲ್ಲಿ ವ್ರತವನ್ನು ಆಚರಿಸಿ,

E

ಮೃತಪಟ್ಟಾಗ ಆತನ ಪತ್ನಿ ರಾಚೆಯಗಾವುಣ್ಡಿ ಪತಿಗೆ ಪರೋಕ್ಷವಿನಯವನ್ನು ಮಾಡಿ ತಾನೂ ಮೃತಳಾದಳಂತೆ (ತ. 39). ಕ್ರಿ.ಶ. 1360ರಲ್ಲಿ ನೂಲವಂದಿಸೆಟ್ಟಿಯ ಸ್ಮರಣಾರ್ಥ ನಿಶಿಧಿಯೊಂದನ್ನು ನಿಲ್ಲಿಸಲಾಯಿತು; ಆತ ರಾಜಗುರು ಮೌನಪಾಚಾರ್ಯರ ಶಿಷ್ಯನಾಗಿದ್ದ (ಕ. 214). ಕ್ರಿ.ಶ. 1404-05ರಲ್ಲಿ ಲಕ್ಷ್ಮೀಸೇನಭಟ್ಟಾರಕರ ಶಿಷ್ಯನಾದ ಮಾನಸೇನನಿಗೆ ಮಾಯಸೆಟ್ಟಿ ಮತ್ತು ಇತರರು ನಿಶಿಧಿಯೊಂದನ್ನು ನಿಲ್ಲಿಸಿದರೆಂದು ತಿಳಿದುಬರುತ್ತದೆ (ಕ. 213).

ಹೋರಾಟಗಳು

ಸುಮಾರು ಕ್ರಿ.ಶ. 899ರಲ್ಲಿ ಗಂಗ ಪೆರ್ಮನಡಿಯು ರಾಜ್ಯವಾಳುತ್ತಿದ್ದಾಗ ಮಾರಸಿಂಗನು ಪ್ರಾಯಶಃ ನೊಳಂಬ ದೊರೆಯ (ಮಹಾದೇವ) ವಿರುದ್ಧ ಕಾದಿ ಸತ್ತ. ಆತನಿಗೆ ಬಾಸನೂರು ಗ್ರಾಮವನ್ನು ನೀಡಲಾಯಿತೆಂದು ತೋರುತ್ತದೆ (ಕ. 243). ಸು. 9-10ನೆಯ ಶತಮಾನಕ್ಕೆ ಸೇರುವ ಕ. 238ರಿಂದ ಅಯ್ಯಪದೇವನೊಡನೆ ಹೋರಾಡಿದ ಕಲಿಗಂಗ ಮೃತನಾದನೆಂದು ತಿಳಿದುಬರುತ್ತದೆ. ಕ್ರಿ.ಶ. 972ರಲ್ಲಿ ಮಾರಸಿಂಗನಿಗೂ ನರಗನಿಗೂ ನಡೆದ ಕದನದಲ್ಲಿ ಮೊದಲನೆಯವನು ಮರಣಹೊಂದಿದ; ಆತ ಗೋಬ್ರಾಹ್ಮಣರನ್ನು ರಕ್ಷಿಸಿದನಂತೆ (ಕ. 20). ಎಳಂಬುಣಿಸೆಯು ಕ್ರಿ.ಶ. 9ನೆಯ ಶತಮಾನದಲ್ಲಿ ಒಂದು ಬ್ರಹ್ಮದೇಯ ಅಗ್ರಹಾರವಾಗಿತ್ತು; ಅಲ್ಲಿ ಒಬ್ಬ ಮಾಸಾಮಿಗೂ ಮತ್ತು ಮಣಿದಿ ಹಾಗೂ ಇತರರಿಗೂ ಹೋರಾಟ ನಡೆಯಿತು (ಕ. 94). ಇದೊಂದು ಪ್ರಮುಖವಾದ ವೀರಗಲ್ಲು ಶಾಸನವಾಗಿದ್ದು, ಎಂ.ಎ.ಆರ್. 1944ರಲ್ಲಿ (ಸಂಖ್ಯೆ 6) ವಿಶದವಾಗಿ ಚರ್ಚಿತವಾಗಿದೆ. ಮಾಸಾಮಿಯು ಪ್ರಾಯಶಃ ಎಳಂಬುಣಿಸೆಯ ಬ್ರಹ್ಮದೇಯವನ್ನು ಕಿತ್ತುಕೊಂಡಿದ್ದಿರಬೇಕು. ಬ್ರಹ್ಮದೇಯವನ್ನು ಬಿಟ್ಟುಗೊಡಲು ಮನವೊಪ್ಪದ ಮಣಿದಿ, ಸಿರಿವಜ್ಜ, ಶ್ರೀಪುರುಷ ಹಾಗೂ ಶಿವಮಾರರು ಕಾದಿ ಮಡಿದರು. ಈ ಮಾಸಾಮಿ ಯಾರೆಂದು ಗುರುತಿಸಲು ಸಾಧ್ಯವಾಗಿಲ್ಲ. ಆತ ರಾಷ್ಟ್ರಕೂಟ ದೊರೆ ಮೂರನೆಯ ಗೋವಿಂದನಾಗಿದ್ದಿರಬಹುದು. ವೀರಗಲ್ಲನ್ನು ನಿಲ್ಲಿಸಿದ್ದು ಜನ್ನನೆಂಬಾತ. ಸ್ವಲ್ಪ ಭೂಮಿಯನ್ನೂ ಆತ ದಾನ ನೀಡಿದನು. ಪ್ರಾಯಶಃ ಈ ಗ್ರಾಮದಲ್ಲಿ ರಾಷ್ಟ್ರಕೂಟರು ಮತ್ತು ಗಂಗರ ನಡುವೆ ಹೋರಾಟವೊಂದು ನಡೆದಿದ್ದು ಅದರಲ್ಲಿ ಗಂಗರು ಸೋತುಹೋಗಿರಬೇಕು; ಅವರಲ್ಲಿ ಕೆಲವರು ಅಸುನೀಗಿರಬೇಕು. ಎಂ.ಎ.ಆರ್.ನಲ್ಲಿ ಹೇಳಿರುವುದು ಹೀಗೆ: "ಕದನವೊಂದರಲ್ಲಿ ಗಂಗ ದೊರೆ ಶಿವಮಾರನ ಮರಣದ ವಿಷಯವನ್ನು ದಾಖಲಿಸಿರುವುದರಿಂದ ಈ ವೀರಗಲ್ಲು ಮುಖ್ಯವಾದ್ದು; ಕದನ ನಡೆದದ್ದು ಆತನ ಮತ್ತು ರಾಷ್ಟ್ರಕೂಟರ ನಡುವೆ. ಇನ್ನೊಂದು ರೀತಿಯಲ್ಲಿ ಕೂಡ ಅದು ಮಹತ್ವದ್ದು. ಮೃತರಾದವರಲ್ಲಿ ಮಣಿದಿ, ಸಿರಿವಚ್ಚ, ಶ್ರೀಪುರುಷ ಮತ್ತು ಶಿವಮಾರರನ್ನು ಉಲ್ಲೇಖಿಸಲಾಗಿದೆ. ಇವರಲ್ಲಿ ಶ್ರೀಪುರುಷ ಮತ್ತು ಶಿವಮಾರ ತಂದೆ-ಮಗ ಎಂದು ಪ್ರಸಿದ್ಧರಾಗಿದ್ದಾರೆ. ಆದ್ದರಿಂದ ಇಷ್ಟು ದಿನಗಳ ಕಾಲ ಶ್ರೀಪುರುಷ ಜೀವಿಸಿದ್ದು ಇದೇ ಕದನದಲ್ಲಿ ಮಗನೊಡನೆ ಮೃತನಾದಂತೆ ಕಾಣುತ್ತದೆ".[31] ಬಹುಶಃ ಕ್ರಿ.ಶ. 802 ಮತ್ತು 815ರ ನಡುವೆ - ಸುಮಾರು ಕ್ರಿ.ಶ. 808ರಲ್ಲಿ ಎನ್ನಬಹುದು - ಈ ಕದನ ಸಂಭವಿಸಿದ್ದಿರಬೇಕು.

ತನ್ನ ಉತ್ತರಭಾರತ ದಿಗ್ವಿಜಯ ಯಾತ್ರೆಯಿಂದ ಹಿಂದಿರುಗಿ ಬಂದ ಮೇಲೆ "ಗೋವಿಂದನು ಕ್ರಿ.ಶ. 808ರಲ್ಲಿ ದಕ್ಷಿಣದ ಮೇಲೆ ಆಕ್ರಮಣಮಾಡಲು ಭಾರೀ ಸಿದ್ಧತೆಗಳನ್ನು ನಡೆಸಿದನು ಹಾಗೂ ವಾಸ್ತವವಾಗಿ ಸೈನ್ಯಗಳು ಕರ್ನಾಟಕದ ಬಯಲು ಪ್ರದೇಶಗಳಿಗೆ ಬರುವಂತೆ ಮಾಡಿದನು...... ಒಕ್ಕೂಟದ ಸೈನ್ಯಕ್ಕೆ ಭಾರಿ ಸೋಲುಂಟಾಯಿತು. ಗಂಗ ಸೈನ್ಯದ ಮತ್ತು ರಾಜಕುಟುಂಬದ ಹಲವರು ಹತರಾದರು" ಎಂದು ಡಾ. ಎಂ.ವಿ. ಕೃಷ್ಣರಾವ್ ಅವರು ಬರೆಯುತ್ತಾರೆ.[32] ಪ್ರಸ್ತುತ ವೀರಗಲ್ಲು ಅದೇ ಕದನವನ್ನು ಉಲ್ಲೇಖಿಸುವಂತೆ ತೋರುತ್ತದೆ. ಶ್ರೀಪುರುಷನಿಗೆ ಮುತ್ತರಸ ಮತ್ತು ವೃದ್ಧರಾಜ ಎಂಬ ಹೆಸರುಗಳಿದ್ದವು. ಈ ಯುದ್ಧದ ಸಮಯದಲ್ಲಿ ಆತನಿಗೆ ತುಂಬ ವಯಸ್ಸಾಗಿತ್ತು. ಕ್ರಿ.ಶ. 1255ರಲ್ಲಿ ನಡೆದ ಪಾಂಡ್ಯರ ವಿರುದ್ಧದ ಹೋರಾಟವೊಂದರಲ್ಲಿ ಶ್ರೀವಿಕ್ರಮನೆಂಬಾತ ಕಾದಿ 'ಶಂಕರಪದಪದುಮವ' ಪಡೆದನಂತೆ (ಕ. 32).

ಕ್ರಿ.ಶ. 1085ರಲ್ಲಿ ಶಾಂತರ ಮಾರನೆಂಬ ದೊರೆ ಆಳುತ್ತಿದ್ದಾಗ ಕನ್ನೆಯ, ಹೊನ್ನೆಯಮ್ಮ ಮತ್ತು ಇನ್ನೊಬ್ಬ (ಹೆಸರು ನಷ್ಟವಾಗಿದೆ) - ಈ ಮೂವರು ಕಾದಿ ಮಾಡಿದರು. ಅವರಿಗೆ 'ಯುದ್ಧ ಪರಿಹಾರ' ಎಂದು ಭೂಮಿ ಮತ್ತು ಧನವನ್ನು ಮರಣೋತ್ತರವಾಗಿ ನೀಡಲಾಯಿತು (ಕೊ. 46). ಹೊಯ್ಸಳ ಬಿಟ್ಟಿದೇವನ ಆಡಳಿತದ ಕಾಲದಲ್ಲಿ ಕ್ರಿ.ಶ. 1133ರಲ್ಲಿ ನಡೆದ ಕದನದಲ್ಲಿ ಮೂಡಸಸಿಯ ಚಾವವೆಗ್ಗಡೆ ಮೃತನಾದ (ಮೂಡ. 118). ಕ್ರಿ.ಶ. 1214ರಲ್ಲಿ "ದೋರಸಮುದ್ರದ ಬೀಡಿನೊಳಗೆ ಯಿಟ್ಟಗೆಯಕೇರಿಯಲ್ಲಿ" ಗುಜ್ಜರರೊಡನೆ ಉಂಟಾದ ಹೋರಾಟದಲ್ಲಿ ಅಮಿತೆಯದಣ್ಣಾಯಕ (ತ. 13) ಹಾಗೂ ಮೇಳಯ್ಯ (ತ. 14) ಹೋರಾಡಿ ಮರಣ

ಹೊಂದಿದರು. ಕ್ರಿ.ಶ. 13ನೆಯ ಶತಮಾನದಲ್ಲಿ ಸೇವುಣರಿಗೂ ಹೊಯ್ಸಳರಿಗೂ ನಡೆದ ಕೋಟೆಕಾಳಗದಲ್ಲಿ ದೇವಗೋಯಿರಾಹುತ ಮೃತನಾದ. (ಕ. 254).

ಕಳ್ಳರು ಮತ್ತು ಬೇಡರೊಡನೆ ಹೋರಾಟ

ಕ್ರಿ.ಶ. 1124ರಲ್ಲಿ ಮಸಣೆಯನಾಯಕ ಎಂಬ ವೀರ ಬಂಕನಕಟ್ಟೆಯಲ್ಲಿ ಬೇಡರೊಡನೆ ಹೋರಾಡಿ ಅಸುನೀಗಿದ (ತ. 63). ಕ್ರಿ.ಶ. 1237ರಲ್ಲಿ ಗುಲುಗೌಡ ಕಳ್ಳರೊಡನೆ ಉಂಟಾದ ಹೋರಾಟದಲ್ಲಿ ಮೃತನಾದ (ಕ. 135). ಕ್ರಿ.ಶ. 1406 ರಲ್ಲಿ ಕಳ್ಳರೊಡನೆ ಉಂಟಾದ ಸಂಘರ್ಷದಲ್ಲಿ ಗಂಗಪ "ಆ ಕಳ್ಳರ ಕೂಡೆ ಕಾದಿ ಕಳ್ಳರ ಕೊಂದು ತಾನು ಸಿವನೊಳಗಾದನು" (ತ. 60).

ತುರುಗಾಳಗ

ಗ್ರಾಮಗಳ ಮೇಲೆ ದಾಳಿ ಮಾಡುವುದು ಮತ್ತು ಅಲ್ಲಿನ ಗೋಸಂಪತ್ತನ್ನು ಅಪಹರಿಸುವುದು ಸಾಮಾನ್ಯವಾಗಿ ಮಹಾಭಾರತದ ಕಾಲದಿಂದಲೂ ನಡೆದುಕೊಂಡು ಬಂದದ್ದು. ಅನೇಕ ವೀರಗಲ್ಲುಗಳಲ್ಲಿ ತುರುಗಾಳಗದ ಪ್ರಸ್ತಾಪವಿದೆ. ಕ್ರಿ.ಶ. 1116ರಲ್ಲಿ ಹಾನುಗಲ್ಲಿನ ಮಸಣೆಯನ ಮಕ್ಕಳಾದ ಚಿಣ್ಣೆಯ ಮತ್ತು ಬಮ್ಮೆಯ ತುರವನಹಳ್ಳಿಯ ಗ್ರಾಮಗಳನ್ನು ರಕ್ಷಿಸಿದರೂ ಅವರು ಮೃತರಾದರಂತೆ (ಕ. 104). ಅವರಿಗೆ ಹಾನುಗಲ್ಲಿನ ಬೊಮ್ಮೆಯನಾಯಕ ವೀರಗಲ್ಲನ್ನು ನಿಲ್ಲಿಸಿದನಂತೆ. ಕ್ರಿ.ಶ. 1135ರಲ್ಲಿ ಮಾದಿಗೌಡ ಮರಣ ಹೊಂದಿದಾಗ (ಕ.52) ಆತನಿಗೆ ಕೆಂಕೆರೆಯ ಮಹಾಜನಗಳು ಮೆಚ್ಚಿ ಕುದುರೆ ಮತ್ತು 'ತಪಂಬಟ' (ತಮ್ಮಟೆ)ಗಳನ್ನು ನೀಡಿದರಂತೆ. ಹೀಗೆಯೇ ಕ್ರಿ.ಶ. 1164ರಲ್ಲಿ ಬಳೆಗಾರ ಮಲ್ಲಯ್ಯ (ಕ. 233) ಹಾಗೂ ಬಳಿಗಳ್ಳಿಯ ಯಿರುಗಣ್ಣ (ತ. 64), ಕ್ರಿ.ಶ. 1206ರಲ್ಲಿ ಬೀಚಯ (ಕ. 217), ಕ್ರಿ.ಶ. 1209-10ರಲ್ಲಿ ಚೀಲಗೌಡ (ತ. 79), ಕ್ರಿ.ಶ. 1241ರಲ್ಲಿ ಗೌಡಿಗವುಡ (ಕ. 146), ಕ್ರಿ.ಶ. 1287ರಲ್ಲಿ ನಾಗಣ್ಣ (ತ. 15) ಮತ್ತು ನಾಗ (ತ. 16), ಕ್ರಿ.ಶ. 13ನೆಯ ಶತಮಾನದಲ್ಲಿ ಚಿಕ್ಕಗೌಡ (ಕ. 39) ಹಾಗೂ ಹೊನ್ನಗೌಡ (ಕ. 245) - ಈ ಮುಂತಾದ ಅನೇಕ ವೀರರು ಕಾದಿ ಮಡಿದ ವಿಷಯ ತಿಳಿದುಬರುತ್ತದೆ.

ವೇಳೆವಾಳಿ

ಕ್ರಿ.ಶ. 1162ರಲ್ಲಿ ಶಾಂತರ ಅರಸಿ ಸಾವಿಯಬ್ಬರಸಿ 'ಕಾಲಗೆಯ್ದಂದು' ಲಕಣ್ಣ ಎಂಬ ವೀರ ಮರಣ ಹೊಂದಿದಂತೆ ತೋರುತ್ತದೆ (ನಪು. 3)

ವೀರಗಲ್ಲನ್ನು 'ಪುಣ್ಯಕಲ್ಲು' ಎಂದು ಕರೆದಿರುವುದುಂಟು (ಕ. 136).

ಸತಿ

ಸುಮಾರು ಕ್ರಿ.ಶ. 10-11ನೆಯ ಶತಮಾನದಲ್ಲಿ ಪೆರ್ಮಾಡಿಗಾವುಣ್ಣ ಹೋರಾಟವೊಂದರಲ್ಲಿ ನಿಧನನಾದಾಗ ಆತನ ಪತ್ನಿಯು 'ಮಹಾಸತಿಯಾಗಿ ಅಕ್ಷಯಸೊಗ'ವನ್ನು ಪಡೆದಳಂತೆ (ಕ. 99). ಕ್ರಿ.ಶ. 1283ರಲ್ಲಿ ಅತಿಮೊಘೆಯಲ್ಲಿ ರಾಯಗವುಡ ಮೃತಪಟ್ಟಾಗ ಅವನ ಹೆಂಡತಿ ಲಕುಮಾದೇವಿ 'ಸತಿ'ಯಾದಳು (ಕ. 253). ಸುಮಾರು 14ನೆಯ ಶತಮಾನಕ್ಕೆ ಸೇರುವ ಅಂಬಳೆಯ ಶಾಸನದಲ್ಲಿ (ಚಿಮ. 223) ತಮ್ಮಿಸೆಟ್ಟಿ ಮರಣ ಹೊಂದಿದಾಗ ಅವನ ಪತ್ನಿ ಬೊಮ್ಮಕ್ಕ 'ಗೋಪೆಯ ಹೊಕ್ಕ' ವಿಷಯವನ್ನು ತಿಳಿಸಿದೆ. ಇದು ಕುತೂಹಲಕಾರಿಯಾದ ಅಂಶ. ಗೋಪೆ ಎಂಬ ಶಬ್ದಕ್ಕೆ ಗೋರಿ, ಹೆಣ ಹುಗಿಯುವ ಕುಣಿ, ಸಮಾಧಿ ಸ್ಥಳ ಎಂಬ ಅರ್ಥವಿದೆ.[33] ಚಿತೆಯನ್ನು ಪ್ರವೇಶಿಸುವ ಅರ್ಥದಲ್ಲಿಯೇ ನಾವು ಇದುವರೆಗೆ ಸತಿ ಅಥವಾ ಸಹಗಮನವನ್ನು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುತ್ತಿದ್ದುದು. ಪ್ರಸ್ತುತ ಸಂದರ್ಭದಲ್ಲಿ ಮೃತರನ್ನು ಹೂಳುವ ಪದ್ಧತಿಯನ್ನು ಅನುಸರಿಸುತ್ತಿದ್ದ ಪಂಗಡವೊಂದಕ್ಕೆ ವೀರನು ಸೇರಿದ್ದಿರಬೇಕು. ಆದ್ದರಿಂದ ಆತನ ಹೆಂಡತಿಯು ಅದೇ ಪದ್ಧತಿಯನ್ನು ಅನುಸರಿಸಿ, ಅಗ್ನಿಪ್ರವೇಶ ಮಾಡದೆ, ಮರಣ ಹೊಂದಿದ ಗಂಡನೊಡನೆ ಸಜೀವಸಮಾಧಿಯಾಗಿದ್ದಿರಬೇಕು. ಈ ಬಗ್ಗೆ ಹೆಚ್ಚಿನ ಅಧ್ಯಯನ ಅಪೇಕ್ಷಣೀಯ. ದೊಂಬರಹಳ್ಳಿಯ ಅತೇದಿ ಶಾಸನದಿಂದ (ಕ. 112) ದೇವಕಿ ಎಂಬಾಕೆ ಗಂಡನೊಡನೆ ಸಹಗಮನವಾಚರಿಸಿದಂತೆ ಕಾಣುತ್ತದೆ.

ವಿವಿಧ

ಬುಕ್ಕಾಂಬುಧಿಯ ಮೂಲ ಹೆಸರು ಅರಘಟ್ಟ; ಕ್ರಿ.ಶ. 889-90ರಲ್ಲಿ ಚಾಗಿ ಆ ಗ್ರಾಮವನ್ನು ಸ್ಥಾಪಿಸಿದ (ತ. 23). ಸುಮಾರು ಕ್ರಿ.ಶ. 9-10ನೆಯ ಶತಮಾನಕ್ಕೆ ಸೇರಿದ ಕನಕನಕೆರೆಯ ಶಾಸನದ (ಕ. 36) ಶಾಪಾಶಯದ ಮಾತು ಇದು: "ಇದನಾರಟೆದೋರುಮೀ ಕೆಜೆಯನೊಡೆದೋರು ಇದಂ ಸಲಿಸಿದರೀ ಕೆಜೆಯಂ ಕಟ್ಟಿದೋರ್." ಇದೇ ಕಾಲಕ್ಕೆ ಸೇರುವ ತ. 23ರಿಂದ ಧನುರಮನು ಕಲ್ಲತ್ತಿಪುರಕ್ಕೆ ಬಂದು ಮಿಂದ ವಿಷಯ ತಿಳಿದುಬರುತ್ತದೆ. ಇಲ್ಲಿ ಇಂಥ ಶಾಸನಗಳು ಇನ್ನೂ ಕೆಲವಿವೆ. ಇಂದಿನ ಮಲ್ಲೇಶ್ವರವನ್ನು ಕ್ರಿ.ಶ. 10ನೆಯ ಶತಮಾನದಲ್ಲಿ ಮೊಲ್ಲೆಪೊಸವೂರು ಎಂದು ಕರೆಯಲಾಗುತ್ತಿತ್ತು (ಕ. 181). ಅಲ್ಲೊಂದು ಮಲ್ಲೆವಸದಿ ಇದ್ದಿತು (ಕ.182); ಈ ಎರಡನೆಯ ಶಾಸನದಲ್ಲಿ ಆಸಂದಿ ಮತ್ತು ಬಳ್ಳವಿನಾಡುಗಳ ಜೊತೆಗೆ ಮಯ್ಯೂರ್ನಾಡಿನ ಉಲ್ಲೇಖ ಕಂಡುಬರುತ್ತದೆ.

ಕ್ರಿ.ಶ.1082ರ ಹಿರಿಯಂಗಳದ ತಮಿಳು ಶಾಸನವು (ಕ. 231) ಸಿಂಗಪೆರುಮಾಳನಿಗೆ ನೀಡಿದ ಭೂದಾನದ ವಿಷಯವನ್ನು ದಾಖಲಿಸುತ್ತದೆ. ಇರಗುಣಂ ಗ್ರಾಮವು ಕಲಿಯುಗದ ಅಯೋಧ್ಯೆ ಎಂದು ಪರಿಗಣಿಸಲ್ಪಟ್ಟಿದ್ದಿತು (ಕ. 231). ಅದೇ ಗ್ರಾಮದ ಕ. 229ರಲ್ಲಿ ಶಿವಭಕ್ತನಾದ ಕರಿಕಾಲಚೋಳನ ಉಲ್ಲೇಖವಿದೆ. ಅನಂತಶಿವಮುನಿಯು ಕಲಿದೇವತಾಲಯವೊಂದನ್ನು ಕಟ್ಟಿಸಿ, ಉದ್ಯಾನವೊಂದನ್ನು ಮಾಡಿಸಿದನಂತೆ; ಆತ ಕಟ್ಟಿಸಿದ ಕೆರೆಯ ನೀರು ಗಂಗೆ-ಗೋದಾವರಿ ನದಿಗಳ ನೀರಿಗೆ ಸಮಾನವಾದುದಂತೆ (ಕ. 171). ಕ. 9ರಲ್ಲಿ ದಾನವಿತ್ತ ಭೂಮಿಯ ಸೀಮೆಯನ್ನು ವಿವರಿಸುವಾಗ 'ಒಕ್ಕೊಂಬಿನಾಲ'ದ ಉಲ್ಲೇಖವಿದೆ. ವೈಜಲದೇವಿ ಪ್ರತಿದಿನವೂ ಪದ್ಮಾವತಿಯನ್ನು ಪೂಜಿಸುತ್ತಿದ್ದಳಂತೆ (ಕ. 16). ಹರಹೆಯ ಸಾಹಣಿಯನ್ನು "ರವಿರಾಹುದೇವದ್ವಿಜಗುರು ಪಾದಾರವಿಂದಮಂದಮಕರಂದಾಸ್ವಾದನ" ಭ್ರಮರ ಎಂದು ಬಣ್ಣಿಸಿದೆ (ಕ. 9). ಈತನ ಮಗ ಬಲ್ಲವೆಗ್ಗಡೆಯು ಆಸಂದಿಯಲ್ಲಿ ಕಟ್ಟಿಸಿದ ಬಲ್ಲೇಶ್ವರ ದೇವಾಲಯವನ್ನು ರುದ್ರಶಕ್ತಿಪಂಡಿತನಿಗೆ ವಹಿಸಿಕೊಡಲಾಯಿತು (ಕ. 10). ಆಸಂದಿ ಗ್ರಾಮದಲ್ಲಿನ ಹಲವು ದೇವಾಲಯಗಳನ್ನು ಕ. 14 ಹೆಸರಿಸುತ್ತದೆ: ಗಂಗೇಶ್ವರ, ಬ್ರಹ್ಮೇಶ್ವರ, ವೇದೇಶ್ವರ, ನಖರೇಶ್ವರ, ವೀರಬ್ರಹ್ಮೇಶ್ವರ, ದೇಕೇಶ್ವರ, ಬಲೇಶ್ವರ, ಮಾಚೇಶ್ವರ, ಜಗತೇಶ್ವರ, ಜಾದೇಶ್ವರ, ಮಾರೇಶ್ವರ ಮತ್ತು ಆ ಮಾರೇಶ್ವರದೊಳಗೆ ಬಲ್ಲೇಶ್ವರ. ಕ್ರಿಯಾಶಕ್ತಿ ಒಬ್ಬ ರಾಜಗುರುವಾಗಿದ್ದ (ಕ. 17). ಕ. 21ರಲ್ಲಿ ಸೂಳೆಯಹಳ್ಳದ ಉಲ್ಲೇಖವಿದ್ದು ಅದರ ದಕ್ಷಿಣಕ್ಕೆ ಸವಣಪಾದವಿದೆ ಎಂದು ತಿಳಿಸಿದೆ. ಬಗ್ಗವಳ್ಳಿಯ ಒಂದು ಶಾಸನದಲ್ಲಿ (ತ. 66) ಲಂಚದ ಉಲ್ಲೇಖವಿರುವುದು ಕುತೂಹಲಕರವಾಗಿದೆ. ಗಂಗನಗಳೆ (ತ. 10), ಸಭಾಸ್ಥಾನ (ತ. 35), ಒಗವಹಳ್ಳ, ಸಂಬುಮಡಕೆ ಮತ್ತು ಕಾಗೆಯಕೊಳ (ಕ. 126), ಅಕ್ಕರದೊಣ (ಕ. 15) ಮುಂತಾದ ಉಲ್ಲೇಖಗಳು ಗಮನ ಸೆಳೆಯುತ್ತವೆ.

4 ಮೊದಲೊಳು ಹೊಯಿಸಳರಾಜ್ಯಲಕ್ಷ್ಮಿಯೊದವಂ ತೋಳ್ವಲುಪಿನಿಂ ತಾಳ್ದಿ (ದಂ)
5 ತಂನು[ದ]ಯಂ ರಂಜಿಸೆ ತಂನ ಬಲುಪೊದವೆ ತಂನಾಜ್ಞೇಱಿ ತಂನಾಜ್ಞೆ (ಯಂ) ಮೀಱಿ ದಿಶಾಚಕ್ರಮನೊತ್ತಿಕೊ
6 ಣ್ಡು ತಳಕಾಡಂ ಗಂಗರಾಜ್ಯಕ್ಕೆ ತಾಂ ಮೊದಲಾದಂ ಯದುವಂಶವರ್ಧನಕರಂ ಶ್ರೀ ವಿಷ್ಣುಭೂಪಾಳಕಂ ||[3]
7 || ಗದ್ಯ || ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪ್ರಿಥ್ವೀವಲಭಂ ಮಹಾರಾಜಾಧಿರಾಜಂ
8 ಯಾದವಕುಲಾಂಬರದ್ಯುಮಣಿ ಸಂಮ್ಯಕ್ತಚೂಡಾಮಣಿ ದ್ವಾರಾವತೀಪುರವರಾ
9 ಧೀಶ್ವರನುಂ ಶಶಕಪುರನಿವಾಸಂ ವಾಸಂತಿಕಾದೇವೀಲಬುಧವರಪ್ರಸಾದನುಂ ಶ್ರೀಮನ್ಮುಕುಂದಪಾದಾರವಿಂ
10 ದವಂದ[ನ]ವಿನೋದನುಂ ಅಕ್ಷೂಣಲಕ್ಷ್ಮೀಲಕ್ಷಿತವಕ್ಷಸ್ಥಳಪ್ರದೇಶನುಂ ಸ್ವೇತಾತಪತ್ರಶೀತಳೀಕ್ರಿತಭೂ
11 ತಳನುಂ | ಸಂಗೀತಪ್ರಸಂಗಭಂಗೀಸಂಗತಚಾತುರಭರತನುಂ | ತರ್ಕ್ಕವಿದ್ಯಾವಿಸ್ತಾರವಿಚಾರನಿರತನುಂ ಶಬುದವಿ
12 ದ್ಯಾಸಮಗ್ರಲಕ್ಷಣಸುಲಕ್ಷಿತನುಂ | ವೇದವಿದ್ಯಾಪರೀಕ್ಷಾದಕ್ಷನುಂ | ಗಜರಾಜಗಂಡವಿಜಯಡಿಂಡಿಮಾಯ
13 ಮಾಣೋಡ್ಡಮರಮಧುಕರಪಿಂಛ್ಛಾತಪತ್ರನುಂ | ಪರವಧೂಪುತ್ರನುಂ | ಶ್ರೀಮತ್ತ್ರಿಭುವನಮ
14 ಲ್ಲ ಪ್ರತಾಪಚಕ್ರವರ್ತ್ತಿ ಹೊಯಿಸಳ ವೀರನಾರಸಿಂಹದೇವರು ಸಪ್ತಾರ್ದ್ಧಲಕ್ಷ ಪ್ರಿಥ್ವಿಯನಾಚನ್ದ್ರಾ
15 ರ್ಕ್ಕತಾರಂಬರಮೇಕಛ್ಛತ್ರಛ್ಛಾಯೆಯಿಂ ಸುಖಸಂಕಥಾವಿನೋದದಿಂ ರಾಜ್ಯಂ ಗೆಯ್ಯುತ್ತ
16 ಮಿರೆ || ಆ ಮಂಡಳೇಶ್ವರನ ತತುಪಾದಪದುಮೋಪಜೀವಿ || ಎಚೆಯಂಗರಸನ ಕಾಲದೊಳೆ
17 ಱಗದರಾತಿಗಳ ಬಲ್ಪಿಂದೆಱಗಿಸುವಂ ಯುಱದಾಂತರಾತಿಗಂತಕನಱಿಯಿರೆ ವಯಿಜರಸ

1 ಶ್ಲೋಕ
2 ಕಂದ
3 ಮತ್ತೇಭವಿಕ್ರೀಡಿತ

18 ನಂ ಮಹೀಮಂಡಳದೊಳೂ ||[1] ಆತನಳವಿಗಳಿದ ದರ್ಪ್ಪಮಂ ಪೇಳುವಡೆ || ಬೇಡರ ಬಂಕಿಯೆಂ

19 ಬಪನದಂತವನಗ್ಗದ ರಾಯನೋಡೆ ಹೆ[ಂ] ಮಾಡಿಯ ಮುನ್ತೆ ಬಿಲ್ಲ ಬಿರುದಂಕದ ಪಣ್ಡಲೆಯೊಂ

20 ನ್ದೆ ಕೋಲಿನೊಳು ನೀಡಿರದಂಬರಾಂತರದಲಾಡುವ ಹದ್ದಿನಲೊಂದು ಕಣ್ಣುವಂ ನೋಡಿದವರ್ಗ್ಗೆ

21 ಶಂಕೆಮಿಗಿಲೆಚ್ಚ ನೆಗಳ್ತೆಯ ವಯಿಜಭೂಮಿಪಂ ||[2] ಕಣ್ಣಂಬಿನ ಬಿರುದನದಂ ತಿಣ್ಣಂ ತಾಂ ಪಡೆದು

22 ರಾಯ ಹೆಂಮಾಡಿಯೊಳಂ ಬಣ್ಣಿಸುವೆನೆಂಬಗನುಪಮವಣ್ಣಂ ವಯಿಜರಸಮಾಳುಪ

23 ದರ್ಪ್ಪಂ ಜಗದೊಳು ||[1] ಯೆನಗದು ದೆಯ್ವ ನಂಮ ಕುಲಕಂ ಚಲಕಂ ಬಲುಪಿಂಗವೊರ್ಬ್ಬ (ನೆ)ಬೇಳ್ಕನು

24 [ಪ]ಮ ವಯಿಜಮಂಡಳಿಕಗಂ ಸತಿ ವಯಿಜಲದೇವಿಗೆಂಬುದು (ಂ) ಯನುದಿನ ತಂಮ ದೆ

25 ಯ್ವ ಪದ್ಮಾವತಿದೇವಿಯ ನಿಚ್ಚವರ್ಚ್ಚಿಸಲು ಮನವೊಸೆದಿತ್ತಳಾಕೆ ವರಪುತ್ರಕನಂ ಕಲಿ ಬಂಮಭೂಪನಂ ||[3]

26 ಕುಲಮಂ ಪೇಳುವಡೆ ಗಂಗವಂಶತಿಳಕಂ ಸನುಮೂರ್ತ್ತಿಯಂ ಪೇಳುವಡಂತಲವ್ವಿಲ್ಲಂ

27 ಗೆ(ಂ) ಚತುರ್ಗ್ಗುಣಂ ಪರಹಿತವ್ಯಾಪಾರಮಂ ಪೇಳುವಡೇಂ ನೆಲಕಾರ್ತ್ತಿತ್ತಪನುಗ್ರವೀರತರದೊಂದಾಟೋಪ

28 ಮಂ ಪೇಳುವಡಂ ನಿಲೆ ಮಾತಾಡುವನಯಿವತಿಬ್ಬರಳವಂ ಶ್ರೀ ಬಂಮಭೂಪಾಳಕಂ ||[4] ಗದ್ಯ || ಸ್ವಸ್ತಿ ಸಮ

29 ಸ್ತವಸುಮತೀತಳಖ್ಯಾತನುಂ ಗಂಗಾನ್ವಯಪ್ರಸೂತನುಂ ಕೊಂಗುಳಿವರ್ಮ(ಂ)ಧರ್ಮ್ಮ(ಮ)

30 ಮಹಾರಾಜಾಧಿರಾಜಂ | ಕೋಳಾಲಪುರವರಾಧೀಶ್ವರನುಂ ಪದ್ಮಾವತೀದೇವಿಯಲಬ್ಧವರಪ್ರಸಾ

31 ದನುಂ | ಗಂಗಗಾಂಗೇಯನುಂ | ಜಯದುತ್ತರಂಗನುಂ | ವಂದ್ಯಜನಕಲ್ಪಭೂಜನುಂ | ಪ್ರತಾಪ

32 ಮಾಹೇಶ್ವರನುಂ | ನನ್ದಗಿರಿನಾಥನುಂ | ಮನುಜಮಾಂಧಾತನುಂ | ಪರಿಪಂಥಿಪಾರ್ತ್ಥನುಂ | ಗಂಡರ

33 ತೀರ್ತ್ಥನುಂ || ಮದಗಜೇಂದ್ರಲಾಂಛನನುಂ | ವಿನಿಯೋಗಕಾಂಚನನುಂ || ಗಂಗಕುಳಕಮಳಮಾರ್ತಣ್ಡ

34 ನುಂ | ಅಣಿಯೊಡೆಗಂಡನುಂ | ರಣರಂಗನೀಱನುಂ | ಬಿಲ್ಲಂಕಕಾಱನುಂ | ಕಂಣ್ಣಂಬಿನಾಥನುಂ ಎ

35 ಸುವರಾದಿತ್ಯನುಂ | ಯಾದವಜತ್ತಲಟ್ಟನುಂ | ವಯಿರಿಘರಟ್ಟನುಂ | ಶರಣಾಗತವಜ್ರಪಂಜರನುಂ |

36 ವಯ್ರಿದಿಕುಂಜರನುಂ | ಪರಬಳಭಯಂಕರನುಂ | ಸತ್ಯರತ್ನಾಕರನುಂ | ಬಂಟರ ಭಾವನುಂ | ಮಱೆ

37 ಯುಗೆಕಾವನುಂ | ತಪ್ಪೆ ತಪ್ಪುವನುಂ | ಮಗಳುದಡೆಜೆಪ್ಪುವನುಂ | ಅದೆಂತುಮೊಪ್ಪುವನುಂ |

38 ಯಿಂತೀ ನಾಮಾವಳೀ ಪ್ರಶಸ್ತಿಸಹಿತರಪ್ಪ ಶ್ರೀಮಂನುಮಹಾಮಂಡಳಿಕ ಬಂಮರಸ

39 ದೇವರು ದುಷ್ಟನಿಗ್ರಹ ಶಿಷ್ಟಪ್ರತಿಪಾಳಕನಂ ಗೆಯ್ದು ಆಸಂದಿನೆಲೆವೀಡಿನೊಳು ಸುಖಸಂಕ

40 ಥಾವಿನೋದದಿಂ ರಾಜ್ಯಮುತ್ತರೋತ್ತರಾಭಿವ್ರಿದ್ಧಿಪ್ರವರ್ಧಮಾನಮಾಚನ್ದ್ರಾರ್ಕ್ಕತಾರಂಬರಂ ಸಲುತ್ತ

41 ಮಿರೆಯಿರೆ || ತತ್ಪಾದಪದ್ಮೋಪಜೀವಿ || ಪುರುಶಪ್ರಭು ಪುಣ್ಯೋದಯನಿರುತಂ ನುಡಿವೆಡೆಗೆ ಕರ್ಣ್ನ

42 ನಳ ಮಾನ್ಧಾತಂ ಹರುಶದಿನಿಪ್ಪಂಬೋನಿಧಿ ಪರುಶದಕಣಿಯೆನಿಪರುಭಯ ಕೇತಗೌಂಡಂಗಳು ||[1]

43 ಗಂಗಾಂನ್ವಯಕ್ಕೆ ಮೂಲಿಗ ಲಿಂಗಂಗತಿಭಕ್ತ ಹಿರಿಯಕೇತ . ಉಂಡಗೆ ಗಂಗಾಸತಿ ಮಲ್ಲಯವ್ವೆಗೆ ಸಂ

44 ಗದೇವರ ಪುತ್ರನಲ್ತೆ ಹರ್ಯಮಗೌಡಂ ||[5] ವೊಡಯುಟ್ಟಿದನೊಲವಿಂಗ ಸಲೆ ನಿಲೆ ಸಾಹಿತ್ಯ ಚಿಕ್ಕತೇತಗೌಡಂಗೆ

45 ಲಲನೆ ಯೆನೆ ಕಾಳಗೌಡಿಗೆ ಜನಯಿಸಿದಂ ಕೇತಗೌಡನೆನಿಕುಂ ಧರೆಯೊಳೂ ||[1]

46 ಸಕವರುಶ ೧೦೧೬ ಜೆನೆಯ ಸರ್ವ್ವಜಿತುಸಂವತ್ಸರದ ಚಯಿತ್ರ ಸು ೧ ಸೋ | ಸೂರ್ಯ್ಯಗ್ರಹಣ

1 ಕಂದ

2 ಉತ್ಪಲಮಾಲೆ

3 ಚಂಪಕಮಾಲೆ; ಅಶುದ್ಧ

4 ಮತ್ತೇಭವಿಕ್ರೀಡಿತ

5 ಕಂದ; ಅಪವಾದ

47 ಸಂಕ್ರಾಂತಿ ವ್ಯತೀಪಾತ ಶಿವಲಿಂಗಪ್ರತಿಷ್ಠೆಯಂ ಮಾಡಿ ಭೀಮೇಶ್ವರದೇವರ್ಗೆ ಅಂಗಭೋಗ ತ್ರಿಸಂಧ್ಯಾಪೂಜೆ ನನ್ದಾ

48 ದೀವಿಗೆ ಜೀರ್ಣ್ನೋದ್ಧಾರಕೆ ಸ್ವಸ್ತಿ ಶ್ರೀಮತು ಸಮಸ್ತಪ್ರಶಸ್ತಿಸಹಿತರಪ್ಪ ಮಲ್ಲುಕಜೀಯರ ಕಾಲಂ ತೊಳದೂ ಧಾ

49 ರಾಪೂರ್ವ್ವಕಂ ಮಾಡಿ ಬಿಟ್ಟ ದತ್ತಿ ಹತ್ತುಮಾರು ಘಳೆಯಲಳೆದ ಭೂಮಿ ದೇವಾಲ್ಯದ ಬಳಿಯ ತೋ

50 ಟವಳುಗು ಕಂಬ ೧೦ ಬೀರಬರಸಿಯ ಮೆಲ್ಮುತ್ತಿಗದ್ದೆ ಕಂ ೧೫ ಹಳೆಯಹಾಳ ಬಳಿಯ ಗದೆ ಕಂ ೩೬ ಕ

51 ಡಲೆಯಕೆಜೆಯ ಹಿಂದೆ ತೆವರಗದ್ದೆ ಕಂಬ ೮ ಕಿಱುಹಾಳಕಾನಿಯ ಬಳಿಯ ಗದ್ದೆ ಕಂಬ ೫ ಅಂ

52 ತೆಲಾ ಕೂಡಿ ಗದ್ದೆ ಕ ೭೪ ಎರೆಯಲು ಬಡಗಣ ಹೊಲದಲು ಸೀಗೆಯ ಕೆಯಿ ಕಂಬ ೨೬ ಕಱಳಕೆ

53 ಯಿ ಕಂಬ ೭೦ ತುಂಬಿನಕೆಜೆಯ ತೆಂಕಣಕೋಡಿಯ ಕೆಂಗಾಡ (೦) ಕಂಬ ೨೪ ತುಂಬಿನಕೆಜೆಯ ಹಿ

54 . . . ತೋಟದ ನಡುವೆ ಮರದ ಸ್ಥಳವು ೩೦೦ ಇಂತೀ ಮರಿಯಾದೆಯನು ಮಲುಕಜೀಯರ ಮಗ ಸೋಮ

55 ಜೀಯರು ನಾಳುಪ್ರಭು ಹರಿಯಮಗೌಡ ಚಿಕ್ಕಬಂಮಗೌಡ ಹಂಣ್ನೆಯ ಬಂಮಗೌಡ ಪ

56 ಲಮಾಕೆ ಮಾಕಗಾವುಂಡನೊಳಗಾದ ಸಮಸ್ತ ಪ್ರಜೆಗಳ ಮುಂದೆ ತಂಮ ಸೋದರಳಿಯ ಕಲ್ಲಜೀ

57 ಯಗೆ ತಂಮ ಮಗಳು ಮಸಣೌವ್ವೆಯನು ಕನ್ಯಾದಾನ ಭೂದಾನವಾಗಿ ಆ ಸ್ತಾನವನು ಆತಂ

58 ಗೆ ಧಾರಾಪೂರ್ವ್ವಕವಂ ಮಾಡಿ ಕೊಟ್ಟರು ಮಂಗಳ(ಮಂ)ಮಹಾ ಶ್ರೀ ಶ್ರೀ ಶ್ರೀ

59 ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾ ಷಷ್ಟಿರ್ವ್ವರುಶಸ

60 ಹಸ್ರಾಣಾಂ ಮಿಷ್ಟಾಯಾಂ ಜಾಯತೇ ಕ್ರಿಮಿ ||[1] ಕೋಟಿಪಯಂ ಕವಿಲೆ

61 ಯನೆ ಕೋಟಿ ತಪೋಧನರ ವೇದವಿದರಂ ಪಂನಿಕ್ಕೋಟಿಯ ತೀರ್ತ್ಥದ ತಡಿಯಲಿ

62 ಕೋಟಿ ಮಹಾದಿನದೊಳುಂ ಯೀ ಧರ್ಮವನಳಿದಂ || ಚೌಡವ್ವೆ . . . ಳೊವ್ವೆ ಬ

63 ಮ್ಮವ್ವೆಯಿನ್ತಿ ನಾ . . . . . . | ಇ ಸ್ಥಾನವನಾಳುವಕೆ . . .

4 (VI ತ 65)

ಅನುವನಹಳ್ಳಿ

ಅಮೃತೇಶ್ವರ ದೇವಾಲಯದ ಬಲಭಾಗದಲ್ಲಿ ನೆಟ್ಟಿರುವ ಕಲ್ಲು

It refers to the rule of *mahāmaṇḍaḷika* Vaijarasa, the Gaṅga, from Āsandi and also to the rule of Tribhuvanamalla Hoysaḷadēva over Gaṅgavāḍi. It refers to the 39th year of the Chāḷukya Jagadēkamalla; the details of date *viz.,* Śukla, Phālguṇa śu. 15, Monday may equate with Monday, 13th February, 1150 A.D.

It registers a grant of certain lands and also an oil-mill to the god by Āla-gauḍa and his son Kāḷa-gauḍa. The grant was made over to Amṛitaśakti - paṇḍita. It further records a grant of lands to Dēkōja son of Kētōja by *heggaḍe* Rāchimeya and Hāla-gauḍa.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯ

2 ನಗರಾರಂಭ ಮೂಲಸ್ತಂಭಾಯ ಶಂಭವೇ ||[1]

3 ಸ್ವಸ್ತಿ ಸಮಧ್ಗಿತಪಂಚಮಹಾಶಬ್ದ ಮಹಾಮಂಡಳೇಶ್ವರಂ ದ್ವಾರಾವತೀಪುರವರಾಧೀ

1 ಶ್ಲೋಕ

4 ಸ್ವರಂ ಯಾದವಕುಳಾಂಬರದ್ಯುಮಣಿ ಸಮ್ಯಕು[ತ್]ಚೂಡಾಮಣಿ ಮಲಪರೊ
5 ಳ್ಗಂಡ ಮಲರಬಲ್ಗಂಡಾದ್ಯನೇಕನಾಮಾವಳೀ ಸಮಾಳಾಂಕ್ರಿತನಪ್ಪ ಶ್ರೀಮನ್ಮಹಾಮಂಡ[ಳೇ]ಸ್ವ
6 ರಂ ತ್ರಿಭುವನಮಲ್ಲ ಹೊಯ್ಸಳದೇವರು ಗಂಗವಾಡಿತೊಂಭತಾಱುಸಾಸಿರಮ ದುಷ್ಟನಿ
7 ಗ್ರಹಶಿಷ್ಟಪ್ರತಿಪಾಳನದಿಂನಾಚಂದ್ರಾರ್ಕ್ಕತಾರಂಬರ ರಾಜ್ಯಂ ಸಲುತ್ತಮಿರೆ || ಸ್ವಸ್ತಿ ಸತ್ಯವಾ
8 ಕ್ಯಕೊಂಗುಳಿವರ್ಮ್ಮಧರ್ಮ್ಮ ಮಹಾರಾಜಾಧಿರಾಜ ವಂದಿಜನಕಲ್ಪಭೂಜ ಕೋಳಾಲಪುರವರಾಧೀಸ್ವ
9 ರ ಪ್ರಥಮಮಾಹೇಸ್ವರ ನಂದಗಿರಿನಾಥ ಮನುಜಮಾಂಧಾತ ನಂನಿಯಗಂಗ ಜಯದುತ್ತರ[ಂಗ] ಮ
10 ದಗಜೇಂದ್ರಲಾಂಛನ ವಿನಯೋಗಕಾಂಚನ ಪದ್ಮಾವತೀದೇವೀಲಬ್ಧವರಪ್ರಸಾದ ಮ್ರಿಗಮದಾಮೋ
11 ದ ರಿಪುನಿವಹಕಂದನ . . . ಗಂಗಕುಳಕಮಳಮಾರ್ತ್ತಂಡ ಅಣಿಯೊಡೆಗಂಡ ಕೊಡಂಗ
12 ಹರ್ತ್ತ ರಣರಂಗಧೀರ ಬಿಲಂಕಕಾಱ ಪರಮಂಡಳಸೂಱೆಕಾಱ ಎಸುವರಾದಿತ್ಯ ಕಂಣ್ನಂ
13 ಬಿನಾತ ಆಹಜತ್ತ್ರಲಟ್ಟ ವೈರಿಘರಟ್ಟ ಸರಣಾಗತವಜ್ರಪಂಜರ ವಿರಿದಿಕುಂಜರ ಕ್ಷತ್ರಿಯ
14 ಪವಿತ್ರ ಮನುಮಾ[ಂ]ಧಾತ ಪರಬಳಭಯಕರ ಸತ್ಯರತ್ನಾಕರ ಬಂಟರಬಾವ ಮಱೆವುಗೆ
15 ಕಾವ ತಪ್ಪೆತಪ್ಪುವ ನಾಮಾದಿ ಸಮಸ್ತಪ್ರಶಸ್ತಿಸಹಿತ ಶ್ರೀಮಹಾಮಂಡಳಿಕ ವೈಜರಸ
16 ರು ಆಸಂದಿಯ ನೆಲೆವೀಡಾಗಿ ಸುಖಸಂಕಥಾವಿನೋದದಿಂ ರಾಜ್ಯ ಗೆಯ್ಯುತ್ತಮಿರೆ
17 ಸ್ವಸ್ತಿ ಸಮಸ್ತಗುಣಸಂನುಡಿದು ಮತ್ತೆನ್ನದಗಂ ಗೋತ್ರಪವಿತ್ರ ಪರಾಂಗನಾಪುತ್ರ
18 ಸತ್ಯರತ್ನಾಕರ ಕೂಡಿಕೂಟಕೆತಪ್ಪುವರಗಂಡ ಹೆಱಗೆಹಳಿವರಗಂಡ ಶಿವಪಾದಸೇಕರ
19 ಶ್ರೀಮತು ಕಾಳಗವುಡನ ಮದವಳಿಗೆ ಕಾಳಗಉಡಿ ಇವರ ಸುಪುತ್ರ ಕೊಲದೀಪಕ
20 ಸತ್ಯರಾಧೇಯ ನುಡಿದಂನೆಗಂಡ ಶ್ರೀಮತು ಆಲಗಉಡನ ಮದವಳಿಗೆ ದುಗ್ಗಗ
21 ಉಡಿ ಆರು ಬಂದು ಬೇಡಿದಡಿಲ್ಲನ್ನಳು ಆ ಗಉಡನ ಮಗ ಕಾಳಗಉಡ ಗೋತ್ರಕು
22 ಳತಿಳಕ ಹಿರಿಯಬಯಲಲು ಕಡುಗ || ೨ || ಬಾಗೆಯಕೆಱೆಯಲು ಕಡುಗ
23 ಬೆದ್ದಲೆ ಮತ್ತರು || ಒಂದು ಗಾಣ ನಡಉದು ದೇವರಿಗೆ ಬಂದ ಹೇಱಿನಲು
24 ಹಿಡಿಯಡಕೆ ಹಿಡಿ ಎಲೆ ನಡಉದು | ಇನಿಸುವಂ ಆಲಗಉಡನ ಮಗ ಕಾಳ
25 ಗಉಡನು ತಂದೆಉ ಮಗನು ಇಬ್ಬರುಂ ವಿದ್ದು ಕಾಲಕಚ್ಚಿ ಧಾರಾಪೂರ್ವ ಮಾಡಿದರು
26 ಅಮ್ರಿತಸಕ್ತಿಪಂಡ್ಡಿತರಿಗೆ ಸ್ವದತ್ತ ಪರದತ್ತಂ ವಾ ಯೋ ಹರೇತಿ ವಸುಧ
27 ರಾ ಷಷ್ಟಿರ್ವ್ವರ್ಷಸಹಸ್ರಾಣಿ ವ್ರಿಷ್ಟಾಯಾಂ ಜಾಯತೇ ಕ್ರಿಮಿ ||[1] ಸ್ವಸ್ತಿ ಶ್ರೀ ಮ
28 ಚಾಳುಕ್ಯಚಕ್ರವರ್ತ್ತಿ ಜಗದೇಕಮಲ್ಲವರ್ಷದ | ೩ನೆಯ ಶುಕ್ಲಸಂವತ್ಸರದ ಪಾಲ್ಗುಣ ಸು
29 ದ್ದ ಪುಣ್ಣಮಿ ಸೋಮವಾರದಂದು ಬಿಟ್ಟರು ತುಂಬಿನಗದ್ದೆ ಬಾಗೆಯಕೆಱೆಯ
30 ಕಂಡುಗ ಹಿರಿಯಕೆಱೆಯ ಕೆಳಗೆ ಹತ್ತು ಕೊಳಗ ಹೆಗ್ಗಡೆ ರಾಚಿಮೆಯನು
31 ಹಾಲಗಉಡನು| ಇಬ್ಬರುಂ ವಿದ್ದು ಬಿಟ್ಟರು ಕೇತೋಜನ ಪುತ್ರ ದೇಕೋಜಗೆ
32 ಬಿಟ್ಟರು ಇ ಧರ್ಮ್ಮವನಳಿದವ ಗಂಗೆವಾರಣಾಸಿಯಲು ಕವಿಲೆಲ ಬ್ರಾ
33 ಹ್ಮಣನ ವಧಿಸಿದ ಫಲಮಕ್ಕು
34 ಕೊಟ್ಟ ಗದ್ದೆ . . . . . . ಸಲಿಗೆ ೧ ಎರೆಮ
35 ತ್ತ . . . . ಹರಿಹರ

1 ಶ್ಲೋಕ

5

ಅನುವನಹಳ್ಳಿ

ಬಂಕನಹಟ್ಟಿಗೆ ಹೋಗುವ ದಾರಿಯಲ್ಲಿ ಹೊಲವೊಂದರಲ್ಲಿರುವ ಕಲ್ಲು

This undated record refers to Vijayanagara king Harihara. It may belong to 14-15th century.

1 ಶ್ರೀ ಪ್ರತಾ 2 ಪ ಹರಿಹ 3 ರ

6 (VI ತ 41)

ಅಮೃತಾಪುರ

ಬಸವನಗುಡಿಯ ಮುಂದೆ ನೆಟ್ಟಿರುವ ಕಲ್ಲು

This highly damaged record is dated Śaka 1469, Plavaṅga, Mārgaśira śu. 10, Tuesday regularly corresponding to 22nd November, 1547 A.D.

It registers a grant with some revenue to god Amṛitēśvara for maintaining the perpetual lamp and service by an officer (name not clear) within his chieftency for the merit of Rāmarāja-ayya, the agent for the affairs of Sadāśivarāya, the Vijayanagara king. Details are all lost.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭ
2 ಮೂಲಸ್ತಂಭಾಯ ಶಂಭವೇ ||[1] ಸ್ವಸ್ತಿ ಸಮಸ್ತ ವಿಜಯಾಭ್ಯುದಯ ಶಾಲಿವಾಹನಶಕವರು
3 ಷ ೧೪೬೯ ನೆಯ ಪ್ಲವಂಗಸಂವತ್ಸರದ ಮಾರ್ಗಶಿರ ಶುಧ ೧೦ ಭೌಮ್ಯವಾರದಲು ಶ್ರೀ ಮ
4 ನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಸದಾಶಿ
5 ವರಾಯಮಹಾರಾಯರ ಕಾರ್‍ಯ್ಯಕೆ ಕರ್‍ತ್ತರಾದ ಶ್ರೀ ತಿರಪುತಿ ರಾಮರಾಜಅಯ್ಯನವರಿ
6 ಗೆ ಪುಣ್ಯವಾಗಬೇಕೆಂದು ಸ . . . . . . ಗುಂಮದಂಣ ಅಯ್ಯನವರು ನಂಮ
7 ಅಮರನಾಯಕತನಕೆ . . . . ಯನು ಅಮ್ರಿತೇಶ್ವರದೇವರ
8 . . . . ಯುಂ ಕಟ್ಟೆ . . . . ಸುಂ
9 ಕದ ಸ್ವಾಮ್ಯವನು ಅಮ್ರಿತೇಶ್ವರದೇವರ ನಂದಾದೀವಿಗೆಗೆ ರಾಮರಾಜಅಯ್ಯನವ
10 ರಿಗೆ ಪುಂಣ್ಯವಾಗಬೇಕೆಂದು . . . . ಧರ್ಮ್ಮವನು
11 ನಡಿಸಿದವಂಗೆ . . . . .ಯಿದಕ್ಕೆ ಅಳಿಪಿದವರು ತಾಯಿ ತಂದೆಗೆ
12 . . . . ಪಾಪಕ್ಕೆ ಹೋಹ
13 . . . . ಅಳಿಪಿದವರಿಗೆ ಪಸಿಕೆ ಈಲವೆಂದು ಆ
14 ಚಂದ್ರಾರ್ಕಸ್ಥಾಯಿಯಾಗಿ . . . . . . ಸ್ವದತ್ತಂ ದ್ವಿಗುಣಂ ಪುಣ್ಯಂ ಪರದ
15 ತ್ತಾನುಪಾಲನಂ . . . . ವೇತ್[1] ವಾಗ್ದತ್ತಂ ಮ
16 ನೋದತ್ತಂ ವಾಚಾದತ್ತಂ ದಿನೇ ದಿನೇ ಷಷ್ಟಿರ್ವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ
17 ಕ್ರಿಮಿ[1] . . . . . . ಬರಹ ಶ್ರೀ ಶ್ರೀ

---

1 ಶ್ಲೋಕ

7 (ರ 1932-48)

ಅಮೃತಾಪುರ

ಅಮೃತೇಶ್ವರ ದೇವಾಲಯದ ಮುಖಮಂಟಪದ ಪೂರ್ವದ್ವಾರದ ಒಳಗಡೆ ಎಡಜಗಲಿಯು ಕಲ್ಲಿನ ಮೇಲೆ

This label record seems to refer to the measuring pole used for measuring the lands under the tank.

ಕೆಱೆಯಳತೆಯ ಕೋಲ ಗಡಿಬ

8 (ರ 1932-49)

ಅಮೃತಾಪುರ

ಅದೇ ಅಮೃತೇಶ್ವರ ದೇವಾಲಯದ ಉತ್ತರ ಬಾಗಿಲ ಮುಖ ಮಂಟಪದ ಭುವನೇಶ್ವರಿ ಒಳಗಿರುವ ಪ್ರತಿಮೆಗಳ ಕೆಳಗೆ

This 12th century epigraph records the names of sculptors.

1 ಮಲಯ

2 ಮಲಿತಮ

3 ಪದುಮಂಣ

4 ವಿಕಡರೂವ ಸುಬುಜಗ | ದಿಶವರೂವ ಸುಬುಜರು

5 ಪದ್ಮುಮಯ ಬೂತಯ

ಮಧ್ಯದ ಭುವನೇಶ್ವರಿಯೊಳಗೆ

6 ಮಲಿತಮ

7 ರೂವಾರಿ ಬಲುಗನು

ದಕ್ಷಿಣ ಭುವನೇಶ್ವರಿಯೊಳಗೆ

8 ಮಲಿ . .

ದಕ್ಷಿಣ ದ್ವಾರದ ಭುವನೇಶ್ವರಿಯಲ್ಲಿ

9 ಮುಳಣ *

9 (VI ತ 42)

ಅಮೃತಾಪುರ

ಅದೇ ಅಮೃತೇಶ್ವರ ದೇವಾಲಯದ ಒಳಬಾಗಿಲಿನ ಉತ್ತರ ಕಡೆ ನೆಟ್ಟಿರುವ ಕಲ್ಲು

This record refers to the rule of Hoysaḷa Vīraballāḷa and is dated Śaka 1128, Krōdhana, Pushya śu. 1, Monday, Uttarāyaṇa-saṅkramaṇa. The given details correspond to Monday, 12th December, 1205 A.D. The Śaka year was current and there was no *saṅkramaṇa* on that day.

It registers a grant of Amṛitāpura to god Amṛitēśvara consecrated by Amiteya-daṇḍanāyaka for the worship, offerings, repairs and renovation *etc.*, by Nāga-gāvuṇḍa of Hādiyakere together with his sons and his elder brother Māḷa-gauda, Māka-gauḍa and their sons. It also recounts the genealogy of the donor. The record is slightly damaged at the end.

---

* ಇದು ನಾಗರಾಕ್ಷರದಲ್ಲಿದೆ

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭ
2 ಮೂಲಸ್ತಂಭಾಯ ಶಂಭವೇ[1] || ವೃ || ಸಳನೆಂಬಂ ಶಶಕ ಪ್ರಸಿದ್ಧಪುರದೊಳ್
3 ವಾಸನ್ತಿಕಾದೇವಿಯಂ ತಳೆದಾರಾಧಿಸುವಾಗಳುತ್ತರಳನೇತ್ರಂ ಘೋರವಕ್ತ್ರಂ ವಿಶ್ವಂ
4 ಖಿಳಗಾತ್ರಂ ಪುಲಿ ಪಾಯೆ ಕಂಡು ಮುನಿನಾಥಂ ಕುಂಚಮಂ ಕೊಟ್ಟು ಪೊಯ್ಸಳಯೆಂ
5 ದಂ ಬಳಿಕಾಯ್ತು ಪೊಯ್ಸಳವೆಸರ್ತ್ತಾಂ ಯಾದವೋರ್ಬ್ಬೀಸರೊಳ್ ||[2] ಅಲಗಿಂ ಸಿಂಗಮನಿಱಿದನ ಕಲಿ
6 ತನಮಂ ನಗುವ ತೆಱದೆ ಮೆಱವುದು ಸೆಳೆಯಿಂ ಪುಲಿಪೊಯ್ದ ಕುಱುಪು ಪೊಯ್ಸಳ
7 ಕುಲತಿಲಕನ ಮತ್ತಗಜದಟಕೆಯದೊಳೀಗಳು ||[3] ಅನಿತೊಂದುಂನತಿವೆತ್ತ ಪೊಯ್ಸಳಕುಳಂ ಪೂ
8 ರ್ವ್ವಾದ್ರಿಯಂ ಪೋಲ್ವಿನಂ ವಿನಯಾದಿತ್ಯನೃಪಾಳನುದ್ಭವಿಸಿದಂ ಭೂಲೋಕದಾದಿತ್ಯನೆಂಬಿನೆಗಂ ಕ
9 ಟ್ಟಲೆ ಕೂಡೆ ಕಣ್ಗೆ ಕವಿದತ್ತನ್ಯಾವನೀಶರ್ಗ್ಗೆ ತೊಟ್ಟನೆ ಕೈಕೊಂಡುದಲರ್ಕ್ಕೆಯಂ ಕುವಳೆಯಂ ಮತ್ತಾ
10 ತನಿಂ ಕೌತ್ಕಂ ||[2] ಕೆಳೆನಡೆಯಿಂ ಕಳಹಂಸೆಗೆ ಕೆಳೆನುಡೆಯಿಂ ಕೋಕಿಳಕ್ಕೆ ಸೋಗೆಗೆ ಮುಡಿಯಿಂ ಕೆಳೆ ಕೆಳೆಯ
11 ಬರಸಿಯೆ ತತ್ಕುಳವಧುವಾದಳು ತದೀಯಸುತನೆಱೆಯಂಗಂ||[2] ವೃ || ಚಲದೆಱೆಯಂಗೆ ಚಾಗದೆ
12 ಱೆಯಂಗೆ ಜಸಕ್ಕೆಱೆಯಂಗೆ ಮಿಕ್ಕದೋರ್ವ್ವಲದೆಱೆಯಂಗೆ ವೀರದೆಱೆಯಂಗೆ ಕುಲೋಂನತಿ ತಂನೊಳೊಪ್ಪ
13 ವೇಚಲೆ ಯೆಱೆಯಂಗೆ ಕೀರ್ತ್ತಿಯೆಱೆಯಂಗೆಱೆಯಂಗನೃಪಂಗೆ ನಂದನಂ ಜಲಧಿಪರೀತ ಭೂವಳೆಯವರ್ದ್ಧ
14 ನನಂಕದ ವಿಷ್ಣುವರ್ದ್ಧನಂ ||[4] ಬಿಟ್ಟಿಗನಾಹವಾಂಗಣಕೆ ಜೆಟ್ಟಿಗನೆತ್ತಿದೊಡತ್ತ ಕಂಚಿಬೆಂಗೊಟ್ಟುದು ಕೊಂಗು ಕೂ
15 ಡೆ ನೆಲೆವಿಟ್ಟುದು ಮಿಕ್ಕ ವಿರಾಟಕೋಟೆ ಕೂಗಿಟ್ಟುದು ಕೋಯತೂರ್ಕ್ಕೆದಱಿ ಕೆಟ್ಟುದು ರೂಢಿಯ
16 ಚಕ್ರಗೊಟ್ಟಮಿಂಬಿಟ್ಟುದು ಕಯ್ದುವಿಕ್ಕಿ ಕಡಲೊಳ್ಪಡಲಿಟ್ಟುದು ಸಪ್ತ ಕೊಂಕಣಂ ||[5] ದೇವಿವೆಸರೆಸೆವ ಲಕು
17 ಮಾದೇವಿಗಮಾ ವಿಷ್ಣುವರ್ದ್ಧನಂಗಂ ತನಯಂ ಶ್ರೀವಿಜಯನಾರಸಿಂಹ ಮಹೀವಲ್ಲಭನವನವೀರ
18 ಮುಪಮಾತೀತಂ ||[3] ನರಸಿಂಹಂ ನರಸಿಂಹನನ್ತೆ ಮುನಿಸಿಂ ಮಾಱಾನ್ತ ವೀರಾರಿಭೂಪರನಣ್ಮುಟ್ಟಿ
19 ನೊಳಿಂತು ಕಂಡೊಡೆ ಬಱಿಕ್ಕಂ ಮಂಮ ಪೋಟ್ದಿಕ್ಕಿ ಪೇರುರಮಂ ಧೊಕ್ಕನೆ ಕುತ್ತಿ ಚಕ್ಕನೆ ಭುಜದ್ವಂದ್ವಂಗಳಿಂದ
20 ತ್ತಿ ಬಲ್ಗರುಳಂ ಕೋದೆಳಲಿಕ್ಕಿ ಬೀರಸಿರಿಗೆತ್ತಂ ತೋರಣಂಗಟ್ಟನೇ ||[2] ಪಟ್ಟಮಹಾದೇವಿಗಮಾ ಕಟ್ಟಣಕದ
21 ಕಲಿಯೆನಿಪ್ಪ ನರಸಿಂಹಂಗಂ ಪುಟ್ಟಿದನಾಹವಜಯದೊಡವುಟ್ಟುವಿನಂ ರಾಯಮನ್ಮಥಂ ಬಲ್ಲಾಳಂ ||[3]
22 ವೃ || ಶುಂಡಾಳಂ ಮದಮುಳ್ಳ ಚೋಳನಳವಿಂದಾ ಸಿಂಹಳಸಿಂಹಮುದ್ದಂಡಂ ಸೇವುಣನಾವಗಂ ಸರಭವಿಂ
23 ನ್ತೀ ಮೂವರುಂ ರಾಯರಂ ತುಂಡಂಮುಂಡದೊಳಾಳೆ ಪೊಯ್ಯದಿರನಾರೇನ್ ಪೇಳ್ದಪೆಂ ರಾಯಭೇರುಂ
24 ಡಂ ರಾಯರ ಚಕ್ರವರ್ತ್ತಿರಣದೊಳ್ ಬಲ್ಲಾಳಭೂಪಾಳಕಂ ||[6] ವೃ || ಉರಿಯಂತಂ ತಟ್ಟೆಯಿಂ ಸುಟ್ಟುರಿ
25 ಸಿ ನೆಗೆಯೆನೆತ್ತಮ್ಮ್ರಹೀಚಕ್ರದೊಳ್ಕಗ್ಗರಿಕೇತಂತೆತ್ತಲುಂ ಪಂದಲೆ ಪಡಲಿಡೆ ಧಂ ಧಂ ಧಗಿಲ್ಬುಭ್ರುಗಿಲ್ಲಂಘುರಿ
26 ಳೆಂದೇನಳ್ಕಿತೋ ಸೇವುಣಬಳವನಮಂ ವೀರಬಲ್ಲಾಳ ಕೋಪೋದ್ಧುರದಾವೋಗ್ರಾನಳಂ ಶಾತ್ರವನೃಪತಿ
27 ಮೃಗಬ್ರಾತಮಳ್ಕಾಡುವಂನಂ ||[7] ಗದ್ಯ || ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪ್ರಿಥ್ವೀವಲ್ಲ
28 ಭ ಮಹಾರಾಜಾಧಿರಾಜ ಪರಮೇಶ್ವರಂ ದ್ವಾರವತೀಪುರವರಾಧೀಶ್ವರಂ ಯಾದವಕುಳಾಂಬ

---

1 ಶ್ಲೋಕ
2 ಮತ್ತೇಭವಿಕ್ರೀಡಿತ
3 ಕಂದ
4 ಚಂಪಕಮಾಲೆ
5 ಉತ್ಪಲಮಾಲೆ
6 ಶಾರ್ದೂಲವಿಕ್ರೀಡಿತ
7 ಮಹಾಸ್ರಗ್ಧರೆ

29 ರದ್ಯುಮಣಿ ಸಮ್ಯಕ್ತ್ವಚೂಡಾಮಣಿ ಮಲೆರಾಜರಾಜಂ ಮಲಪರೊಳ್ಗಂಡ ಗಂಡಭೇರುಂಡನಸಹಾ
30 ಯಶೂರ ಶನಿವಾರಸಿದ್ಧಿ ಗಿರಿದುರ್ಗ್ಗಮಲ್ಲಂ ರಾಯಶಿರಸೆಲ್ಲಂ ಬಿರುದಂಕಭೀಮಂ ಚಲದಂಕ
31 ರಾಮಂ ನಿಶ್ಶಂಕಪ್ರತಾಪಚಕ್ರವರ್ತ್ತಿ ಹೊಯ್ಸಳ ವೀರಬಲ್ಲಾಳದೇವರ ತತ್ಪಾದಪದ್ಮೋಪಜೀವಿಗ
32 ಳಪ್ಪ ನಾಗಿಗಾವುಂಡನ(ಮ)ಂನ್ವಯಾವತಾರಮೆಂತೆಂದೊಡೆ || ವೃ || ಹರಿಯ ಸರೋಜನಾಭಿಯೊ
33 ಳು ಪದ್ಮಭವಂ ನೆಜೆಪುಟ್ಟುವಂದದಿಂ ವರನಿಧಿ ಕೇತಗೌಡವಿಭುಗಂದವನಂಗನೆ ಮಾರಗೌಡಿಗಂದು
34 ರುತರತೇಜನೂರ್ಜ್ಜಿತಯಶಂ ಶುಭಲಕ್ಷಣನತ್ಯುದಾರಿ ಸಂಗರದೊಳು ಫಲ್ಗುಣಂಗೆಣೆಯನ
35 ಲ್ಗುಣಿ ನಾಗಗವುಂಡ ಪುಟ್ಟಿದಂ ||[1] ವೃ || ಶ್ರೀಗೆ ನಿವಾಸಭೂಮಿಯೆನಲೊಪ್ಪುವ ನಾಗಗವುಂಡನಗ್ರ
36 ಜಬ್ಬೋಗದೊಳಿಂದ್ರನಂತೆಸೆವರಂಕದ ಶೂದ್ರಕನಂತೆ ವಿಕ್ರಮಕ್ಕಾಗರವಾದರೀ ನೆಗಳ್ದ ಮಾಳಗವುಂಡನು
37 ಮಾಕಗೌಡನುಂ ಚಾಗದೊಳಂ ದಧೀಚಿ ಖಚರೇಶ್ವರರಂ ನೆಜೆ ಪೋಲ್ವರಿರ್ಬ್ಬರುಂ ||[2] ವ || ಮತ್ತಮಾ ನಾಗಗಾವುಂ
38 ಡನ ಪರಾಕ್ರಮದುಪಕ್ರಮವಂ ಪೇಳ್ವಡೆ || ವೃ || ಅರಿಸಾಮಂತಕುಳಾಕುಳಾಚಳದಳದ್ದಂಭೋಳಿದಂ
39 ಭೋಳಿನಿಷ್ಠುರಸಾಮಂತಗಜೇಂದ್ರಯೂಥವಿದಳಂ ನಾಗಾರಿನಾಗಾರಿಭೀಕರಸಾಮಂತನಿಕಾಯದೈತ್ಯಬ
40 ಳವತ್ಕಂಸಾರಿ ಕಂಸಾರಿಸಂಗರರಂಗಕ್ಕಹಿವೈರಿ ವೈರಿಯೆನಿಪಂ ಸಾವನ್ತ ನಾಗಾರ್ಜ್ಜುನಂ ||[3] ವೃ || ಮದನನ
41 ಮಂತ್ರದೇವತೆಯೆನಲ್ಮಿಗೆ ರಂಜಿಪ ಮಾದಿಗೌಡಿಗಂಕದ ಕಲಿ ನಾಗಗೌಡವಿಭುಗಂ ಸುತರಾ
42 ದರನೂನದಾನಿಗಳ್ಕದನದೊಳಾಂತರಂ ತವಿಸುವಿಂದ್ರಸುತಂಗೆಣೆ ಚಿಕ್ಕಕೇತೆಯಂ ಸದಮಳಕೀರ್ತ್ತಿಗಾ
43 ಣ್ಮನೆನಿಪಂ ಕುಸುಮಾಯುಧಮೂರ್ತ್ತಿ ಮಾಳೆಯಂ||[1] ವ || ಮತ್ತಮಾ ಚಿಕ್ಕಸಾವನ್ತಕೇತನ ಪರಾಕ್ರ
44 ಮವಂ ಪೇಳ್ವಡೆ || ಭಟಭಟಭಳ್ಪಟಭ್ಪಟಿಯೆನಲ್ಮುಱಿದತ್ತಿದಿರಾಂತ ಬೀರರಂ ಘಟೆಘಟೆ ತಾಗೆ ನುಗ್ಗಿದುದು
45 ಕೋಳೆಲುಗಳ್ನೆಳಿಲುಂ ನೆರಿಲ್ದೆನಲ್ಬಟರನನೇಕರಂ ಭರದೆ ಸೀಳ್ದುದು ಸಜ್ಜೆನೆ ಸಜ್ಜೆನಲ್ಮದೋತ್ಕಟಮಿದೆ ಕೇತಪೆಂ
46 ಬ ಕಲಿ ನಾಗಗವುಂಡನ ಗಂಧವಾರಣಂ ||[1] ಮಾರವಿರೋಧಿಯನ್ತೆ ಕಲಿ ಮಾಕಣನೂರ್ಜ್ಜಿತ ಪುಂಣ್ಯ ಬಂ
47 ಮ್ಮಯಂ ಧೀರನುದಾರಿ ರಾಮನನುಜಂ ಲಕ್ಷ್ಮೀಧರನನ್ತೆ ಲಕ್ಕಣಂ ಸೂರಿಜನಸ್ತುತಂ ಬಹುಕಳಾನಿಧಿಯಂ
48 ಕದ ಚಂದ್ರಮೌಳಿ ಗಂಭೀರರುದಾರರಿನ್ತುಱುವರುಂ ದಿನನಾಯಕನನ್ತಿರೊಪ್ಪುವರ್ ||[4] ವ || ಮತ್ತಂ ಸಾ
49 ಮಂತಚೂಡಾಮಣಿಯೆನಿಸಿದ ನಾಗಗಾವುಂಡನಗ್ರಜಂ ಮಾಳಗಾವುಂಡಂಗಮಾತನ ವಲ್ಲ
50 ಭೆ ನಾಗಗಾವುಂಡಿಗಂ ಪುಟ್ಟಿದರ್ತ್ತನಯರೊಳಗೆ ಕದನಪ್ರಚಂಡನೆನಿಸಿದ ಪಿರಿಯ ಸಾವನ್ತ ಕೇತನುಂ
51 ಬಿರುದರ ನೆಟ್ಟೆಲುವಂ ಮುಱಿವ ಚಟ್ಟೆಯನುಂ | ಕೂರದರಂ ನಿಮ್ಮೂಳಿಸುವ ಬಂಮ್ಮೆಯನುಂ | ಲೋಕಸ್ತು
52 ತನೆನಿಸಿದ ಮಾಕಣನುಂ | ಮೀ ನಾಲ್ವರೊಳಗೆ ಪಿರಿಯ ಸಾವನ್ತ ಕೇತನ ಪರಾಕ್ರಮವಂ ಪೇಳ್ವಡೆ || ವೃ ||
53 ಧರಣೀದರ್ಪ್ಪಿಷ್ಟಸಾಮಂತಕರುರದಲಗುದ್ದಂಡ ವಿದ್ವಿಷ್ಟಸಾಮಂತರ ಸೇನಾವಾರ್ದ್ಧಿಯಂ ಗೋಳಿಡೆ ಕ
54 ದಡುವ ಮಂಥಾಚಳಂ ಧೂರ್ತ್ತಸಾಮಂತರ ಬೇರಂ ಕಿಳ್ತು ವಾರಾಶಿಯೊಳಲೆವಸುರಂ ಮ
55 ಚ್ಚರಂದೋರ್ಪ್ಪ ಸಾಮಂತರ ನಾಟಂದೊತ್ತಿ ಗೋಣಂ ನುಲಿದು ಬಿದಿರ್ವ ಮಾಕಾಳಿ ಸಾವನ್ತ ಕೇತಂ ||[5] ವಚನ ||
56 ಮತ್ತಂ ನಾಗಗಾವುಂಡಂಗಂ ಪಿರಿಯ ಮಾಳಗಾವುಂಡಂಗಂ ಕಿಱಿಯ ಮಾಕಗಾವುಂಡಂಗಮಾ
57 ತನ ಸತಿ ಕೆಳ್ಳಗಾವುಂಡಿಗಂ ಪುಟ್ಟಿದ ವೀರಸಾವನ್ತ ಬಮ್ಮನುಂ | ಸುಕುಮಾರನೆನಿಸಿದ ಮಾರನುಂ

1 ಚಂಪಕಮಾಲೆ
2 ಉತ್ಪಲಮಾಲೆ
3 ಮತ್ತೇಭವಿಕ್ರೀಡಿತ
4 ಉತ್ಪಲಮಾಲೆ ; ಅಶುದ್ಧ
5 ಮಹಾಸ್ರಗ್ಧರೆ

58 ಮಿನ್ನಿರ್ವರೊಳಗೆ ಸಾವನ್ತ ಬಮ್ಮರ್ನನ ಪೆರ್ಮ್ಮೆಯಂ ಪೇಳ್ವಡೆ || ವೃ || ನೆಗೞ್ದೀ ಸಾಮನ್ತ ಬಮ್ಮರ್ನಂ ಕುಸುಮ
59 ಸರನವ್ವೋಲುದ್ಘಸೌಂದರ್ಯರೂಪಂ ನೆಗೞ್ದೀ ಸಾವನ್ತ ಬಮ್ಮರ್ನಂ ಸುರತರುಫಲಮಾದನ್ತೆ ಕೂ
60 ರ್ತ್ತೀವ ಪೊಂನಂ ನೆಗೞ್ದೀ ಸಾಮನ್ತ ಬಮ್ಮರ್ನಂ ಪೊಡವ ಬಿರುದಸಾಮಂತ ಗನ್ಧೇಭಸಿಂಹಂ ನೆಗೞ್ದೀ ಸಾವನ್ತ ಬ
61 ಮ್ಮರ್ನಂಗದಿರದಿದಿರೊಳಂ ಮೀಱಿ ಮಾಱಾಂಪನಾವಂ ||[1] ಸ್ವಸ್ತಿ ಶ್ರೀಮನ್ಮಹಾಸಾಮಂತಚೂಡಾಮಣಿ
62 ಯುಂ | ಬಿರುಧಸಾಮಂತವೀರಾಗ್ರಣಿಯುಂ | ಉದ್ದಂಡಸಾಮನ್ತಗಿರಿವಜ್ರದಂಡನುಂ | ವಾರವಿಳಾಸಿನೀ
63 ಕುಸುಮಕೋದಂಡನುಂ | ಕದನಪ್ರಚಂಡ ಸಾಮನ್ತಮದನಮಹೇಶ್ವರನುಂ | ಚೋಳಕಾನ್ತಾಕಟಾಕ್ಷ ಕೈ
64 ರವವನಶರಚ್ಚಂದ್ರನುಂ | ವಿಭವಾಮರೇಂದ್ರನುಂ | ಮೆನಿಸಿದ ಹಾದಿಯಕೆಱೆಯ ನಾಗಗಾವುಂಡಂ
65 ತಂನ ಮಕ್ಕಳುಂ ತಂನಿಂ ಪಿರಿಯ ಮಾಳಗೌಡ ಮಾಕಗೌಡನ ಮಕ್ಕಳುಂ ಮುನ್ತಾಗಿದ್ರ್ದು ಅಮಿತೆಯ
66 ದಂಡನಾಯಕರು ಸುಪ್ರತಿಷ್ಠಿತಂಮ್ಮಾಡಿದಮೃತೇಶ್ವರದೇವರ್ಗ್ಗೆ ಅಂಗಭೋಗ ರಂಗಭೋಗ ಖಂಡಸ್ಫುಟಿ
67 ತ ಜೀರ್ಣ್ನೋದ್ಧಾರಕವಾಗಿ ಸಕವರ್ಷ ೧೧೨೮ ನೆಯ ಕ್ರೋಧನಸಂವತ್ಸರದ ಪುಷ್ಯ ಸುದ್ಧ ಪಾಡಿವ
68 ಸೋಮವಾರದುತ್ತರಾಯಣಸಂಕ್ರಮಣದಂದು ಅಮೃತಪುರಮಂ ಸರ್ವನಮಶ್ಯವಾಗಿ ಚಂ
69 ದ್ರಾರ್ಕ್ಕತಾರಂಬರಂ ಸಲುವನ್ತಾಗಿ ಧಾರಾಪೂರ್ವ್ವಕಂ ಮಾಡಿಕೊಟ್ಟ ದತ್ತಿ || ಅಮ್ರಿತಪುರ
70 ದ ಚತುಸ್ಸೀಮೆಯ ಕ್ರಮವೆಂತೆಂದೊಡೆ | ಬಡಗಣದೆಸೆಯ ಕಂಕಗೌಡನಕೆಱೆಯೊಳಗಣ ಹ
71 ಳ್ಳದ ಬಳಿಯ ನೆಟ್ಟ ಕಲ್ಲು | ಅಲ್ಲಿಂ ತೆಂಕಲೋಣಿಯ ಬಳಿಯ ನಟ್ಟ ಕಲ್ಲು | ಅಲ್ಲಿಂ ಮೂಡು ಮುನ್ತಾ
72 ಗಿ ಕೂಟಿನಮಡುವಿನ ಕಟ್ಟೆಯ ಕೆಳಗಣ ಬಾಗಿನ ಮೂಡಣದಡದ ನಟ್ಟ ಕಲ್ಲಾದಿಯಾಗಿ
73 ಚಿಣ್ಣವಗಟ್ಟದ ಕೆಳಗಣ ಚಂಚರಿವಳ್ಳದ ಬಳಿಯಣ ನಟ್ಟಕಲ್ಲಾದಿಯಾಗಿ ತೆಂಕಮುಂದಾಗಿ ಹೆಬ್ಬ . .
74 ಸಾಲ್ಗೊಂಡು ನಟ್ಟ ಕಲ್ಲು ಮೊದಲಾಗಿ ಪಡುವ ಮುಂತಾಗಿ ಹೆಬ್ಬಳ್ಳ ಮೇರೆಯಾಗಿ . . . .
75 . ಜವನನಕೆಱೆಯ ಕೆಳಗಣಹಳ್ಳ ಹೆಬ್ಬಳ್ಳವ ಕೂಡಿದಲ್ಲಿ ನಟ್ಟ ಕಲ್ಲು ಮೊದಲಾಗಿ . . . .
76 ಯನ ಕೆಱೆಯೊಳಯಿಂ ಕೆಬಳಹಳ್ಳ . . . .
77 ಯೊಳಗಣ ಹಳ್ಳ ಮೇರೆಯಾಗಿ ಕಂಕಗೌಡನಕೆಱೆಯೊ . . . .

10 (VI ತ 43)

ಅಮೃತಾಪುರ

ಅದೇ ಅಮೃತೇಶ್ವರ ದೇವಾಲಯದ ದಕ್ಷಿಣ ಕಡೆ ಇರುವ ಒಂದನೆಯ ಕಲ್ಲು

This supplementary record of the same period registers a grant of certain lands to god Amṛitēśvara. Further, it lays down certain stipulations relating to the maintenance of areca-nut garden belonging to god Amṛitēśvara of Amṛitāpura. It also records a grant of 24 *vṛittis* by Amitayya-daṇṇāyaka during the installation of the god.

1 ಹಿರಿಯ ಸಾಸನದ ಕೊಱತೆಯ ಸಾಸನ ಅಮ್ರಿ
2 ತಪುರದಲು ಅಮಿತೆಯದಣ್ಣಾಯಕನ ಗೌಡಿಕೆ
3 ಯ ವುಂಬಳಿ ತೋಟ ಸಹಿತ ಗದ್ದೆ ಗಂಗನಗಳೆಯಲುಮ
4 ತ್ತರಯ್ದು ಮತ್ತ ೫ ಮನೆಯ ಸ್ಥಳ ಕಾಳವ್ವೆದಣ್ಣಾಯಕಿತ್ತಿಯ
5 ರಮನೆಯ ಬಡಗಣ ಬೇಲಿಯಾದಿಯಾಗಿ ಹೆಗ್ಗಡೆ ಜಕ್ಕಣ್ಣನಮ

1 ಮಹಾಸ್ರಗ್ಧರೆ

6 ನೆಯ ಪಡುವಣ ಬೇಲಿ ಅರಮನೆಯ ಹಿತ್ತಿಲ ಪಡುವಣ ಬೇಲಿ ಅ
7 ಯಿಚಯ್ಯನ ತೆಂಕಣ ಹಿತ್ತಿಲ ಬೇಲಿ ಮೇರೆ ಬಲ್ಲಯ್ಯ ಕಾಮಯ್ಯ
8 ನ ತೆಂಕಣ ಹಿತ್ತಿಲ ಬೇಲಿ ಮೇರೆಯಾಗಿ ಮೂಡಲು ಅರಳಿಯಕ
9 ಟ್ಟೆ ಮೇರೆಯದುಪೊದಲಾಗಿ ಬಡಗ ಮುಂತಾಗಿ ಬ್ರಹ್ಮಪುರಿಯ
10 ಕೇರಿಯ ಹಿತ್ತಿಲಬೇಲಿ ಮೇರೆಯಾಗವುಡಿಕೆಯ ತುಡಿಕೆ ನಿವೇಶನದ
11 ಕಂಬ ೩೦ ದೇವರ ಗಂಗುರದ ಗವುಡಿಕೆಯ ಗದ್ದೆ ಗಂಗನ ಮತ್ತರೊಂದು
12 ಮತ್ತ ೧ ಆ ಬೆದ್ದಲು ಮತ್ತರೆರಡು ಮತ್ತ ೨ ಆ ಮನೆ ಕಳ ದೇವರ ಬೆಳ್ಳಿಗೆಜೆ
13 ಯ ಗವುಡಿಕೆಯ ಗದ್ದೆ ಗಂಗನ ಮತ್ತರೊಂದು ಮತ್ತ ೧ ವೊಜಿತಲೆಯ
14 ಮತ್ತರೊಂದು ೧ ಆ ಬೆದ್ದಲು ಮತ್ತರು ಮೂಱು ೩ ಆ ವೂರ ಮನೆ ಕ
15 ಳನು ಹುಣಿಸೆಯಕಟ್ಟದ ಗವುಡಿಕೆಯ ಗದ್ದೆ ಗಂಗನ ಮತ್ತರೆರಡು ೨
16 ಆ ಮನೆ ಕಳನು ಅದು ಗವುಡಿಕೆಯಲ್ಲ ಕೆಱೆಯ ಕಟ್ಟದಲ್ಲಿ
17 ಗೆ ಯಿಕ್ಕಿದ ಕೊಡಗಿಯ ಗದ್ದೆ || ಯೀಯಮಿತಪುರದಲು
18 ಅಮ್ರಿತೇಶ್ವರದೇವರ ಭೂಮಿಯೊಳಗೆ ಆರು ಅಡಕೆ ತೋಟವನಿಕ್ಕಿ
19 ದವರಿಗೆ ಎಂದೆಂದಿಗಂ ಗಂಗನ ಗಳೆಯಲು ಕಂಬವೊಂದಕ್ಕಂ ಕ
20 ಟ್ಟುಗುತ್ತಗೆ ಪಿಂಡಾದಾನವಾಗಿ ತೆಱೆಪಣಂ ಮೂಱಂ ತೆಱುವರ ಗಂಗ
21 ನ ಗಳೆಯಲು ಕಂಬವೊಂದಕ್ಕಂ ತೆಱೆವೆ ೩ ಹಳ್ಳವ ಹೂಳಿ ಅಡಕೆದೋ
22 ಟವನಿಕ್ಕಿದವರಿಗೆ ಆ ಮರ ಫಲಕ್ಕೆ ಬರಲೊಡನೆ ಯೀ ಮರ್ಯ್ಯಾದೆಯ
23 ತೆಱುವರು ಆ ತೋಟಂಗಳು ಆಧಿಕ್ರಯವಿಕ್ರಯಕ್ಕೆ ಸಲು
24 ವವು ಸ್ವಸ್ತಿ ಶ್ರೀಜಯಾಭ್ಯುದಯಶ್ಚ ಅಮಿತಯ್ಯದಣ್ನಾಯಕ
25 ರುಶ್ರೀಯಮಿತೇಶ್ವರದೇವರ ಪ್ರತಿಷ್ಠೆಯಲು
26 ಧಾರಾಪೂರ್ವಕವಾಗಿ ಕೊಟ್ಟ ಯಿಪ್ಪತ್ತುನಾಲ್ಕು ಬ್ರಹ್ಮಪುರಿಯ
27 ವ್ರಿತ್ತಿ ನಾನಾ ಗೋತ್ರೇಭ್ಯಃ ಅಮ್ರಿತಪುರದ ಹಿರ್ಯ್ಯಕೆಱೆ
28 ಯ ಕೆಳಗೆ ವ್ರಿತ್ತಿ ಹಂನೆರಡಕ್ಕಂ ಗಂಗನ ಗಳೆಯಲು ಕಂಬ

11 (VI ತ 44)

ಅಮೃತಾಪುರ

ಅದೇ ಕಲ್ಲಿನ ಮೇಲೆ

This 16th century epigraph records the renewal of the former grant. It states that Ali Khān Sāhēb came there and enquired the former matters, released the lands of the village and granted the same. The *gauḍas* and *sēnabōvas* of the place caused the boundary stones to be set up.

It is dated the year Parābhava, Pushya śu. 2, Monday. The details may be equated with Saturday, 25th December, 1546 A.D.

1 ಶ್ರೀ || ಪರಭವಸಂವತ್ಸರದ ಪುಶ್ಯ ಸುಧ ಬಿದಗು ಸೋಮರ

2 ದಲು ಅಲ್ಲಿ ಖಿನಸಹೇಬರು ಬಂದು | ಪುರ್ವವಿಚರಿಸಿ | ಯಿ
3 ಗ್ರಮದ ಭುಮಿನು ಬಿಡಿಸಿಕೊಟ್ಟು | ಯಿ ಸ್ತಳದ ಗೌಡಸೇ
4 ನಬೋವಗಳು ಸಹ ಬಂದು || ನಕ್ಲು ದಿಕಿಗು ಕಲ್ಲು ನಟು ಕೊ
5 ಟರು || ಯಿದಕ್ಕೆ ಆರು ಪಕ್ಷ ಪರಪಕ್ಷ ಮಾಡಿದರೆ
6 ದೇವಲೋಕಕೆ ಹೊರತ್ತು

12 (VI ತ 45)

ಅಮೃತಾಪುರ

ಅದೇ ಅಮೃತೇಶ್ವರ ದೇವಾಲಯದ ದಕ್ಷಿಣ ಕಡೆ ನೆಟ್ಟಿರುವ ಎರಡನೆಯ ಕಲ್ಲು

This inscription refers to the rule of Hoysaḷa Ballāḷa and is dated Śaka 1119, Piṅgaḷa, Pushya ba. 7, Monday, Uttarāyaṇa-saṅkramaṇa. These details correspond to Thursday, 1st January, 1198 A.D. There was no *saṅkramaṇa* on that day.

It refers to the consecration of the god Amṛitēśvara at Amṛitasamudra in Kaggiya-vṛitti and registers the grant of an *agrahāra* Huṇiseyakaṭṭa belonging to Āsandi-nāḍ for the worship and offerings, for certain festivals in the temple, for the livelihood of the priests, feeding of the Brāhmaṇas and also for the repairs and renovations of the temple by Amṛitēśvara-daṇḍanāyaka, which he had received from the king in the presence of god Vajrēśvara. Further, it registers a grant of certain lands by several individuals (named) to the same god.

The record, composed by Jannayya who is described as *sukavijanamitra, uddaṇḍakavi-bhāḷanētra,* was written by Nākaṇṇa, disciple of Mahadēvaṇṇa of Lokkiguṇḍi. It was engraved by Mallōja, sculptor, who is described as *biruda-kaṇḍaraṇekāra.*

It also records the *vṛittis* granted to Brāhmaṇas of *brahmapuri.*

1 ಜಯತಿ ಶಿವಶಾಸನಂ ಭೂಚರಖೇಚರದಿವಿಜರಾಜಮಕುಟಾರೂಢಂ ಧರ್ಮ್ಮಪ್ರಸಾದವರ್ದ್ಧಿತಲಕ್ಷ್ಮೀನಿತ್ಯ ಪ್ರದಾಯಕಂ ಜಗತಿ ||[1]

2 ಶ್ರೀಮತ್ಸೇನಾಧಿನಾಥೋತ್ತಮನನಮಿತನಂ ರಕ್ಷಿಸುತ್ತಿರ್ಕ್ಕೆ ತಾರಾಸ್ತೋಮಂ ನಿಲ್ವಂನೆಗಂ ನಾರದಮಸೃಣ ರಸವ್ಯಕ್ತಗೀತಾಮೃತಂ

3 ಗೌರೀಮುಗ್ಧಸ್ನಿಗ್ಧಮನ್ದಸ್ಮಿತಮಧುರಕಟಾಕ್ಷಾಮೃತಂ ದೇವರಾಜಪ್ರೇಮಸ್ತುತ್ಯಾದಿ ಸದ್ವಾಗಮೃತನಮೃತನಾಥಂ ತ್ರಿಳೋಕೈಕನಾಥಂ ||[2] ಸಿರಿಯ

4 ಲರ್ಗಣ್ಣ ಬೆಳ್ವೆಳಗಿನಿಂಪುದಿದಂಬುಜನಾಭನೀಶನಂತಿರೆ ಗಿರಿಜಾಕಟಾಕ್ಷರುಚಿಗಳ್ಪುದಿದೀಶನುಮಬ್ಜನಾಭನಂತಿರೆ ಜನಸಂಸ್ತವಂ ತಮಗೆ ಪಲ್ಲಟಮಪ್ಪಿನಮೊಪ್ಪಿತೋಱುವಾ ಹರಿಹರದೇವರೊಲ್ದಮಿತನಂ ಪರಿರಕ್ಷಿ

5 ಸುತಿರ್ಕ್ಕೆ ಸಂತತಂ ||[3] ವಿನತಕ್ಷತ್ರಿಯಪುತ್ರಸಂತತಿನವೀನೋತ್ತಂಸಮಂ ರಾಜಶಾಸನಮಂ ಮಸ್ತಕಪೀಠದೊಳ್ತಳೆಯೆ ನಾಲ್ಕುಂ ದಿಕ್ಕಿನೊಳ್ ಸೀಮಶಾಸನಮಪ್ಪಂತುದಯಾಚಳಾದಿಕಂಧರಂ

1 ಆರ್ಯಾಗೀತಿ; ಅಶುದ್ಧ
2 ಸ್ರಗ್ಧರೆ
3 ಚಂಪಕಮಾಲೆ

6 ಬಲ್ಲಾಳದೇವಂಗೆ ಮೇದಿನಿಯಂ ಸಾಧಿಸಿಕೊಟ್ಟು ಶೌರ್ಯ್ಯಮಮಿತಂಗಕ್ಕುಂ ಪೆಱಂಗಕ್ಕುಮೆ ||[1] ಗದ್ಯ || ಆ ನಿಶ್ಶಂಕಪ್ರತಾಪಚಕ್ರವರ್ತಿಯನ್ವಯಾವತಾರಮದೆಂತೆಂದೊಡಮೃತದಮೃತಕರನಕ

7 ಮಳೆಯ ಕೌಸ್ತುಭದ ಪಾರಿಜಾತದೈರಾವತದುಚ್ಚೈಶ್ರವದಚ್ಚರಸಿಯರ ಸಂಭೂತಿಯಿಂ ಖ್ಯಾತಿಗಾಕರಮಾದ ಪೀಯೂಷ ರತ್ನಾಕರದ ನಡುವೆ || ವೃ || ಸಿರಿಯಂ ಕೌಸ್ತುಭರತ್ನಮಂ ಹರಿಯ

8 ನಂತಾಶಂಖಿಮಂ ಚಕ್ರಮಂ ಭರದಿಂ ಪೇಟೆ ಬಹಿತ್ರದಂತಿರೆಸೆದಿರ್ದ್ದಂ ಶೇಷನಾ ಕ್ಷೀರಸಾಗರದೊಳ್ ದೇವನ ನಾಭಿಪದ್ಮದ ಮೃಣಾಳಂ ಕೂವಕಂಬಂಬೊಲಚ್ಚರಿಯಾಗಿರ್ದ್ದುದು ಕರ್ಣ್ಣಧಾರನವೊಲಿರ್ದ್ದಂ ಪುಟ್ಟಿ ಪದ್ಮೋದ್ಭವಂ ||[2] ಪರಮಬ್ರ

9 ಹ್ಮನ ಚಿತ್ತದೊಳ್ ಮುನಿಗಳೇೞ್ವಪ್ಪುರ್ವ್ವಟ್ಟಿದರ್ತ್ತನ್ಮುನೀಶ್ವರರೊಳ್ ಪೆಂಪೆಸೆವ ತ್ರಿಪದ್ಮದಲರೊಳ್ ಪದ್ಮೋದರಂ ಪದ್ಮವಿಷ್ಟರನಂ ಪುಟ್ಟಿಸಿತರ್ಕ್ಕೆ ಮಚ್ಚರಿಪವೋಲ್ ಕಣ್ಣೆಯ್ದಲಿಂದಂ ಸುಧಾಕರನಂ ಪುಟ್ಟಿಸಿದಂ

10 ಪವಿತ್ರಮುದಯಸ್ಥಾನಂ ಮಹಾಭಾಗದೊಳ್ ||[2] ಯಿಂದುವಿಳೋಚನೋತ್ಸವದಿನಿಂದುಮನೋಜ ಸಹಾಯ ವೃತ್ತಿಯಿಂದಿಂದುಕಳಾಳಿಯಿಂ ಮೆಱವನಂದು ನೃಸಿಂಹನೃಪಾಳಸೂನು

11 ತಾನಿಂದುವಿಳೋಚನೋತ್ಸವದಿನಿಂದು ಮನೋಜಸಹಾಯವೃತ್ತಿಯಿಂದಿಂದು ಕಳಾಳಿಯೆಂಮೆಱವುತಿರ್ದ್ದಪ ನಿಂದುಕುಳಪ್ರದೀಪಕಂ ||[3] ಕ || ಆ ರಾಜನ ಪುತ್ರಂ ಮದವಾರಣವಿದ್ಯಾವಿಳಾ

12 ಸದಿಂ ಬುಧನೆಂಬಂ ಧಾರಿಣಿಯೊಳ್ ನೆಗೞ್ದಂ ದ್ವಿರದಾರೋಹಕ ಚಕ್ರವರ್ತಿ ಬಲ್ಲಾಳನವೊಲ್ || ಆತನ ಮಗಂ ಪುರೂರವನಾತಂಗಂ ದೇವಲೋಕದೂರ್ವ್ವಸಿಗಂ ವಿಖ್ಯಾತನುದಯಿಸಿದನುಪಮಾತೀತಬ

13 ಳಕ್ಕಾಯುವಾಯುವೆಂಬನೃಪೇಂದ್ರಂ ||[4] ಅವನ ಮಗಂ ನಹುಷಂ ಮತ್ತವನ ತನೂಜಂ ಯಯಾತಿ ತದ್ವಿದರುರ್ವ್ವೀಧವರಾಗೆ ಬಳಿಕೆ ಪಲರುದ್ಭವಿಸಿದರಾ ಸೋಮವಂಶದೊಳ್ ಯದುವೆಂಬಂ ||[4]

14 ಆ ಯದುದಗ್ರತೆಮಿಗೆ ನೆಗೞ್ದಾ ಯದುವಿಂ ಯಾದವಾಭಿಧಾನ ಸೋಮಾಮ್ನಾಯಕ್ಕೆ ರೂಢಿವಡೆದತ್ತಾ ಯಾದವರೊಳಗೆ ನೆಗೞ್ದನಸಹಾಯಬಳಂ ||[5] ವೃ || ಸಳನೆಂಬಂ ಶಶಕ ಪ್ರಸಿದ್ಧ

15 ಪುರದೊಳ್ ವಾಸನ್ತಿಕಾದೇವಿಯಂ ತಳೆದಾರಾಧಿಸುವಾಗಳುತ್ತರಳನೇತ್ರಂ ಘೋರವಕ್ತ್ರಂ ವಿಶೃಂಖಳಗಾತ್ರಂ ಪುಲಿ ಪಾಯೆ ಕಂಡು ಮುನಿನಾಥಂ ಕುಂಚಮಂ ಕೊಟ್ಟು ಪೊಯ್ಸಳ ಎಂದಂ ಬಱಕಾ

16 ಯ್ತು ಪೊಯ್ಸಳವೆಸರ್ ತಾಂ ಯಾದವೋರ್ವ್ವೀಶರೊಳು ||[2] ಕ || ಅಲಗಿಂ ಸಿಂಗಮನಿಱಿದನ ಕಲಿತನಮಂ ನಗುವತೆಱದೆ ಮೆಱವುದು ಸೆಳೆಯಿಂ ಪುಲಿವೊಯ್ದ ಕುಱುಪು ಪೊಯ್ಸಳ ಕುಲ

17 ತಿಲಕನ ಮತ್ತಗಜದ ಟಕೆಯದೊಳೀಗಳ್ || ಮತ್ತೇಭ || ಅನಿತೊಂದುಂನತಿವೆತ್ತ ಪೊಯ್ಸಳಕುಳಂ ಪೂರ್ವ್ವಾದ್ರಿಯಂ ಪೋಲ್ವಿನಂ ವಿನಯಾದಿತ್ಯನೃಪಾಳನುದ್ಭವಿಸಿದಂ ಭೂಲೋಕದಾದಿತ್ಯನೆಂಬಿನೆಗಂ ಕಟ್ಟಿಲೆ

18 ಕೂಡೆ ಕಣ್ಗೆ ಕವಿದತ್ತಾವನೀಶರ್ಗ್ಗೆ ತೊಟ್ಟನೆ ಕಯ್ಕೊಂಡುದಲರ್ಕ್ಕೆಯುಂ ಕುವಳೆಯಂ ಮತ್ತಾತನಿಂ ಕೌತುಕಂ || ಕೆಳೆನಡೆಯಿಂ ಕಳಹಂಸೆಗೆ ಕೆಳೆನುಡಿಯಿಂ ಕೋಕಿಳಕ್ಕೆ ಸೋಗೆಗೆ ಮುಡಿಯಿಂ ಕೆ

19 ಳೆ ಕೆಳೆಯಬ್ಬರಸಿಯೆ ತತ್ಕುಳವಧುವಾದಳ್ ತದೀಯಸುತನೆಱೆಯಂಗಂ ||[4] ವೃ || ನೆಱವಿಂದಂ ವೈರಿಬೃಂದಂ ಕವಿವುದುಮನಿತೊಂದಂ ರಣೋತ್ಸಾಹದಿಂದಂ ತಱಿದೊಟ್ಟಿಲ್ ಸೀಳ್ದು ಮೆಟ್ಟಿಲ್ ಯಮ

20 ಪುರಿಗಿರದಟ್ಟಿಲ್ ಚಲಂ ಮುಟ್ಟೆಕಟ್ಟಿಲ್ ನೆಱೆದೆತ್ತಂ ಕಯ್ದುವೊತ್ತಂ ವಸುಧೆಯೊಳಗೆ ಪುತ್ತಂ ಜಸಂಬೆತ್ತನಾಸಂದೆಱೆಯಂಗಂ ವೀರಗಂಗಂ ರಿಪುತಿಮಿರಪತಂಗಂ ಜಯಶ್ರೀ ಭುಜಂಗಂ ||[6] ಚಲದೆ

21 ಱೆಯಂಗೆ ಚಾಗದೆಱೆಯಂಗೆ ಜಸಕ್ಕೆಱೆಯಂಗೆ ಮಿಕ್ಕದೋರ್ವ್ವಲದೆಱೆಯಂಗೆ ವೀರದೆಱೆಯಂಗೆ ಕುಲೋನ್ನತಿ ತನ್ನೊಳೊಪ್ಪುವೇಚಲೆಯಱೆಯಂಗೆ ಕೀರ್ತ್ತಿಯೆಱೆಯಂಗೆಱೆಯಂಗನ್ನ

1 ಮತ್ತೇಭವಿಕ್ರೀಡಿತ; ಅಶುದ್ಧ
2 ಮತ್ತೇಭವಿಕ್ರೀಡಿತ
3 ಉತ್ಪಲಮಾಲೆ
4 ಕಂದ
5 ಕಂದ; ಅಶುದ್ಧ
6 ಮಹಾಸ್ರಗ್ಧರೆ

22 ಪಂಗೆ ನಂದನಂ ಜಲಧಿಪರೀತ ಭೂವಳಯವರ್ದ್ಧನನಂಕದ ವಿಷ್ಣುವರ್ದ್ಧನಂ ||[1] ಕ || ಬಲ್ಲಾಳನ ತಂಮಂಗೇಂ ಬಲ್ಲಾಳ್ತನ
ಮೆರವೆ ತೇಜಮೆಂಬುದು ಪೆಱರ್ಗಿಂನಿಲ್ಲುದಯಾದಿತ್ಯಮಹೀವಲ್ಲಭನಣ್ಣಂಗೆ ವಿ

23 ಷ್ಣುಗಲ್ಲದೆ ಜಗದೊಳ್ || ವ || ಆ ಪರಮಮಾಹೇಶ್ವರ ಸಮಯಾಧಾರನು(ಂ)ಮಪರರುದ್ರಾವತಾರನು(ಂ)
ಮೇಕಾಂಗವೀರನು(ಂ) ಮೆನಿಸಿ ನೆಗೞ್ದ ಬಲ್ಲಾಳದೇವನ ಬಲ್ಲಾಳ್ತನಮಂ ಪೇೞ್ವೊಡೆ || ವೃ || ಕಾಳೆ

24 ಗದೊಳ್ತಡಂಗಡಿದು ಮುಂದಣಥಟ್ಟನವುಂಕಿಪಾಯ್ದೊಡಾ ಮಾಳವ ಚಕ್ರವರ್ತ್ತಿ ಜಗದೇವನೆ ತಂನ ಮದಾಂಧಸಿಂಧುರಂ
ಕೀಳಿಡೆ ಪೂತು ರಾವುತನೆ ರಾವುತನಲ್ಲೆ ನಿದಿರ್ಚ್ಚು ವೀರಬಲ್ಲಾಳನೆನೆಂದುಮೆ

25 ಟ್ಟಿ ತಿವಿದಾಳ್ತನವಚ್ಚರಿಯಾಯ್ತು ಧಾತ್ರಿಯೊಳ್ ||[2] ವೃ || ಬಿಟ್ಟಿಗನಾಹವಾಂಗಣಕೆ ಜೆಟ್ಟಿಗನೆತ್ತಿದೊಡತ್ತ
ಕಂಚಿಬೆಂಗೊಟ್ಟುದು ಕೊಂಗು ಕೂಡೆನೆಲೆವಿಟ್ಟುದು ಮಿಕ್ಕವಿರಾಟಕೋಟೆ ಕೂಗಿಟ್ಟುದು

26 ಕೋಯತುರ್ಕ್ಕದೞ ಕೆಟ್ಟುದು ರೂಢಿಯ ಚಕ್ರಗೊಟ್ಟಮಿಂಬಿಟ್ಟುದು ಕಯ್ದುವಿಕ್ಕಿ ಕಡಲೊಳ್ಪಡಲಿಟ್ಟುದು
ಸಪ್ತಕೊಂಕಣಂ ||[1] ಮುನಿದಾಂತೊಡ್ಡಿದ ಚಾತುರಂಗಬಳಮಂ ಕಣ್ಮುಟ್ಟನೊಳ್ನೋಡಿ ತೊ

27 ಟ್ಟನೆ ತಾಂ ಕಂಡೊಡೆ ಹುಃಬಬಾಪ್ಪು ಬೞಕೆಂ ಬಲ್ಮೂಳೆಯಂ ನೆರ್ಕ್ಕನೆರ್ಕ್ಕನೆ ಬೇರ್ಕ್ಕೆಯ್ದುಱೆ ಸಜ್ಜಿಸಜ್ಜನಳವಿಂತೆಂದೆತ್ತಿ
ಬೊಟ್ಟಟ್ಟು ಮಾಣ್ಬನೆ ಮಾಣಂ ವಿಳಯಾನ್ತಕಂಗೆ ಕುಡುಗಂ ಕೈ

28 ಘುಟ್ಟಿಗಂ ಬಿಟ್ಟಿಗಂ ||[3] ಧುರದೊಳು ವಿಷ್ಣುನೃಪಂಗೆ ದಿಗ್ವಿಜಯದುದ್ಯೋಗಂಬರಂ ನಿಲ್ವ
ಭೂವರರಾರಾನ್ನೃಪರಾಮನೆತ್ತುವುದು ಬೇಱೊಂದರ್ಕ್ಕದೇಕೇನ್ ತುಳಾಪುರುಷಕ್ಕೆಂದು ಹಿರಣ್ಯಗರ್ಭಮಿರಲೆಂ

29 ದುತ್ತುಂಗದೇವಾಲಯೋತ್ಕರಮಂ ಮಾಡಿಸಲೆಂದು ಸಂದ ಪರರಾಷ್ಟ್ರಂಗಳ್ಗೆ ತಾನೆತ್ತುವಂ ||[3] ಶತಮಖನಳ್ಕೆಮಾಡುವ
ಮಖಂಗಳ ಮೇರುಗಳೆಂದು ತಾರಕ ಪ್ರತತಿಗಳಾರಯಲ್ಪಡೆವದೇವಕು

30 ಳಂಗಳವಾರ್ಧಿಗೆತ್ತಹರ್ಪ್ಪತಿ ಪೊಲಗೆಟ್ಟು ನಿಟ್ಟಿಪ ತಟಾಕಚಯಂಗಳ ಪೆರ್ಮೆಯಿಂದಮೂರ್ಜ್ಜಿತಮೆನಿಪಗ್ರಹಾರಮವು
ವಿಷ್ಣುನೃಪಾಳಕನಿತ್ತದತ್ತಿಗಳ್ ||[1] ಕ || ದೇವಿವೆಸರೆಸೆವಲ

31 ಕುಮಾದೇವಿಗಮಾ ವಿಷ್ಣುವರ್ದ್ಧನಂಗಂ ತನಯಂ ಶ್ರೀ ವಿಜಯನಾರಸಿಂಹಮಹೀವಲ್ಲಭನವನ ವೀರಮುಪಮಾತೀತಂ
|| ವೃ || ಕೆದಱಿತ್ತಳ್ಕಿತ್ತು ಬಳ್ಕಿತ್ತಗಿದುದಸ್ಮದ್ಬಳಂ ನಿಲ್ಲದಿಂನೀಪದದೊ

32 ಳ್ಕೈಕೊಳ್ವೆನೆಂದೊಡ್ಡಿದಿರೊಳೊದವಿ ನಿಸ್ಸಾಣಮಂ ತಾನೆ ಸೂಳೈಸಿದನತ್ತಲ್ಸ್ಯೆಪುಮಾಣ್ಮಾಮ್ಮಲೆದೊಡೆ ತಲೆಗೊಂಡೆತ್ತಿದಂ
ತುಂಗಭದ್ರಾನದಿಯಂ ಪಾಂಡ್ಯಾವನೀಭೃದ್ಬಳದ ಪೆಣಗಳಿಂ ಕ

33 ಟ್ಟಿದಂ ನಾರಸಿಂಹಂ ||[4] ನರಸಿಂಹಂ ನರಸಿಂಹನಂತೆ ಮುನಿಸಿಂ ಮಾಱಾಂತ ವೀರಾರಿ ಭೂಪರನ್ಕಣ್ಮುಟ್ಟನೊಳಿಂತುಕಂಡೊಡೆ
ಬೞಕ್ಕಂ ಮಂಮ ಪೋೞ್ದಿಕ್ಕಿ ಪೇರುರಮಂ ದೊಕ್ಕೆನೆ ಕುತ್ತಿ ಚಕ್ಕನೆ

34 ಭುಜದ್ವಂದ್ವಂಗಳಿಂದೆತ್ತಿ ಬಲ್ಗುರುಳಂ ಕೋದೆಳಲಿಕ್ಕಿ ಬೀರಸಿರಿಗೆತ್ತಂ ತೋರಣಂಗಟ್ಟನೆ ||[3] ನಗೆ ಮೊಗವೆಂಬ
ಚಂದ್ರಮನನಪ್ಪಿದ ಕೈರವಲಕ್ಷ್ಮಿಯಂಬಿನಂ ಸೊಗಯಿಪ ಚಲ್ಲಗಣ್ ಚಿಬುಕಮಂ

35 ಪರಿಚುಂಬಿಸುವಂತೆ ಬಿಂಕದಿಂ ನೆಗದ ಘನಸ್ತನಂ ಸುೞಗುರುಳ್ನಳಿತೋಳ್ಕಳ ಕೋಕಿಳಸ್ವನಂ ಬಗೆಯುಗೆ ಕೂಡೆ
ಸೋಲಿಸುವಳೇಚಲದೇವಿ ನೃಸಿಂಹದೇವನಂ ||[1] ಕ || ಪಟ್ಟದ ಮಹದೇವಿಗಮಾಕ

36 ಟ್ಟಣಕದ ಕಲಿಯೆನಿಪ್ಪ ನರಸಿಂಹಂಗಂ ಪುಟ್ಟಿದನಾಹವ ಜಯದೊಡವುಟ್ಟುವಿನಂ ರಾಯಮನ್ಮಥಂ ಬಲ್ಲಾಳಂ ||[5]
ಧರೆಯಂ ತಾಱ್ದಿದ ಶೇಷನುಂ ಕಮಠನುಂ ದಿಗ್ದಂತಿಸನ್ತಾನಮುಂ ನೆರೆದೇಕಾಂಗ

37 ದಿನಾಂತವೋಲ್ ಭುಜಗರಾಜದ್ರಾಘಿಮಂ ಕೂರ್ಮಖರ್ಪ್ಪರಕೂಟೋಚ್ಚಳಿತಾಂಶಮಾದಿಗಿಭಹಸ್ತ
ಸ್ಥೂಳವಾಂತತ್ತಿಳಾಭರಮಂ ರಕ್ಷಣದಕ್ಷದಕ್ಷಿಣಭುಜಂ ಬಲ್ಲಾಳಭೂಪಾಳನಾ ||[3] ಮುನಿ

---

1 ಚಂಪಕಮಾಲೆ

2 ಉತ್ಪಲಮಾಲೆ

3 ಮತ್ತೇಭವಿಕ್ರೀಡಿತ

4 ಮಹಾಸ್ರಗ್ಧರೆ

5 ಕಂದ

38 ಸಿಂದಂ ತೋಳಬಾಳಂ ಜಡಿವನಡೆಯೆ ಸೂಳಯ್ಸುಸೂಳಯ್ಸಿ ನೂಂಕೆಂಬನಿತರ್ಕ್ಕಾಂಪಂನರಾರೋ ಮದಂ ಹುಸಿಹುಸಿ
ಮಾಣೆತ್ತಮುಂದಾಯ್ತು ಸಿಂಹಾಸನಮತ್ತಲ್ಬಾರ್ದ್ದಿರ್ಮು

39 ಟ್ಟಟ್ಟಿದ ಪದವಳರ್ಗ್ಗಿಟ್ಟಾಳ್ಗೆ ಕೊಟ್ಟೋಲಿಗೀ ಮೇದಿನಿ ಸಾಧ್ಯಂ ಬಾಪ್ಪಿವೆಂರಾಯರೊಳತಿಬಳನೋ ವೀರಬಲ್ಲಾಳದೇವಂ ||[1]
ಕದನಪ್ರೋಚ್ಚಂಡಭೂಮಂಡಳಪತಿಗಳ ಬೇರ್ವ್ವೇರ್ಗ್ಗೆ ಬೆಂನೀರಹೊಯ್ವಾದುದು

40 ಕಾಯ್ಪಿಂ ಬಾಳ ನಿಸ್ಸಂಗರಸಮಯದೊಳಿಂತಂತವಷ್ಟಂಭದಿಂ ತೂಗಿದ ಬಾಳ್ಬಾಳ್ವತ್ತು ಬಾಟ್ಸುಗ್ಗಡದ ಬಿರುದರಂ ತೂಗಿ
ತುತ್ತಿಟ್ಟುದೆಂ ತಾಳ್ದಿದನೋ ವಿಕ್ರಾನ್ತಮಂ ಯಾದವಕುಳ

41 ತಿಳಕಂ ವೀರಬಲ್ಲಾಳದೇವಂ ||[1] ಶುಂಡಾಳಂ ಮದವುಳ್ಳಚೋಳನಳವಿಂದಾ ಸಿಂಹಳಂ ಸಿಂಹವುದ್ದಂಡಂ ಸೇವುಣನಾವಗಂ
ಸರಭವಿನ್ತೀ ಮೂವರುಂ ರಾಯರಂ ತುಂಡಂ ಮುಂ

42 ಡದೊಳಾಳೆ ಪೊಯ್ಯದಿರನಾರೇನ್ ಪೇಳ್ವಪೆಂ ರಾಯಭೇರುಂಡಂ ರಾಯರ ಚಕ್ರವರ್ತ್ತಿ ರಣದೊಳ್ಬಲ್ಲಾಳಭೂಪಾಳಕಂ ||[2]
ಉರಿಯಂತಂತಟ್ಟಿಯಿಂ ಸುಟ್ಟುರಿಸಿ ನೆಗೆಯೆ ನೆತ್ತರ್ಮಹೀ

43 ಚಕ್ರದೊಳ್ಕಗ್ಗರಿಕೆಂತಂತೆತ್ತಲುಂ ಪಂದಲೆ ಪಡೆಲಿಡೆ ಧಂಧಂಧಗಿಲ್ಬುಬ್ಭುರ್ಗಿಲ್ ಘಂಘುರಿಲೆಂದೇನಳ್ಬಿತೋ ಸೇವುಣ
ಬಳವನಮಂ ವೀರಬಲ್ಲಾಳಕೋಪೋದ್ದುರದಾವೋಗ್ರಾನಳಂ ಶಾತ್ರವನೃಪತಿ

44 ಮೃಗಬ್ರಾತಮಳ್ಕಾಡುವಂನಂ ||[1] ಮುಳಿದು ಕಡಂಗಿ ಸೋರ್ವ ಭಟಕೋಟಿಗೆ ವಾರ್ದ್ಧಿತರಂಗದನ್ತೆ ಸಂಗಳಿಸುವ
ವಾಜಿರಾಜಿಗೆ ದಿಶಾಪ್ರಸರಂ ಕವಿವಂತೆ ನೂಂಕಲೌವ್ವಳಿಸುವ ಗಂಧಸಿ

45 ನ್ಧುರ ಘಟಾಳಿಗೆ ದಕ್ಷಿಣಚಕ್ರವರ್ತ್ತಿ ಕಂಡಳವಿಯೊಳಾರ್ದ್ದು ಬೊಬ್ಬಿಱಿದು ನೂಂಕಿದನಗ್ಗದ ಪಟ್ಟದಾನೆಯಂ ||[3]
ಒಂದೆರಡಟ್ಟೆ ಕೋಡಮೊನೆಯೊಳ್ತಿರುಗುತ್ತಿರೆ ಬಲ್ಪೆಣಂ ಮರಳ್ದೊಂದೆರಡಗ್ರ

46 ಹಸ್ತದೊಳಗುರ್ವ್ವಿಸೆ ವೋದಿದ ತಾಳವಟ್ಟದೊಳ್ಬಂದ ಪೆಣಂ ಪೆಡಂಮಗುಳೆ ಕಣ್ಗೆಸೆಗುಂ ಜವನೇಱದೊಂದು
ಜಕ್ಕಂದೊಳದಂತೆ ಸೇವುಣಘುರಟ್ಟನ ವೀರವಿಳಾಸಸಿಂಧುರಂ ||[4] ಅರಸುಗಳೊಂದೆರಟ್ ಬ

47 ಯಲೊಳೊಂದೆರಡಳ್ಕಿದ ಕೋಟೆಯೊಳ್ನೆರಂಬೆರಸಿಱಿದಾಳ್ತನಕ್ಕಿನಿತನಿಕ್ಕರದಲ್ತಸಹಾಯಶೂರನಾಂತರನಿಱಿ
ದಟ್ಟೆಯಾಡಿಸಿದ ತೋಟ್ಟಲದಿಂ ನಡೆಗೋಟೆಗೊಂಡ ಸಂಗರವೆಣಿಸಲ್ಕಳುಂಬ ಮದನಾ

48 ವುದನಾವುದನೇನ ಬಣ್ಣಿಪೆಂ ||[3] ಕ || ಆರೆಣೆಯಂಬೆನಳುಂಬದ ವೀರಮನೀ ಜಗಮನಾವಗಂ ಸುತ್ತಿದ ಮುಂನೀರೆಂಬುದಂ
ಬಿರುದಿನ ಬೆಳ್ಳಾರೆನಿಸಿದುದದಟ ರಾಯಕೋಳಾಹಳನಂ || ಗದ್ಯ ||

49 ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ದ್ವಾರಾವತೀ
ಪುರವರಾಧೀಶ್ವರನುಂ ಯಾದವಕುಳಾಂಬರದ್ಯುಮಣಿ ಸಮ್ಯಕ್ತ್ವಚೂಡಾ

50 ಮಣಿ ಮಲೆರಾಜರಾಜನತುಳತರತೇಜಂ ಮಲಪರೊಳ್ಗಂಡಂ ಕದನಪ್ರಚಂಡನಸಹಾಯಶೂರನೇಕಾಂಗವೀರಂ
ಶನಿವಾರಸಿದ್ಧಿ ಶರಣಾಗತವಾರ್ದ್ಧಿ ಗಿರಿದುರ್ಗ್ಗಮಲ್ಲಂ ರಾಯಸಿರಸೆ

51 ಲ್ಲ ಚಲದಂಕರಾಮಂ ಬಿರುದಂಕಭೀಮಂ ನಿಶ್ಶಂಕಪ್ರತಾಪಚಕ್ರವರ್ತ್ತಿ ಹೊಯ್ಸಳ ಶ್ರೀ ವೀರಬಲ್ಲಾಳದೇವರು
ದುಷ್ಟನಿಗ್ರಹ ಶಿಷ್ಟಪ್ರತಿಪಾಳನಾರ್ತ್ಥಮುತ್ತರದಿಗ್ವಿಜಯಪ್ರಸಂಗದಿಂ

52 ಬಂದು ವಿಜಯಸಮುದ್ರಾಪರನಾಮಧೇಯಮಪ್ಪ ಹಳ್ಳವೂರ ನೆಲೆವೀಡಿನೊಳು ಸುಕಸಂಕಥಾವಿನೋದದಿಂ
ಪೃಥ್ವೀರಾಜ್ಯಂ ಗೆಯುತ್ತಮಿರೆ || ಕ || ತತ್ಪದನಖರಮಯೂ

53 ಖಲಸತ್ಪುಷ್ಪಿತರಾಗರುಚಿರಪಲ್ಲವಿತದಯೋದ್ಯತ್ಪೂರ್ಣ್ನಫಳಿತಬುಧಪರಿಷತ್ಪೂಜ್ಯ ನವೀನಪಾರಿಜಾತಂ ಖ್ಯಾತಂ ||
ಸ್ವಸ್ತಿ ಶ್ರೀ ಮನಗಣ್ಯಪುಣ್ಯನೃಪಗೇಹಂ ಗಂಡಭೇರುಂಡ ತಂ

---

1 ಮಹಾಸ್ರಗ್ಧರೆ
2 ಶಾರ್ದೂಲವಿಕ್ರೀಡಿತ
3 ಚಂಪಕಮಾಲೆ
4 ಉತ್ಪಲಮಾಲೆ

54 ತ್ರಸ್ತೋಮಾಗ್ರಣಿ ಯಾದವೇಶ್ವರಸಭಾರತ್ನಪ್ರದೀಪಂ ಜಗತ್ಪ್ರಸ್ತುತ್ಯಾಕೃತಿ ಮಂತ್ರಿಮಂಡಳಿಕದಂಡಾಧೀಶ ತತ್ತನ್ಮಹಾ
ನಿಸ್ತಾರೈಕ ಶರಣ್ಯರೂಪನಮಿತಂ ಗಂಭೀರರತ್ನಾಕರಂ ||[1]

55 ವ || ಆ ದಂಡನಾಥಚೂಡಾಮಣಿಯನ್ವಯಾವತಾರಮೆಂತೆಂದೊಡೆ || ವೃ || ಅತಿಶಯಮಾಯ್ತು
ದಾನಗುಣಮಿಟ್ಟಳಮಾಯ್ತುಭಿಮಾನದೇಳ್ಗೆ ಸಂತತಮೆಸೆದತ್ತು ಬಂಧುಜನಸಂ

56 ಗತಿ ಪೆಂಪಳವಟ್ಟುದೂರ್ಜ್ಜಿತಾಕೃತಿ ದೊರೆವೆತ್ತುದಾಶ್ರಯಗುಣಂ ಪೆಸರ್ವೆತ್ತುದು ಸತ್ಯಮೆಂಬಿನಂ ಚತುರಜನಂ
ಚತುರ್ತ್ಥಕುಳದೀಪಕನೆಂಬುದು ಚಟ್ಟಿಸೆಟ್ಟಿಯಂ ||[2] ಕ || ಪತಿಹಿ

57 ತಗುಣದಿಂದಮರುಂಧತಿಗೆಣೆ ಸೌಭಾಗ್ಯದೇಳ್ಗೆಯಿಂದಗ್ಗದಪಾರ್ವ್ವತಿಗೆ ದೊರೆ ಚಟ್ಟಸೆಟ್ಟಿಯ ಸತಿ ಭೂಭುವನಕ್ಕೆ
ಜಕ್ಕಿಯಕ್ಕಂ ನೆಗಳ್ದಳು || ವೃ || ಪುರುಷನ ಮೇರು ಚಟ್ಟಮರಸಂಗೆ

58 ಕುಳೋಂನತಿ ಪುಟ್ಟೆ ಪುಟ್ಟಿದಂ ಹರಿಯಮಸೆಟ್ಟಿ ಲೋಕದೊಳಗಂಗಭವಂಗೆಣೆ ರೂಪಿನಿಂ ಕಳಾಪರಿಣತೆಯಿಂ
ಚತುಮ್ಮುಖನೊಳೋರಗೆ ವೈಭವದೇಳ್ಗೆಯಿಂ ಪುರಂದರನ ಸಮಾ

59 ನವರ್ತ್ಥದೊದವಿಂ ಧನದಂಗನುಸಾರಿಯೆಂಬಿನಂ ||[2] ಕ || ಹರಿಯಮಸೆಟ್ಟಿಯ ಕುಳವಧು ಚರಿತ್ರವತಿ ಪುತ್ರವತಿ
ಕಳಾವತಿ ಲೋಕೋತ್ತರಮಾನವತಿ ಸರಸ್ವತಿ ಸಿರಿಸರಿಯೆಂಬನ್ನು ಸು

60 ಗ್ಗಿಯಕ್ಕಂ ನೆಗಟ್ದಳು || ರಸಮಿರ್ಪುದು ಕರತಳದೊಳು ರಸಾಯನಂ ನುಡಿಯೊಳಿರ್ಪುದೀಕ್ಷಣದೊಳ್
ಸೊಂಪೆಸೆವಮೃತಮಿರ್ಪುದೆನೆ ಸಂತೋಸದಿಂ ಸುಗ್ಗವ್ವೆ ತಣಿಪುವಳ್ಪರಿಜನಮಂ ||[3]

61 ವೃ || ಹರಿಯಮಸೆಟ್ಟಿಗಂ ನೆಗಟ್ದ ಸುಗ್ಗಲೆಗಂ ಸುತನಾದನಲ್ತೆ ಬೇಟ್ಪರನಿಧಿ ಬಂಧುಸಂಕುಳದಭೀಷ್ಟಫಳಂ
ಪರಿವಾರದುತ್ಸವಂ ಪರಹಿತದಾಶ್ರಯಂ ಪರಧರ್ಮ್ಮದ

62 ಮೆಯ್ಸಿರಿ ಸತ್ಯದುತ್ತರೋತ್ತರದಶೆ ಸತ್ಯದಾಯತನಮಪ್ಪಮೃತೇಶ್ವರದಂಡನಾಯಕಂ ||[4] ಜಡರಂ ಜಾತಿವಿಹೀನರಂ
ವಿಕಳರಂ ನಾಣೊಕ್ಕರಂ ಮಿಕ್ಕರಂ ಪಡೆದಾ ದೋಷನಿವಾರಣ

63 ಕ್ಕಮೃತದಂಡಾಧೀಶನಂ ಪುಣ್ಯದಿಂ ಪಡೆದಂ ಪದ್ಮಜನಲ್ಲದಂದು ನೆಗಟ್ದೀ ಗಾಂಭೀರ್ಯ್ಯಮೀಧೈರ್ಯ್ಯ
ಮಿಕ್ಕುಡುವಾರ್ಪ್ಪೀ ಕಡುನೇರ್ಪ್ಪು ಭೂಭುವನದೊಳ್ ಪೇಳಂನ್ಯ ಸಾಮಾನ್ಯಮೇ ||[5] ಅಮಿತಂ ದಂಡೇಶರತ್ನಂ

64 ಪ್ರಭುದಿಟಕೆ ಕೆಲದ್ದೂರರದಿಂ ಪರ್ವ್ವತಂ ರಮ್ಯಮೆನಿರ್ಪ್ಪಂತಿರ್ಪ್ಪರಾರಯ್ದೊಳಪುಗೆ ಪುರುಳಿಲ್ಲಂ ನರೋಪಾದಿಯೇ
ಯುದ್ಧಮುಖಂ ತಳ್ತಲ್ಲಿ ಕೂರಾಳಧನರಿಲಮೆಗಂದಲ್ಲಿ ಮಾದಾನಿನಪ್ಪೋ

65 ದ್ಯಮರೆಂತಂದಲ್ಲಿನಂಟಂ ವಿಷಮುಸಮಯಮಾದಲ್ಲಿ ತಾನೇಕವಾಕ್ಯಂ ||[6] ಸುಟಿಯಲ್ಕಾಗದೆ ಮುಂನೆ
ಸೂರ್ಯ್ಯನುದಯಂಗೆಯ್ವಂನಮನ್ನಿನ್ನುಮಿಂಬುಳುಗಳ್ ಮಿಕ್ಕಿನ ದಂಡನಾಥರರೆಬಕ್ಕಾ

66 ರ್ಯ್ಯಕ್ಕೆ ಖಳ್ಕಕ್ಕದೇಂ ಗಟಿಪಲ್ ಸಲ್ಲದೆ ಸಲ್ವದಿಂತಮಿತದಂಡಾಧೀಶನಂ ಕಾಣ್ಬುದುಂ ಬಟಿಕಾಮ್ಮಂತ್ರಿ
ಗಳಾಸ್ಥಮಗ್ರರೆಣಿಸೂ ಬಲ್ಲಾಳನಾಸ್ಥಾನದೊಳ್ ||[5] ಸಿರಿಯುಂಟೇ ಪೆಱರ್ಗಿತ್ತು ತೋಱುವು

67 ದು ಬಲ್ಪುಂಟೇ ಮನಂ ಮೆಚ್ಚದಾಂತರನುಗ್ರಾಜಿಯೊಳಿಕ್ಕಿ ತೋಱುವುದು ತಾನುಂಡುಟ್ಟು ಚಿಮ್ಮೆಂದು ಕೊಂಡಿರೆ
ಮಾಣೆಂತಱಬಲ್ಪದಾವಸಿರಿಯೆಂದಾತ್ತಣ್ಮೆ ಕೂರ್ತ್ತಿತ್ತು ಮಚ್ಚರಿಪಂಗರ್ತ್ಥಿಸು

68 ವಂಗೆ ಸಲ್ವನಮಿತಂ ದಂಡೇಶದಿಕ್ಕುಂಜರಂ ||[5] ಕಡುವಲ್ಪಿಂ ಭೀಮನೆಂಬಂ ನೆಗಟ್ದನೆಳೆಯೊಳಂದಾತನಿಂದೀತನನ್ತೋ
ನುಡಿಯಿಂದಂ ರಾಮನೆಂಬಂ ನೆಗಟ್ದನೆಳೆಯೊಳಂದಾತನಿಂದೀತನಾರ್ಗ್ಗಂ ಕುಡುವಾರ್ಪ್ಪಿಂ ಕರ್ಣ್ನನೆಂಬಂ ನೆಗ

---

1 ಶಾರ್ದೂಲವಿಕ್ರೀಡಿತ

2 ಚಂಪಕಮಾಲೆ

3 ಕಂದ

4 ಚಂಪಕಮಾಲೆ; ಅಶುದ್ಧ

5 ಮತ್ತೇಭವಿಕ್ರೀಡಿತ

6 ಮಹಾಸ್ರಗ್ಧರೆ

69 ಟ್ಟಿನೆಳೆಯೊಳಂದಾತನಿಂದೀತನಿಂ ಪೇಳ್ವೆಡೆ ಮತ್ತಿಲ್ಲಾರುಮೆಂಬಂತೆಸೆದಪನಮಿತಂ ದಂಡನಾಥತ್ರಿಣೇತ್ರಂ ||[1] ಮಡಗಿದ ತಾಂಬ್ರಶಾಸನಮದೊಂದೆಡಗೆತ್ತಿದ ಕಲ್ಲಶಾಸನಂ ನುಡಿವುವೆ ಮಂತ್ರಿಮುಖ್ಯನಮಿತಂನೆ

70 ಱೆ ಕಾವುದನೀವುದಂ ತೊಡರ್ಪ್ಪಡಸಿರೆ ಕಾದ ಮಾನಸರ ಮೆಯ್ಸಿರಿಗಳ್ ನರಶಾಸನಂ ಮನಂಬಡೆವಿನಮಿತ್ತುದಂ ಪೊಗಟ್ಟಿ ಲೋಕದ ನಾಲಗೆ ತಾಂಬ್ರಶಾಸನಂ |[2] ಇದು ತಾಂ ಬಲ್ಲಾಳರಾಜಾಭ್ಯುದಯ ಜಯ

71 ವತೀ ಮಂಗಳಾಚಾರಮೋ ಮೇಣಿದು ಪೂರ್ಣಾಂಭೋನಿಧಾನ ಪ್ರಬಳಲಹರಿಕಾಪೂರ ನಿರ್ಘೋಷಮೋ ಮತ್ತಿದು ಹರ್ಷೋತ್ಕರ್ಷ ವರ್ಷಾಂಬುದ ನಿನದಮೋ ಪೇಳೆಂಬಿನಂ ಭೋಜನೋತ್ಸಾಹದಿನೊಪ್ಪು

72 ತ್ತಿಪ್ಪುರ್ದೋರಂತಮಿತನ ಮನೆಯೊಳ್ ವಿಪ್ರಕೋಟಿಪ್ರಘೋಷಂ ||[1] ಮೊಱಡಿಯ ಮೇಲೆ ಮಾದು ಫಲಮಾದವೊಲಾದುದು ತೀವಿನಿಂದ ಪೆರ್ಗ್ಗೆಱೆ ಮೊಱೆಯಲ್ಲದೆಂದಿನಿಪ ಬೆಳ್ವಲದಲ್ಲಿ ನವೀನ

73 ಸ್ಪಷ್ಟಿ ಕಣ್ಣೆಱದುದು ದಂಡನಾಯಕಶಿಖಾಮಣಿಯಪ್ಪಮಿತಂಸಮುದ್ರಮೀತೆಱನೆನಿಪಂದದಿಂ ಗದುಗಿನೊಳ್ ನೆಱೆ ಕಟ್ಟಿಸಿದಂ ತಟಾಕಮಂ ||[2] ಅಮೃತಮರೀಚಿ ನಿಟ್ಟದಕಿಲಿಟ್ಟುದು ಲೋ

74 ಕದ ಕಣ್ಣ ಪುಂಣ್ಯ ಪುಂಜಮೆ ನೆಲಸಿತ್ತು ಯಾದವನೃಪೇಂದ್ರನ ಕೀರ್ತ್ತಿಯ ಬಿತ್ತುರಾಶಿಯಂ ನಿಮಿರ್ದುದೆನಿಪ್ಪ ವೋಲಮಿತನೊಪ್ಪಿರೆ ಮಾಡಿಸಿದಂ ಬೆಡಂಗು ಪೆತ್ತಮೃತಸಮುದ್ರದೊಳ್ ಮಹಿಮೆವೆತ್ತ

75 ಮೃತೇಶ್ವರ ದಿವ್ಯಗೇಹಮಂ ||[2] ಅಮೃತಸಮುದ್ರಮದ್ರಿಮಥನಕ್ಕಗಿದಿಲ್ಲಿಗೆವಂದುದಿಂಬುವೆತ್ತ ಮರನದೀ.. ತೊಳಲಲಾಱದೆ ವಿಶ್ರಮಿಸಿತ್ತು ಧಾತ್ರಿಗಭ್ರಮನೆಲೆದಪ್ಪಿ ನೀಟ್ಟುದೆನೆ ಧರ್ಮ್ಮದನೆ

76 ಮ್ಮರ್ಗೆ ನೆಮ್ಮ್ರಮಾಯ್ತು ಸಂದಮೃತ ಸಮುದ್ರಮೆಂಬ ಪರಿಪೂರ್ಣ್ನತಟಾಕಮನೆಂತು ಬಣ್ಣಿಪೆಂ ||[2] ಒದವಿ ಪೊದಳ್ದು ನೀಟ್ಟಿ ಫಳಸಂಕುಳದಿಂದೆಸೆದಿರ್ದ್ದ ಪಾರಿಜಾತದ ತಳಿರ್ಗೊಂಬಿನನ್ತೆ ಮೆಱೆದಿರ್ಪ್ಪಮೃತೇಶ್ವ

77 ರದಂಡನಾಥನಗ್ಗದ ಸಹಜಾತರ್ಗೊಳ್ ಬುಧಜನಸ್ತುತರಲ್ಲದರಾರ್ ಸಮಸ್ತಸಂಮದಮೆನೆ ಸಲ್ವುದಾರಪೆಸ ರ್ಗೊಂಡೊಡಮಾ ಪೆಸರುತ್ತರೋತ್ತರಂ ||[2] ಕಲಿದೇವಂ ದೇವನಾತಂ ನುಡಿದನೆ ತೊದಳಿಲ್ಲಾ

78 ತನೊಲ್ದಿತ್ತನೇ ನಿಶ್ಚಲ ಮಾತಂ ಕಾದನೇ ದೇವರ ಬರವಳವಿಂದಾತನಿಂತಾನ್ತನೇ ಮಾರ್ವ್ವಲಮಿಲ್ಲಾತಂ ಚಲಂ ಮಾಡಿದನೆ ಬಿದಿಗಮಿಂಬಿಲ್ಲಮತ್ತಾತನಂ ಭೂತಳದೊಳ್ ಪೋಲ್ವಾತನಾರ್ಬಾಪ್ಪಮಿತನೆ ವಡೆ

79 ದಂತಂ ಮನಂ ಪುಂಣ್ಯಪುಂಜಂ ||[2] ಸಮನೆನಲಾತನೊಳ್ ಸಮನದಾರ್ ಚಲಮೇತನಗಲ್ಲದಿಲ್ಲ ಚಾಗಮೆ ತನಗಲ್ಲದಿಲ್ಲ ಲಲಿತಾಕೃತಿಯೇ ತನಗಲ್ಲದಿಲ್ಲ ಭೋಗಮೆ ತನಗಲ್ಲದಿಲ್ಲೆಸೆವ ಮಾನ್ತನವೇ |

80 ತನಗಲ್ಲದಿಲ್ಲ ಸತ್ಯಮೆ ತನಗಲ್ಲದಿಲ್ಲ ಪೆಱರ್ಗೇಂ ಕಲಿಗಂ ಭುವನೈಕ ಸೇವ್ಯನೋ ||[2] ಕ || ಚಲದೊಳಭಿಮಾನದೊಳ್ ಸತ್ಕುಲದೊಳ್ ಸತ್ಯದೊಳುದಾರದೊಳ್ ಪರಹಿತದೊಳ್ ಕಲಿಯಣ್ಣದೆನೆ ನೆಗಟ್ಟಿ

81 ಪ್ಪಂ ಕಲಿಯಂಣ್ಣಂ ಲೋಕದೊಳಗೆ ಕೃತಯುಗಚರಿತಂ || ಧುರದೊಳ್ ಭೀಮನ ತಂಮನೂರ್ಜ್ಜಿತ ನಯೋಪಾಯಂಗಳೊಳ್ ರೇವತೀಶ್ವರನಾಖ್ಯಾನದ ತಮ್ಮನಗ್ರಜ ಮನಸ್ಸಂತೋಷಲಕ್ಷ್ಮೀಪರಂಪರೆ

82 ಯೊಳ್ ರಾಮನ ತಂಮನೀಯಮಿತದಂಡೇಶಂಗೆ ತಂಮಂ ಕುಲಾಭರಣಂ ಶ್ರೀವದನಾಬ್ಜಭಾನು ಮಸಣಯ್ಯಂ ಮಂತ್ರಿವಿದ್ಯಾಧರಂ |[3] ಶಿವಪಾದಶೇಖರಂ ದಾನವಿನೋದಂ ಸತ್ಯವಾಕ್ಯನಭಿಮಾನಧನಂ ಭು

83 ವನಹಿತಂ ಕಟಕಕ್ಕೊಪ್ಪುವನಂಣ್ಣನ ಪಟ್ಟವರ್ದ್ಧನಂ ಮಸಣಯ್ಯಂ ||[4] ವೃ || ಬಸವಂ ದಂಡೇಶಚೂಡಾಮಣಿ ರಣಧವಳಂ ಗಂಡಭೇರುಂಡನೊಲ್ದತ್ತಿರ್ಥಿಸಿಬಂದಂಗಾಂತುನಿಂದಂಗಗಿದು ಶರಣಮೆಂದಂಗೆ ಭೂಚಕ್ರ

---

1 ಮಹಾಸ್ರಗ್ಧರೆ

2 ಚಂಪಕಮಾಲೆ

3 ಮತ್ತೇಭವಿಕ್ರೀಡಿತ

4 ಕಂದ

84 ದೊಳ್ ಮಾನಸರೂಪಿಂದಿರ್ದ್ದ ಚಿನ್ತಾಮಣಿ ನೃಪಶಚಿವಾಕಾರದಿಂದಿರ್ದ್ದ ಕಳ್ಪಾನ್ತ ಸಮುದ್ಯದ್ವಹ್ನಿನಣ್ಪಿಂದ
ಮಿತನಣುಗನಾಗಿರ್ದ್ದ ವಿದ್ಯಾಧರೇಂದ್ರಂ ||[1] ಕಳದೊಳ್ ಕಟ್ಟಂಕದೊಳ್ ಬಂದಡಸಿದಬಯಲೊ

85 ಳ್ ಭಾಸೆಯೊಳ್ ಕೋಟಿಯೊಳ್ ದೋರ್ವ್ವಳದೊಳ್ ತಳ್ತಾಂಕೆಯೊಳ್ ಕೈದೆಗೆಯದ ಭರದೊಳ್ ಪೂಣ್ಕೆಯೊಳ್
ನಚ್ಚಿನಾಳ್ ಮಾರ್ಬ್ಬಳದೊಳ್ ಕಣ್ಣುಳ್ಳುವಾಳ್ ಹೊಯ್ಸಳನಕಟಕದೊಳ್ತಾನೆ ಸಂದಗ್ಗದಾ

86 ಳಗ್ಗಳದಾಳ್ ಬಲ್ಲಾಳದೇವಂಗಮಿತನ ಬಸವದಂಡನಾಥತ್ರಿಣೇತ್ರಂ||[2] ಎಸೆವೀ ಬಲ್ಲಾಳ ದೇವಂಗಮಿತನೆ ಬಲದೋಳ್
ತೋಳ್ಗೆಸಂದಿರ್ದ್ದ ಕೂರ್ಬ್ಬಾಳ್ ಬಸವಂ ಬಲ್ಲಾಳನಾಸ್ಥಾಯಿಕೆಗಮಿತನೆ ದೀಪಂ ಪ್ರದೀಪ

87 ಕ್ಕೆ ತೇಜಂ ಬಸವಂ ಬಲ್ಲಾಳರಾಜ್ಯಕ್ಕಮಿತನೆ ಮುಖಮಂ ತಾಮುಖಶ್ರೀಗೆ ನೇತ್ರಂ ಬಸವಂ ಮುಖ್ಯಪ್ರಭಾವಕ್ಕರಿವರೆನೆ
ಮತ್ತಾರುವಂ ಪೇಳಲುಂಟೇ ||[2] ಕ || ಮೂವರು ಮನುಜಾತರಿನ್ನೈರಾವತದಿಂದ

88 ಮೃತಕಿರಣನಿಂ ಕೌಸ್ತುಭದಿಂ ದೇಪಾವನಿಜಮೆಸೆವವ್ರೋಲೀ ವಸುಧಾತಳದೊಳೆಸೆವನಮಿತಚಮೂಪಂ || ಸ್ವಸ್ತಿ
ಸಮಸ್ತಭುವನರಾಜರಾಜಿವಿರಾಜಿತಚೂಡಾಮಣಿಮರೀ

89 ಚಿಮಂಜರೀರಂಜಿತಚಳನನಳಿನಶ್ರೀಮದಮೃತೇಶ್ವರದೇವಲಬ್ಧವರಪ್ರಸಾದನುಂ | ಅನವರತ ಪಾತ್ರದಾನವಿನೋದನುಂ |
ಯಾದವಾನ್ವಯಗಗನಗಭಸ್ತಿಮಾಳಿನಿಶ್ಶಂಕಪ್ರತಾಪಚಕ್ರವ

90 ರ್ತ್ತಿ ವೀರಬಲ್ಲಾಳದೇವರಾಜ್ಯಾಭ್ಯುದಯಕರಣಕಾರಣನುಂ | ವಿಜಯಗೋಮಿನೀಮಂಗಳಾಯತನರತ್ನತೋರಣನುಂ |
ಚತುರ್ತ್ಥಕುಳಕುಮುದಿನೀಶರಚ್ಚಂದ್ರಚಂದ್ರಿಕೋಪಮಾನಮಾ

91 ನಾನೂನ ಸರ್ವ್ವಲಕ್ಷಣಸಂಪೂರ್ಣ್ಣಸುಗ್ಗಾಂಬಿಕಾಗರ್ಬ್ಭದುಗ್ಧಾರ್ಣ್ಣವಪಾರಿಜಾತನುಂ ಸೌಂದರ್ಯ್ಯವಿಜಿತ
ಚೇತೋಜಾತನುಂ ವೀರವೈರಿಧಾರಿಣೀನಾಥಹಸ್ತ್ಯಶ್ವರಥಪದಾತಿಸಂಘಾತನಿರ್ಗ್ಘಾತಪ

92 ಟಿಷ್ಟ ನಿಷ್ಠುರ ಕೃಪಾಣಕುಳಿಶದಂಡಮಂಡಿತಭುಜಾಮಂಡಳನುಂ ವೀರಲಕ್ಷ್ಮೀ ಪ್ರಸಾದನೋಪಚಿತಕರ್ಣ್ಣಕುಂಡಳನುಂ |
ಸನ್ಧಿವಿಗ್ರಹಯಾನಾಸನಸಂಶ್ರೆಯದ್ವೈದೀಭಾವಭಾವಿತಪ್ರಯೋ

93 ಗನಿಪುಣಮಂತ್ರಿಮಂಡಳನಿತ್ಯಾವಳೋಕರತ್ನದರ್ಪ್ಪಣನುಂ | ಪರಿವಾರನಿವಹಚಿತ್ತಸಂತರ್ಪ್ಪಣನುಂ |
ವಿದ್ಯುದ್ದಂಡನರ್ತ್ತನಾನುಸಾರಿಸ್ವೈರಚಾರಶೂಕಳತುರಂಗಮಾರೂಢಪ್ರೌಢದಂಡಾಂ

94 ಕಶಬ್ದಶಿಕ್ಷೋಪಜಾತರೇಪರೇಖಾವಿಳಾಸವತ್ಸರಾಜನುಂ| ಶಸ್ತ್ರಶ್ರಮಾಚಾರ್ಯ್ಯಭಾರದ್ವಾಜನುಂ| ಕಲಿದೇವ ಮಸಣಿದೇವ
ಬಸವರಾಜ ಪ್ರಸಿದ್ಧ ಸೋದರ ತ್ರಿತಯಶಾಖಾನುಬಂಧಬಂ

95 ಧುಜನಫಳಪ್ರದಾಯಕಕಳ್ಪವೃಕ್ಷನುಂ | ಶರಣಾಗತಮಂಡಳಿಕರಕ್ಷಾದಕ್ಷನುಂ | ಸತ್ಯತ್ಯಾಗವಿಕ್ರಮಕ್ರೀಡಾನವೀನ
ರಾಧೇಯನುಂ | ಶೌಚಗಾಂಗೇಯನುಂ | ಸ್ವಾಮಿದ್ರೋಹಮೋಹಾನ್ಧ

96 ಕಾರಸಂಹಾರಸಹಶ್ರಕಿರಣನುಂ | ಯಾದವಕಟಕರತ್ನಾಭರಣನುಂ | ದಂಡನಾಥಮೌಳಿಮಾಣಿಕ್ಯನುಂ | ದಂಡನಾಥ
ಕುಸುಮಕೋದಂಡನುಂ | ದಂಡನಾಥಗಂಡಮಾರ್ತ್ತಂಡನುಂ | ದಂಡನಾಥದಿಕ್ಕುಂಜ

97 ರನು(ಂ)ಮುದ್ದಂಡದಂಡನಾಥಕೋಳಾಹಳನುಂ | ವಾಚಾಳದಂಡನಾಥಹಾಳಾಹಳನುಂ | ಚೋಳದಂಡನಾಥ ಕಾಳರಾಕ್ಷಸನುಂ |
ಮಾಳವದಂಡನಾಥಮದನತ್ರಿಣೇತ್ರನುಂ | ಗೂರ್ಜ್ಜರದಂಡನಾಥಗಿರಿವ

98 ಜ್ರದಂಡನುಂ | ರಾಯದಂಡನಾಥಗಂಡಭೇರುಂಡನುಂ | ಚೋಳಬಾಳಿಕಾಹಂಸತಿಳಕನುಂ | ಕೇರಳನಿತಂಬಿನೀ ತಾರಹಾರನುಂ |
ಮಾಳವಮಾನಿನೀಮನೋರಂಜನನುಂ | ಕರ್ಣ್ಣಾಟಕಾಮಿನೀಕರ್ಣ್ಣಾಭರಣನುಂ | ಪ್ರಧಾನ

99 ಜಂಗಮಕೇದಾರನುಂ | ಸಕಳಜನಾಧಾರನುಮೆನಿಸಿಮಹಿಮೆಗಾಸ್ಪದಮಾದಮೃತೇಶ್ವರದಂಡನಾಯಕಂ
ಕಗ್ಗಿಯವೃತ್ತಿಯೊಳಗಣಮೃತಸಮುದ್ರದೊಳ್ ಶ್ರೀಮದಮೃತೇಶ್ವರದೇವರಂ

100 ಸುಪ್ರತಿಷ್ಠಿತಂ ಮಾಡಿ ಸಕವರ್ಷಂ ೧೧೧೯ ನೆಯ ಪಿಂಗಳಸಂವತ್ಸರದ ಪುಷ್ಯ ಬಹುಳ ಸಪ್ತಮಿ
ಸೋಮವಾರದುತ್ತರಾಯಣಸಂಕ್ರಮಣದಂದು ಶ್ರೀಮದುವಜ್ರೇಶ್ವರದೇವರ ಸಂನಿಧಾನದೊಳ್

1 ಮಹಾಸ್ರಗ್ಧರೆ

2 ಮಹಾಸ್ರಗ್ಧರೆ; ಅಶುದ್ಧ

101 ಪಾದಪೂಜಾಪುರಸ್ಸರಂ ಶ್ರೀಮತ್ಪ್ರತಾಪಚಕ್ರವರ್ತ್ತಿ ವೀರಬಲ್ಲಾಳದೇವರ ಶ್ರೀಹಸ್ತದಿಂ ಧಾರಾಪೂರ್ವ್ವಕಂ ಪಡೆದು ತಂನ ಮಾಡಿಸಿದಮೃತೇಶ್ವರ ದೇವರ ಅಂಗಭೋಗರಂಗಭೋಗ್ಯಕ್ಕಂ | ಚೈತ್ರ

102 ಪವಿತ್ರಾರೋಪಣಕ್ಕಂ | ದೇವರ ಪೂಜಾರಿಗಪರಿಚಾರಕರ್ಗ್ಗಂ ಬ್ರಾಹ್ಮಣರಾಹಾರದಾನಕ್ಕಂ | ಖಂಡಸ್ಫುಟಿತಜೀರ್ಣ್ಣೋದ್ಧಾರಕ್ಕವಾಗಿ ಆಸಂದಿನಾಡೊಳಗಣಗ್ರಹಾರ ಹುಣಿಸೆಯಕಟ್ಟವಂ ಸ

103 ರ್ವ್ವನಮಸ್ಯವಾಗಿ ಕೊಟ್ಟ ದತ್ತಿ | ಹಾದಿಯಕೆಱೆಯ ನಾಗಗೌಡನುಂ ಕಗ್ಗಿಯಭಾಗೆಯ ಪ್ರಭುಗಾವುಂಡುಗಳ್ ಪ್ರಮುಖವಾಗಿ ಆ ಭಾಗೆಯ ಗಂಗವುರವಂ ಸರ್ವ್ವನಮಸ್ಯವಾಗಿ ಬಿಟ್ಟ

104 ದತ್ತಿ | ಕೂಂಟನಮಡುವಿನ ಕೇತಗವುಡನೆಱಕಗೌಡ ಮಾಳಗೌಡನಿನ್ತೀ ಮೂವರುಂ ತಂಮ ಹೊಲದೊಳಗೆ ಅಮೃತೇಶ್ವರ ದೇವರ್ಗ್ಗೆ ದೇವತಾಲಯಕ್ಕಂ ಪುರಮಂ ಕಟ್ಟಲಾಚಂದ್ರತಾರಂಬರಂ

105 ಸಲ್ವನ್ತಾಗಿ ಕೊಟ್ಟ ಭೂಮಿ | ಮತ್ತವಾ ಹೊಲದೊಳಗೆ ಪುರದಿಂ ಮೂಡಲುಂ ತೆಂಕಲುಂ ಗಂಗನ ಗಳೆ ಗದ್ದೆ ಮತ್ತರೊಂದು | ತೋಟ ಮತ್ತರೊಂದು | ಅನ್ತು ಮತ್ತರೆರಡಂ ಕೊಟ್ಟ ದತ್ತಿ | ಹಾದಿಯಕೆ

106 ಱೆಯ ಪ್ರಭು ನಾಗಗವುಂಡಂ ತಂನ ಹೊಲದೊಳಗೆ ಪುರದ ಪಡುವಣ ಎಱೆಯಮನ ಮಸಣಗವುಡನಕೆಱೆಯ ಕೆಳಗೆ ಗದ್ದೆ ಮತ್ತರೊಂದಂ ಕೊಟ್ಟ ದತ್ತಿ | ಅಮೃತಸಮುದ್ರದ ಮೂಡಣ

107 ಕೋಡಿಯಲ್ಲಿ ನಾಗಗೌಡ ಮುಖ್ಯವಾಗಿ ಬಾಚಲೇಶ್ವರದ ಪಟ್ಟಣಸ್ವಾಮಿ ಮಹದೇವಸೆಟ್ಟಿಯರು ತಂಮ ಗೌಡಿಕೆಯ ನೇಱಿಲಕೆಱೆಯ ಚಿಣ್ಣವಗಟ್ಟದ ಕೆಱೆಯ ಕೆಳಗೆ ಗಂಗನ

108 ಗಳೆಯಲು ಗದ್ದೆ ಮತ್ತರೊಂದಂ ಕೊಟ್ಟ ದತ್ತಿ | ಅಮೃತಸಮುದ್ರದ ಪಡುವಣ ಕೋಡಿಯಲ್ಲಿ || ಕ || ಅಯ್ಯಣವಾಡಿಯೊಳಂ ಕಡುರಯ್ಯಂ ಜಗದೊಳಗೆ ಕೊಟ್ಟು ಕುಣಿವಿಗ್ರಾಮ

109 ಕ್ಕಯ್ಯನೆನಸಿರ್ದ್ದನಾ ರುದ್ರಯ್ಯಂಗಂ ಮಂತ್ರಿಜಕ್ಕನಾತ್ಮಜನಾದಂ || ವ || ಆ ಹೆಗ್ಗಡೆ ಜಕ್ಕಯ್ಯನಮೃತೇಶ್ವರ ದಂಡನಾಯಕರ ಬೆಸದಿಂದಮೃತೇಶ್ವರದೇವರ ಭವನಮ(ಂ)ನತಿಚಲ್ವನಾಗಿಮಾ

110 ಡಿಸಿದಡೆಯಮೃತೇಶ್ವರದಂಡನಾಯಕರು ಮೆಚ್ಚಿ ಕೊಟ್ಟ ಗದ್ದೆ ಗಂಗನ ಗಳೆಯಲು ಕಂಬ ಹಂನೆರಡು | ಮತ್ತಂ ದವಸಿಗರ್ಗ್ಗೆ ಗಂಗನಗಳೆಯಲು ಕಂಬವಱುವತ್ತು | ಮತ್ತಂ ದೇವರ ನೈವೇ

111 ದ್ಯಕ್ಕೆ ಗದ್ದೆ ಗಂಗನ ಗಳೆಯಲು ಕಂಬ ನಾಲ್ವತ್ತು ಅಂತು ಮತ್ತರೊಂದು ಕಂಬ ಹಂನೆರಡುಂ ಕೊಟ್ಟ ದತ್ತಿ | ಅಮೃತೇಶ್ವರದೇವರ್ಗ್ಗೆ ದೋರಸಮುದ್ರದ ಭತ್ತವಸರದಂಗಡಿಯ ಸಮಸ್ತನಕ

112 ರಂಗಳುಂ ಮುಖ್ಯವಾಗಿ ಗುಂಮೇಶ್ವರದಂಗಡಿ | ಬೊಮ್ಮಲದೇವಿಯರಂಗಡಿ | ಕೇತಲದೇವಿಯರಂಗಡಿ | ಚಂದ್ರಮೌಳಿಯಣ್ಣನಂಗಡಿ | ಬೊಪ್ಪದೇವನ ಬಸದಿಯಂಗಡಿ | ಬೆಲುಹೂರಂಗಡಿ | ಪ್ರತ್ಯೇಕ

113 ಪ್ರತ್ಯೇಕ ಸೆಡೆ ಅರವನವೊಂದು | ಚೈತ್ರಕ್ಕೆ ಹಾಗವೊಂದು | ಪವಿತ್ರಕ್ಕೆ ಹಾಗವೊಂದು || ವೃ || ಪ್ರಿಯದಿಂದಿಂತಿದನೆಯ್ದೆ ಕಾವಮನುಜಂಗಾಯುಂ ಜಯಶ್ರೀಯುಮಕ್ಕೆ ಯಿ

114 ದಂ ಕಾಯದೆ ಕಾಯ್ವ ಪಾಪಿಗೆ ಕುರುಕ್ಷೇತ್ರಂಗಳೊಳು ವಾರಣಾಶಿಯೊಳೆಕ್ಕೋಟಿ ಮುನೀಂದ್ರರಂ ಕವಿಲೆಯಂ ವೇದಾಢ್ಯರಂ ಕೊಂನ್ದುದೊಂದಯಶಂಪೊರ್ದ್ದುಗುವೆನ್ದು ಸಾಱಿದಪುವೀ ಶೈ

115 ಳಾಕ್ಷರಂ ಧಾತ್ರಿಯೊಳು |[1] ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ ವಸುಂಧರಾ | ಷಷ್ಟಿರ್ವ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ |[2] ಉದ್ದಂಡಕವಿಭಾಳನೇತ್ರಂ ಸುಕವಿ

116 ಜನಮಿತ್ರಂ ಜನ್ನಯ್ಯನ ಕವಿತೆ | ಸರಸ್ವತೀಕರ್ಣ್ನಪತ್ರಂ ಕಮನೀಯಗಾತ್ರಂ ಲೊಕ್ಕಿಗುಂಡಿಯ ಮಹದೇವಣ್ಣಂಗಳ ಶಿಷ್ಯ ನಾಕಂಣ್ಣನ ಬರಪ | ಬಿರುದ ಕಂಡರಣೆಕಾಱ

---

1 ಮತ್ತೇಭವಿಕ್ರೀಡಿತ

2 ಶ್ಲೋಕ

23

117 ಕೋಳಾಹಳಂ ರೂವಾರಿ ಮಲ್ಲೋಜನ ಕಂಡರಣೆ || ಮಂಗಳಮಹಾ ಶ್ರೀ ಶ್ರೀ || ಕಗ್ಗಿಯವೃತ್ತಿಯ ಸಾವಂತ ಮಾಳಗೌಡನಿಂ ಕಿಱಿಯ ಬಂಮಗಾವುಂಡಂಗೆ | ವೃ |

118 ನಿರುಪಮದಾನಿ ಬಂಮುಗವುಡಂಗವನಂಗನೆ ಮಾಕಗೌಡಿಗೀ ಹರಿಹರನಬ್ಜಶಂಭವರು ಪುಟ್ಟುವ ಮಾರ್ಗದೆ ಪುಟ್ಟಿದಸ್ಸುರ್ತವ್ವರನಿಧಿ ಕೇತಗೌಡನೆಱೆಯಂಗವುಂಡನು ಮಾ

119 ಳಗೌಡರಾದರದೊಳೆ ಕೊಟ್ಟರೊಪ್ಪುವಮೃತೇಶಪುರಕ್ಕತಿಸೇವ್ಯಭೂಮಿಯಂ ||[1] ಬ್ರಹ್ಮಪುರಿಯ ಬ್ರಾಹ್ಮಣರ್ಗ್ಗೆ ಗಂಗವುರದ ಕೆಱೆಯ ಕೆಳಗೆ ಗದ್ದೆ| ಗಣಪತಿಭಟ್ಟ ಉಪೇಂ

120 ದ್ರಭಟ್ಟ ಕುದುರೆಯಪ್ಪಯ್ಯ || ಬಮ್ಮಯ್ಯ | ಕೂಚಯ್ಯ | ನಾಗದೇವಭಟ್ಟ | ದಾಡಿಗೆಯಪ್ಪಯ್ಯ | ನಾರಣ ನಾಗದೇವ | ಹರಿಹರಪೆದ್ದಿ | ಯಿನ್ತಿನಿಬರ್ಗ್ಗಂ ಮತ್ತರೊಂದು ಕಂಬ ಹತ್ತು | ಅಮೃತಸಮುದ್ರದ ಅ

121 ಪ್ಪಯ್ಯಂಗೆ ಕಂಬ ಹತ್ತು

13 (VI ತ 46)

ಅಮೃತಾಪುರ

ಅದೇ ಅಮೃತೇಶ್ವರ ದೇವಾಲಯದ ಒಳ ತೊಟ್ಟಿಯಲ್ಲಿ ನೆಟ್ಟಿರುವ ಒಂದನೆಯ ವೀರಗಲ್ಲು

This hero-stone refers to the death of Amiteya-daṇṇāyaka, son of Basaveya-daṇṇāyaka of *khāṇa* while fighting with the Gujjaras at Yiṭṭageyakēri in Dōrasamudra.

It is in characters of c. 13th century. It is dated the year Bhāva, Āśvayuja śu.10, Monday corresponding to Monday, 15th September, 1214 A.D.

1 ಭಾವಸಂವತ್ಸರದ ಆಶ್ವಯುಜ ಸು ೧೦ ಸೋ | ದೋರಸಮುದ್ರದಬೀಡಿನೊ

2 ಳಗೆ ಯಿಟ್ಟಗೆಯಕೇರಿಯಲ್ಲಿ ಖಾಣದ ಬಸವೆಯದಂಣ್ಣಾ

3 ಯಕರ ಮಗ ಅಮಿತೆಯದಂಣ್ಣಾಯಕನು ಗುಜ್ಜರರ

4 ಕೂಡೆ ಹೊಯ್ದಾಡಿ ದೇವಲೋಕಕೆ ಸಂದನು ||

14 (VI ತ 47)

ಅಮೃತಾಪುರ

ಅಮೃತೇಶ್ವರ ದೇವಾಲಯದ ಅದೇ ಒಳ ತೊಟ್ಟಿಯಲ್ಲಿರುವ ಎರಡನೆಯ ವೀರಗಲ್ಲು

This damaged hero-stone record states that Mēḷayya, son of Kāmeya-daṇṇāyaka, having fought with Gujjaras at Yiṭṭageyakēri in Dōrasamudra, died.

It is dated the year Bhāva, Āśvayuja śu.10, Monday corresponding to Monday, 15th September, 1214 A.D.

1 ಭಾವಸಂವತ್ಸರದ ಆಶ್ವಜ ಸು ೧೦ ಸೋ | ದೋರಸಮು

2 ದ್ರದಬೀಡಿನೊಳಗೆ ಯಿಟ್ಟಗೆಯಕೇರಿಯಲಿ ಮೂ

3 ವರಗಂಡ ಕಾಮೆಯದಂಣ್ಣಾಯಕರ ಮಗ ಮೇ

4 ಳಯ್ಯನು ಗುಜ್ಜರರ ಕೂಡಿ ಹೊಯ್ದಾಡುವಲ್ಲಿ

1 ಚಂಪಕಮಾಲೆ

15 (VI ತ 48)

ಅಮೃತಾಪುರ

ಅದೇ ಅಮೃತೇಶ್ವರ ದೇವಾಲಯದ ಪ್ರಾಕಾರದಲ್ಲಿ ದಕ್ಷಿಣ ಕಡೆ ನೆಟ್ಟಿರುವ ವೀರಗಲ್ಲು

The hero-stone record is dated Śaka 1210, Sarvvajitu, Śrāvaṇa śu 11, Monday corresponding to Monday, 21st July, 1287 A.D. The Śaka year was current.

It states that while the hunters harried the cattle *(Jīva-dhana)* of Amitapura (Amṛitāpura), Nāgaṇṇa, son of Kubina Sūra-gavuḍa fought against them and died.

1 ಸ್ವಸ್ತಿ ಶ್ರೀ ಜಯಾಭ್ಯುದಯಶ್ಚ ಶಕವರ್ಷ ೧೨೧೦
2 ನೆಯ ಸರ್ವ್ವಜಿತು ಸಂವತ್ಸರದ ಶ್ರಾ
3 ವಣ ಶು ೧೧ ಸೋ ದಂದು ಕುಬಿನ ಸೂರಗ
4 ವುಡನ ಮಗ ನಾಗಂಣನು ಅಮಿತಪುರದ ಜೀ
5 ವಧನವ ಬೇಡರು ಹಿಡಿದಡೆ ಹುಯ್ಯಲ ಹರಿ
6 ದು ಕಾದಿ ಸುರಲೋಕ ಪ್ರಾಪ್ತನಾದ

16 (VI ತ 49)

ಅಮೃತಾಪುರ

ಅದೇ ಪ್ರಾಕಾರದಲ್ಲಿ ಪೂರ್ವಕಡೆ ನೆಟ್ಟಿರುವ ವೀರಗಲ್ಲು

This slightly damaged hero-stone is identical in date with No. 15 above. But here the hero was Nāga . . . . son of Māra, the washerman. It further registers a grant of paddy (land) to the hero by the *prabhus.*

1 ಸ್ವಸ್ತಿ ಶ್ರೀ ಜಯಾಭ್ಯುದಯಶ್ಚ ಶಕವರುಷ ೧೨೧೦ ನೆಯ
2 ಸರ್ವ್ವಜಿತುಸಂವತ್ಸರದ ಶ್ರಾವಣ ಶು ೧೧ ಸೋ ದಂದು ಅಮಿತಪು
3 ರದ ಜೀವಧನವನು ಬೇಡರು ಹಿಡಿದಡೆ ಆ ವೂರ ಅಸಗರ ಮಾರನ
4 ಮಗ ನಾಗ . . . . ಹುಯ್ಯಲ ಹರಿದು ಕಾದಿ ಸುರಲೋಕ ಪ್ರಾಪ್ತನಾ
5 ದ || ಅದಕೆ ಯಜಮಾನ . ಪ್ರಭುಗಳ ಮೆಚ್ಚಿ ವೊಕ್ಕಲ ಮ . . . ಳಮಾ
6 ನ್ಯ ಆ ವೊಕ್ಕುಳ ಕೊಳಗ(ವ)ವತ್ತವ ಕೊಟ್ಟರು . ಮಗ ಕೂಚನು . . .

17

ಇಟ್ಟಿಗೆ

ತರೀಕೆರೆಯ ಶಂಭುಲಿಂಗಪ್ಪನವರ ವಶದಲ್ಲಿದ್ದ ಹಿತ್ತಾಳೆ ಶಾಸನ

This spurious brass-plate record is dated Śaka 1116, Ānanda, Vaiśāka ba.7, Saturday, Uttarāyaṇa-saṅkramaṇa. These details correspond to Saturday, 14th May, 1194 A.D.

It seems to record a grant of certain villages for the services of the god Raṅganātha by king Vīraballāḷa on the request of Siṅgeyapa. The language and the script of the record prove its spuriousness.

ಒಂದನೆಯ ಹಲಗೆಯ ಮುಂಭಾಗ

1 ನಮಸ್ತುಂಗಶಿರಶ್ಚುಂಬಿಚೆ
2 ದ್ರಚಮರವೇ ತಳಕ್ಯನಗರ
3 ರಬಮುಲಸ್ತಂಬಯ ಶಂ
4 ಬವೇ[1] ಓಂ ನಮಃ ಶಿವಯ ನಮಸ್ತು ಪಂಚಲೋಹಶಂ
5 ತಿ[2]

ಎರಡನೆಯ ಹಲಗೆಯ ಮುಂಭಾಗ

6 ಸ್ವಸ್ತಿ ಸಮದಿಗತಪಂಚಮಹಾಸಭ ಮಹಾಮಂಡಳೇಸ್ತತನುಂ ದ್ವರವತಿಪು
7 ರವರದೀಸ್ವರನುಂ ಯೆದುಕುಳಕಳಸಕಳಿತನ್ರಿಪದರ್ಮಹರ್ಮ್ಯಮುಳಸ್ತಂಭ
8 ನುಂ ಪ್ರತಿಹತಪ್ರತಪವಿದಿತವಿಜೆಯಾಲಂಬನುಂ ವಸಂತಿಕದೇವಿಲಬ್ಯವರಪಸ
9 ನುಂ ಶ್ರೀಮಂನ್ಮುಕುಂದಪದರವಿಂದವಂದನವಿನೋದನುಂ ಲಕ್ಷುಂಣ್ಯಲಕ್ಷ್ಮಿತ
10 ವಕ್ಷಪ್ರದೇಶನುಂ ಸ್ವೇತತಪತ್ರಸೀತಳಕ್ರಿತಬುತಳನುಂ ವೀರಲಕ್ಷ್ಮೀವಿಹಾ
11 ಸಪಸಸ್ಮುನಂದನಬಿರಾಮನುಂ ಸಂಗೀತಪ್ರಸಂಗಬಂಗಿಸಂಗತತುರ
12 ಬರತನುಂ ತಾಕವಿದ್ಯದಿಶ್ವರದವಿಚರನಿರತನುಂ ಸಹಿವಿದ್ಯಸ
13 ಮಗಲಕ್ಷಣಸಸಿಕ್ಷನುಂ ವದವಿದ್ಯಪರೀಕ್ಷದಕ್ಷನುಂ ಸ(ರಿ)ಕ
14 ಳಪುರಣಪುಂಜಿತರತ್ನಪ್ರಕಸನುಂ ಸದ್ಯೋಗೇಳಲಂಬ್ಬನನುಂಪ
15 ದ್ಮಸದ್ಮತಪರುತವದಪ(ರ್ವೈ)ತದೀಶ್ವರನುಂ ರಜಪಮಜಬಸ್ವರ
16 ನು ಯದ್ಧರ್ಯಸತಪರಿಪೂರ್ಣಪದ್ಮಬಣನುಂ ಮಲಪರೊಳುಗಂಡ
17 ನುಂ ಮಲೆರಾಜರಾಜನುಂ ಕವೇರಿತೀರ್ತಪ್ರ[ವಿ]ಹಾರ

ಮೂರನೆಯ ಹಲಗೆಯ ಮುಂಭಾಗ

18 ವದಮರಳನುಂ ಸುಬಟ್ಟಸಮಕೇಳೀತೋಳನುಂ ಲೋಕೊಪ
19 ಕರಪರಾಯಣನುಂ ವಿಜೆಯನಾರಯಣನುಂ ಆಳಿಮುಂನಿರಿ
20 ವನುಂ ಶ[ರ್ಕ]ಂಮೆರವನುಂಮೆನಿಸಿದ ಶ್ರೀ ವಿಷ್ಣುವದನದೇವರ ಪದ
21 ರಧನೆಯಿಂದ ಗಂಣ್ಯಕರುಂಣ್ಯ ಭುಮಿಯೆನಿಸಿ ಶ್ರೀಲೋಕತಿಭು
22 ವನಮಲ ವೀರಗಂಗ ವಿಷ್ಣುವದನದೇವರು ಬಲಾಳರಯರು
23 ಮೂಡಲು ನಂಗಲಿಯಘಟ್ಟ ತೆಯಕಲು ಕೊಂಗಚರಮನಮಲೆ ಪ
24 ಡುವಲು ಬಾರಕನುರು ಘಟ್ಟವಾದಿಯಾಗಿ ಬಡಗಲು ಸಯಿಮಲೆ
25 ಹೆದೊರೆಯಿಂದೊಳಗಣಭುಮಿಯಂ ಭುಜಬಳವಪಂದಿಂ ಪ್ರ
26 ತಿಪಳಿಸುತಂ ಶ್ರೀಮದ್ರಜದನಿ ದೋರಸಮುದ್ರ ನೆಲವೀಡಿನೊಳು ಸುಕಸಂ
27 ಕತವಿನೋದದಿಂ ಪಟ್ಟಮಹದೇವಿಸಹಿತಂ ರಾಜಂ ಗೈಯುತಮಿರಲು
28 ಶಖವರ್ಷ ೧೧೧೬ ರೆನೆಯ ಆನಂದನಮಸಂವತ್ಸರದ ವೈಶ ಬ
29 ಹುಳ ೭ ವಡವರ ಉತರಾಯಣಶಂಖರಮಣದಲು ಶ್ರೀ ||

---

1 ಶ್ಲೋಕ

2 ಪಂಚಲೋಹಶಂತಿ ಎನ್ನುವುದು ಸಣ್ಣ ಅಕ್ಷರಗಳಲ್ಲಿದೆ

ಒಂದನೆಯ ಹಲಗೆಯ ಹಿಂಭಾಗ

30 ಶ್ರೀಮತು ಹಂಡೆವಜೀರ ಮುಂಮಡಿ ದಳವ಼ಣ ರಂಗರಾಹು

31 ತಗೆ ಬರಸಿಕೊಟ್ಟ ನಿರ[1]ಪ ಆದಗಿ ಪಡುವಲು ಬರಕನೂ

32 ರಮೇಲೆ ಲಡಯ ಮಡಿ ಜಯಿಸಿ ನಂಮ ನಿಸನಿ

33 ಣಾಕಿ ಮರ್ಬಲ ತೆಗದುಕೊಂಡುಬಂದು ಸಲ

ಎರಡನೆಯ ಹಲಗೆಯ ಹಿಂಭಾಗ

34 ಮು ಮಡಿಸಿ ಸಿಂಗೆಯಪ ಕಾಣ ನಿಂನ ಪರಾಕ್ರಮ

35 ಕೆ ಮೆ[ಚಿ]ಯಿಲೆ ಬಂದದ ಕೇಳಿಕೋ ಯಂದಲಿ ನೀ

36 ನು ಕೇಳಿಕೊಂಡದು ನನಗೆ ಮ್ರರಕು ಸ್ವಸ್ತಿ ಬುಮಿ ದೇವರು

37 ಮುಂತಗಿ ನೇಮಕ ಮಡಿಸಿಕೊಡಬೇಕೆಂಬದಗಿ

38 ಆರ್ರಿಕೆ ಮಡಿಕೊಂಡ ಕರಣ ಆಸಂದಿನಾಡೊಳಗಣ

39 ಕನಗುಡದ ಪಡುವಣ ಬುಮಿಗೆ ಗ್ರಮ ಪ್ರತಿಷ್ಟೈ

40 ಮಡ್ಸಿ ಗುಡದ ಮೇಲೆ ರಂಗನಾತದೇವರ ನೆಲಸಿ

41 ಯಿ ದೇವರ್ರಿಗೆ ದೀಪರದನೆಗೆ ಬೋಗೋತರ ಕೊಟ್ಟ

42 ಸ್ವೇತಭತ್ರಿ ಹಗಲದೀವಿಟಿಗಿ ಮಕರತೋರಣ ಕೊ

ಮೂರನೆಯ ಹಲಗೆಯ ಹಿಂಭಾಗ

43 ಟ್ಟ ಬುಮಿ ಗ್ರಾಮ ದಕ್ಷಣ ಸ್ತಳ ೧ ಯಿ ಪುರ್ವ ಬುತ

44 ನಸ್ತಳ ೧ ಹೆಗಡಿಹಳಿ ಆರೆ ದಕ್ಷಣ ಸ್ತಳ ೧ ಹುಲಿಹಳಿ

45 ಬಡಗಣ ಆರೆ ಉತ್ರಸ್ತಳ ೧ ನಿನಗೆ ಬಿಟ್ಟುಕೊಟ್ಟ

46 ಬುಮಿ ಗ್ರಮ ಬಳಸು ಸ್ತಳ ೨ ಸಹಾ ಮನ್ಯಬಿಟ್ಟು ಕೊಟ್ಟುಯಿ

47 ದೆ ನಿನಗೆ ಕೊಬಿರ್ರಿ ಪುಗಂಟ್ಟೆ ಸಹಾಣಿ ವಂಟ್ಟೆ ಜೆಂಗುನೆಲ

48 ಹುಲುಚೌರ್ರಿ ನಿಂನ ಗ್ರಾಮ ಬುಮಿ ನಿಂನ ಮತ ದೇವರು ನಿಂನ

49 ಬಿರ್ರಿದು ಯಿದರ ನೆಲ ಆನುಬವಿಸಿಕೊಂಡು ನಿಂಮ ಪುತ್ರ

50 ಪಉತ್ರ ಪರಂಪರ್ಯವಗಿ ನಡಸಿಕೊಂಡು ಬರುವದು

51 ಯಿ ದರ್ಮಕೆ ಆವನಾನೊಬನು ಶೆಲಕೆ ಒದರೆ ಕಾಸಿಯಲಿ

52 ಗೋಉಹತ್ಯ ಬ್ರಂಹ್ಮತ್ಯ ಶ್ರೀಹತ್ಯ ಸಿಸುಹತ್ಯ ಮಾಡಿ ಪಪ

53 ಕೆ ಹೋಹರು ದಾನಮನ್ಯ ಬಂಲಳದೇವರು ಶ್ರೀ

18 (VI.ತ 15)

ಇಂದಾವಾರ

ಗದ್ದಿಗೆ ಮಠದ ಬಳಿ ನೆಟ್ಟಿರುವ ಕಲ್ಲು

This damaged record is dated Śaka 1107, Krōdhi, Vaiśākha śu. 11, Monday corresponding to Monday, 23rd April, 1184 A.D. The Śaka year was current.

---

1 'ರ' ಅಕ್ಷರವನ್ನು ಮೇಲೆ ಚಿಕ್ಕದಾಗಿ ಬರೆದು ಸೇರಿಸಿದೆ

It states that Vīraballāḷa the Hoysaḷa king, made some gifts in order to obtain *śānti* for Chikka Bammaladēvi. He also released the lands of Attiganahāḷu *alias* Yōgēśvarapura which was occupied by the people of Kāntavūr.

1-2 (ಸವೆದಿದೆ)
3 ಯದುವಂಶಕಲ್ಪಭೂಜಾತದ ಶಾಖೆಯೆನಿಪ್ಪ್ ಹೊಯ್ಸಳಾಂನ್ವಯದೊಳು ಭೂವಿದಿ
4 ತರ್ಪ್ಪಲರಾಗವರಿಂತುದಯಂಗೆಯ್ದಮ್ ಪ್ರತಾಪಿ ವಿನಯಾದಿತ್ಯಂ ||[1] ವಿನೆ
5 ಯಾದಿತ್ಯನ್ರಿಪಾಳನ ತನೂಜನೆಱೆಯಂಗದೇವನಾತನ ಪುತ್ರಂ ಮನುಮಾ
6 ಗ್ಗಾ್ಚರಣಂ ವಿಷ್ಣುನ್ರಿಪಾಳಂ ಸಕಳಧರ್ಮ್ಮಾಧರ್ಮ್ಮಾತನೂಜಂ ||[1] ವ್ರಿ || ಪೆರ್ದ್ದೊಱೆ ಸೇತು ಪಶ್ಚಿಮ ಪ
7 ಯೋನಿಧಿ ಮೂಡ[ಣ] ಪಯೋ[ನಿ]ಧಿ ಮೇರೆಯಾಗಿರ್ದ್ದ ಧರಿತ್ರಿಯಂ ತನಗೆ ತೋಳ್ವಲದಿಂ ನೆಱೆಮಾ
8 ಡಿ ದುಷ್ಟರಂ ಮರ್ದ್ದಿಸಿ ತುಷ್ಟಿಯಂ ಪಡೆದು ಶಿಶ್ಟಜನಪ್ರಕರಕ್ಕೆ ರಾಮನಂತಿರ್ದ್ದನಪಾರಪೌರು
9 ಷಮೆ ತಂನೊಳೊಡಂಬಡೆ ವಿಷ್ಣುವರ್ದ್ಧನಂ ||[2] ತತ್ತನೆಯಂ ನರಸಿಂಹನ್ರಿಪೋತ್ತಮನವನ
10 ತವಿರೋಧಿಭೂಪಾಳಕುಳೈಕೋತ್ತಂಸ(ಸ)ಚಳನನಳಿನಂ ಚಿತ್ತೋದ್ಭವಮೂರ್ತ್ತಿ ವಿಶದಕೀರ್ತ್ತಿಪತಾಕಂ ||[1]
11 ನಿಟ್ಟಯ್ದಿತನಂ ತನಗಳವಟ್ಟೇಚಲದೇವಿ ನ್ರಿಪನರಸಿಂಹಂಗಾದಳು ಪಟ್ಟಮಹಾದೇವಿಯೆನಲು
12 ನೆಟ್ಟನೆ ತತ್ಕಾಂತೆಯಂತು ನೋಂತರುಮೊಳರೇ ||[1] ಆ ದಂಪತಿಗೆ ತನೂಭವನಾದಂ ರಿಪುನ್ರಿ
13 ಪತಿಮಕುಟಘಟ್ಟಿತಪದಲಕ್ಷ್ಮೀದಯಿತನಧಿಕಬಳನುದಿತೋದಿತಪುಂಣ್ಯಪ್ರಭಾವನಿಧಿ
14 ಬಲ್ಲಾಳಂ ||[1] ಸ್ವಸ್ತಿ ಸಮಧಿಗತಪಂಚಮಹಾಶಬ್ದ ಮಹಾಮಂಡಳೇಶ್ವರಂ | ದ್ವಾರಾವತೀ
15 ಪುರವರಾಧೀಶ್ವರ ಪ್ರಸಿದ್ಧಶುದ್ಧೋಭಯಪಕ್ಷ ಯಾದವಾಂನ್ವಯೋದನ್ವತ್ಸಂ
16 ಗತವಿನೂತಪಾರಿಜಾತ | ಸಕಳಕಳಾಕಮಳಜಾತ | ಶಶಕಪುರವಾಸಂತಿಕಾ
17 ದೇವೀಲಬ್ಧವರಪ್ರಸಾದ | ದುಷ್ಟವಿದ್ವಿಷ್ಟಮರಾಳಮೇಘನಾದ | ಅಭ್ರಂಕಶೋತ್ತುಂಗನಿಜವಿಜ
18 ಯಸಾದ್ದೂ್ಲಧ್ವಜಷಕಿತಚಳಚಂದ್ರಬಿಂಬಾಂತಗ್ಗ್ತಕುರಂಗಚತುರವಿದ್ಧ
19 ಜ್ಜನಪ್ರಸಂಗ ನಾಮಾದಿ ಪ್ರಶಸ್ತಿಸಹಿತಂ ತಳಕಾಡುಕೊಂಗುನಂಗಲಿಗಂಗವಾಡಿ
20 ನೊಣಂಬವಾಡಿಮಾಸವಾಡಿಹುಲಿಗೆಱೆಹಲಸಿಗೆಬನವಸೆಹಾನುಂಗಲ್ಲುಚ್ಚಂಗಿ
21 ಗೊಂಡ ಭುಜಬಳವೀರಗಂಗನಸಹಾಯಶೂರ ನಿಸ್ಸಂಕಪ್ರತಾಪ ಹೊಯ್ಸಳ ವೀರಬ
22 ಲ್ಲಾಳದೇವರು ಶ್ರೀಮದ್ರಾಜಧಾನಿ ದೋರಸಮುದ್ರದ ನೆಲೆವೀಡಿನೊಳು ಸುಕಸಂಕ್ಕಥಾವಿನೋದದಿಂ
23 ರಾಜ್ಯಂ ಗೆಯ್ಯುತ್ತಮಿರ್ಪ್ಪಲ್ಲಿ ಸಕವರ್ಷ ೧೧೦೭ನೆಯ ಕ್ರೋಧಿಸಂವತ್ಸರದ ವೈಶಾಖ ಸುದ್ಧ
24 ಏಕಾದಸಿ ಸೋಮವಾರದಂದು ಶ್ರೀ ವೀರಬಲ್ಲಾಳದೇವರು ಚಿಕ್ಕಬಮ್ಮಲದೇವಿಯರಿಗೆ ಶಾ
25 ನ್ತಿಯರ್ತ್ಥವಾಗಿ ಮಹಾದಾನಂಗಳಂ ಮಾಡುತ ಶ್ರೀ ಯೋಗೇಶ್ವರಪುರವಾದ ಅತ್ತಿಗನಹಾ
26 ಳಭೂಮಿಯ ಕಾಂತವೂರದವರು ಆಕ್ರಮಿಸಿಕೊಂಡ ಆ ಭೂಮಿಯ ಶ್ರೀ
27 ಯೋಗೇಶ್ವರದೇವರೂರು ಅತ್ತಿಗಹಾಳಿಂಗೆ ಪ್ರವಿಷ್ಟವಾಗಿ ಧಾರಾಪೂರ್ವ್ವಕಂ ಮಾಡಿ ಆ
28 ಚಂದ್ರಾರ್ಕ್ಕತಾರಂಬರಂ ಸಲುವನ್ತಾಗಿ ಬಿಟ್ಟ ದತ್ತಿ ಇನ್ತೀ ಧರ್ಮ್ಮಮಂ ಪ್ರತಿಪಾ
29 ಲಿಸಿದವರು ಗಂಗೆ ವಾರಣಾಸಿ ಕುರುಕ್ಷೇತ್ರಂ ಮೊದಲಾದ ಸಕಲಪುಂಣ್ಯತೀರ್ತ್ಥಂಗಳಲ್ಲಿ
30 ಯಶ್ವಮೇಧಾದಿಸಕಲಯಜ್ಞಂಗಳುಮಂ ಮಾಡಿ ಹಿರಂಣ್ಯಗರ್ಬ್ಭತುಳಾಪುರ್ಷಾದಿ

1 ಕಂದ
2 ಉತ್ಪಲಮಾಲೆ

31 ಮಹಾವ್ರತಂಗಳುಮಂ ಮಾಡಿ ಸಕಲವೇದಶಾಸ್ತ್ರಪಾರಂಗತರಪ್ಪ ಶತಸಹ
32 ಸ್ರಬ್ರಾಹ್ಮಣರ್ಗ್ಗೆ ಸಹಸ್ರ ಕವಿಲೆಯುಮನಳಂಕಾರಸಹಿತವಾಗಿ ದಕ್ಷಿಣಾ ಪೂ
33 ರ್ವ್ವಕವಾಗಿ ದಾನ ಮಾಡಿದ ಫಲಮ ಪಡೆವರು || ಈ ಧರ್ಮ್ಮನಾವನೊಬ್ಬನಳಿದವ
34 ರು ಆ ಪುಣ್ಯಕ್ಷೇತ್ರಂಗಳಲ್ಲಿಯನಿತು ಬ್ರಾಹ್ಮಣರುಮನನಿತು ಕವಿಲೆಯುಮಂ ಕೊಂ
35 ದಂತಹ ಮಹಾಪಾತಕ ಫಲಮನೆಯ್ದಿ ಕುಂಭೀಪಾಕ . . . . ರಮ
36 . . . . . . ಪ್ಪರು ಬ್ರಹ್ಮಕಲ್ಪಪರಿಯಂತಂಬರಂ || ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ
37 ವಸುಂಧರಾಂ | ಷಷ್ಟಿರ್ವರ್ಷಸ್ರಹಸ್ರಾಣಿವಿಷ್ಟಾಯಾಂ ಜಾಯತೇ ಕ್ರಿಮಿ |[1] ನ ವಿಷಂ
38 ವಿಷಮಿತ್ಯಾಹುರ್ದ್ದೇವಸ್ವಂ ವಿಷಮುಚ್ಯತೇ | ವಿಷಮೇಕಾಕಿನಂ ಹಂತಿ ದೇವಸ್ವಂ ಪುತ್ರಪೌತ್ರ
39 ಕಂ |[1] ಏಕೈವ ಪುತ್ರಿಕಾ . . . .
40 ದಾಭೂತಸಂಪ್ಲ . . . .

19 (VI ತ 40)

ಉಡುವ

ಗ್ರಾಮದ ಪೂರ್ವಕ್ಕೆ ಹೊಲವೊಂದರಲ್ಲಿ ಬಿದ್ದಿರುವ ಕಲ್ಲು

This damaged epigraph seems to state that the land belonged to god. Exact import is not clear.

1 . . . ವಾಲ
2 . ವಾಪೂರ್ವ್ವ ಇ
3 ಸಾನ್ಯದ ೬ ಕ
4 ಲಿನಗಡಿ
5 ದೇವರ ಭುಮಿ

20 (VI ತ 11)

ಎಲೂಗೆರೆ

ಊರಮುಂದಿರುವ ಶಿವಾಲಯದ ಬಳಿ ನೆಟ್ಟಿರುವ ಕಲ್ಲು

The top portion of the record is worn out. It refers to the rule of Hoysaḷa Vishṇuvarddhana and is dated Śaka 1070, Vibhava, Uttarāyaṇa-saṅkrānti, lunar eclipse, Monday. The given date details correspond to Saturday, 25th December, 1148 A.D. However, there was no eclipse on that day.

It registers a grant of lands to god Gaṅgēśvara of Elavaṅgere and to god Rāmanātha of Kuruva for the worship, perpetual lamp, offerings etc., by Gaṅga-gauṇḍa and Malle-gauṇḍa. The grant was made over to Chandraśēkhara-paṇḍita.

1-10 (ಸವೆದಿದೆ)
11 ಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ತ್ರಿಭುವನಮಲ್ಲ
12 ವೀರಗಂಗ ವಿಷ್ಣುವರ್ದ್ಧನಹೊಯ್ಸಳದೇವರು ಕೊಂಗುನಂಗಲಿತಳಕಾ

1 ಶ್ಲೋಕ

13 ಡುಬನವಸೆ . . . . . . ಹಾನುಂಗಲ್ಲುಪಲಸಿಗೆಬೆಳ್ವಲನೊಣಂಬವಾಡಿ ಮೇರೆ
14 ಯಾಗಿ ದೋರಸಮುದ್ರದನೆಲವೀಡಿನೊಳು ದುಷ್ಟನಿಗ್ರಹ ಶಿಷ್ಟಪ್ರತಿಪಾಲನಂಗೆ
15 ಯ್ದು ಸುಖಸಂಕಥಾವಿನೋದದಿಂ ರಾಜ್ಯಮುತ್ತರೋತ್ತರಾಭಿವೃದ್ಧಿಪ್ರ
16 ವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂ ಸಲುತ್ತಮಿರೆ
17 ಶ್ರೀಮನ್ಮಹಾಮಂಡಳೇಶ್ವರ ಸಾಮಂತ ಮನ್ನೆಯ ಪೆರ್ಗ್ಗಡೆ ||
18 ಕುಲಜನೆ ಯಾದವಾನ್ವಯಶಿರೋಮಣಿ ಬೇಳ್ಪುವ . . . . . | ತಿಳಕಿಯೆನಿ
19 ಪ್ಪ ಲಕ್ಷ್ಮಿಯ ಮಗಂ ಕಡುಚೆಲ್ವನೆ ಲೋಕವೆಲ್ಲಮಂ . . ನಿಲೆಕಾವಿಷ್ನು . .
20 ಪುತ್ರಕಯೆಂದೊಡೆ ಬಣ್ಣಿಸಲ್ಕೆ ಭೂವಳಯದೊಳಾರ್ಪ್ಪರಾರು ನರಸಿಂಹ
21 ನ್ರಿಪಾಳಕನಂ ನಿರಂತರಂ ||[1] ಸ್ವಸ್ತಿ ತತ್ಪಾದಪದ್ಮೋಪಜೀವಿ ಗೋತ್ರಪವಿತ್ರಪರಾಂಗ
22 ನಾಪುತ್ರರುಂ ಮಹೇಸ್ವರಗಣಾವತಾರರುಂ ಗಂಗೇಶ್ವರದೇವರ ಪಾದಾ
23 ರಾಧಕರುಂ ಗಂಗಗೌಂಡ ಮಲ್ಲೆಗೌಂಡಗಳು ಶಕವರುಷದ ೧೦೭೦ ನೆ
24 ಯ ವಿಭವಸಂವತ್ಸರದ ಉತ್ತರಾಯಣಸಂಕ್ರಾಂತಿ ವೆತೀಪಾತ ಸೋಮ
25 ಗ್ರಹಣ ಸೋಮವಾರದಂದು ಎಲವಂಗೆಜೆಯ ಶ್ರೀಗಂಗೇಸ್ವರದೇವರಂಗಭೋ
26 ಗಕಂ ತ್ರಿಕಾಲಪೂಜೆ ಸೊಡರು ನೈವೇದ್ಯ ಗುರುಪರ್ವ್ವನಿಮಿತ್ತವಾಗಿ ಕೊಟ್ಟ ದತ್ತಿ ಹಿರಿ
27 ಯಕೆಜೆಯ ಕೆಳಗೆ ಗಂಗನ ಗಳೆಯಲು ೨೦ ರ ಕಂಭ ಗದ್ದೆ ದೇವಾಲ್ಯದಿಂ ಇಶಾನ್ಯ
28 ವಲಿ ಬೆದ್ದಲು ಗಂಗನ ಗಳೆಯಲು ಹಳ್ಳ ಮೂಡಣ ಬದುಹು ಮೇರೆಯಾಗಿ ಗುಡಿಯ ಬಳಿಯ
29 ಕೆಜೆಯ ಕೆಳಗೆ ಹತ್ತು ಕಂಭ ಅಂತು ಮತ್ತರೊಂದು ೧ || ಗಾಣದಲು ಸೌಣ್ಡೆಗೆಣ್ಣೆ ಇಂತಿನಿತು
30 ಮಂ ಕುಱುವದ ರಾಮನಾಥದೇವರಂಗಭೋಗಕ್ಕಂ ತ್ರಿಕಾಲಪೂಜೆ ನಿವೇದ್ಯಕಂಮೆಂದು ಬಿಟ್ಟ ದ
31 ತ್ತಿ ದೇವಾಲ್ಯದಿಂ ಆಗ್ನೇಯದಲ್ಲಿ ಕಿಱುಗೆಜೆಯ ಕೆಳಗೆ ಗದ್ದೆ ಹಂನೆರಡು ಕಂಭ ದೇವಾಲ್ಯದಿಂ ಮೂ
32 ಡಲು ಗಂಗೇಶ್ವರಬಯಲ ಬೆದ್ದಲೆ ಅಱುವತ್ತು ಕಂಭ ಇಂತಿನಿತುಮಂ ಜಪಸಮಾಧಿಶೀಲಗು
33 ಣಸಂಪಂನರಪ್ಪ ಚಂದ್ರಶೇಖರಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ
34 ಬಿಟ್ಟ ದತ್ತಿ ಇನ್ತಿನಿತು ಧರ್ಮ್ಮವಂ ಪ್ರತಿಪಾಳಿಸಿದ . . . . ಅನಂತಪುಣ್ಯಮದಕ್ಕುಂ ಯಿದಂ ಕಾಯ
35 ದೆ ಕಾಯ್ವ ಪಾಪಿಗೆ ಕುರುಕ್ಷೇತ್ರ ವಾಣರಾಸಿಯೊಳೆಕ್ಕೋಟಿ ಮುನೀಂದ್ರರಂ ಕವಿಲೆ
36 ಯಂ ವೇದಾಢ್ಯರಂ ಕೊಂದುದೊಂದಯಸಂ ಸಾರ್ಗುಮೆಂದು ಸಾಱುದಪುದೀ ಶೈಳಾಕ್ಷರಂ ಧಾತ್ರಿಯೊ
37 ಳು ||[2] ಸ್ವದತ್ತಂ ಪರದತ್ತಂ ಯೋ ಹರೇತಿ ವಸುಂಧರಾಂ | ಷಷ್ಟಿರ್ವ್ವರಿಶಸಹಸ್ರಾಣಿಮಿಷ್ಟಾ
38 ಯಾಂ ಜಾಯತೇ ಕ್ರಿಮಿಃ |[3] ಗೌ. . . ಡುಗಳ ಉಂಬಳಿ ಗದ್ದೆ . . . .

21 (VI ತ 26)

ಕಲ್ಲತ್ತಿಪುರ

ವೀರಭದ್ರ ದೇವಾಲಯದ ಬಳಿ ಇರುವ ಬಂಡೆಯ ಮೇಲೆ

This undated label record in Tamil and Grantha characters refers to the service made by Kumārasvāmi.

1 ಚಂಪಕಮಾಲೆ
2 ಮತ್ತೇಭವಿಕ್ರೀಡಿತ; ಅಪೂರ್ಣ
3 ಶ್ಲೋಕ

1 ಕುಮಾರಶುವಮಿ 2 ಶೇವ್ವೈ

TRANSLITERATION

1 Kumāraśuvami 2 śēvai

22 (VI ತ 27)
ಕಲ್ಲತ್ತಿಪುರ
ಅದೇ ಸ್ಥಳದಲ್ಲಿರುವ ಬಂಡೆಯ ಮೇಲೆ

This record states that Chandanna and Basavā, a goldsmith, bathed here.

1 ಶ್ರೀ ಚನ್ದಂನಂ ಅಕ್ಕಸಾಲಿ 2 ಬಸವಾ ಮಿನ್ದಂ |

23 (VI ತ 28)
ಕಲ್ಲತ್ತಿಪುರ
ಅದೇ ಸ್ಥಳದಲ್ಲಿರುವ ಬಂಡೆಯ ಮೇಲೆ

This record also states that Dhanurama came here and took his bath. It is in characters of c. 9-10th century.

ಧನುರಮನ್ ವನ್ದು ಮಿನ್ದನ್

24 (VI ತ 29)
ಕಲ್ಲತ್ತಿಪುರ
ಅದೇ ಸ್ಥಳದಲ್ಲಿರುವ ಬಂಡೆಯ ಮೇಲೆ

It states that Santara took bath here.

1 ಶ್ರೀ ಸನ್ತರ ಶ್ರೀಪನಿಧಿ 2 ಮಿನ್ದು ಪೋದಮ್

25 (VI ತ 30)
ಕಲ್ಲತ್ತಿಪುರ
ಅದೇ ಸ್ಥಳದಲ್ಲಿರುವ ಬಂಡೆಯ ಮೇಲೆ

It reads *śri Piḷukkugaḷāditya*

ಶ್ರೀ ಪಿಳುಕ್ಕುಗಳಾದಿತ್ಯ

26 (VI ತ 31)
ಕಲ್ಲತ್ತಿಪುರ
ಅದೇ ಸ್ಥಳದಲ್ಲಿರುವ ಬಂಡೆಯ ಮೇಲೆ

It refers to the temple of Vijjadhara and to the priest (*prōittar = purōhitar*?) of Duggamara.

1 ಶ್ರೀ ದುಗ್ಗಮರರ 2 ಪ್ರೋಇತ್ತರ್ ವಿಜ್ಜಧರರ 3 ದೇಗುಲ

27 (VI ತ 32)

ಕಲ್ಲತ್ತಿಪುರ

ಅದೇ ಸ್ಥಳದಲ್ಲಿರುವ ಬಂಡೆಯ ಮೇಲೆ

This is identical with No. 26 above. It contains the same matter.

1 ಶ್ರೀ ದುಗ್ಗಮರರಸ 2 . . . ಣೆ ವಿಜಥ 3 ರನ ದೇಗುಲು

28 (VI ತ 33)

ಕಲ್ಲತ್ತಿಪುರ

ಅದೇ ಸ್ಥಳದಲ್ಲಿರುವ ಬಂಡೆಯ ಮೇಲೆ

It seems to state that it is written by Parada and refers to Bāyara Kittaṇṇa.

1 ಶ್ರೀ ಬಾಯರ ಕಿತ್ತಣ್ಣನ್ 2 ಪರದರ ಎಬ್ಬು

29 (VI ತ 34)

ಕಲ್ಲತ್ತಿಪುರ

ಅದೇ ಸ್ಥಳದಲ್ಲಿರುವ ಬಂಡೆಯ ಮೇಲೆ

This damaged record in Nāgari characters seems to refer to the construction of a temple by a person (whose name is lost). It refers to Vikramāditya.

1 ಶ್ರೀಮಾನು ವಿಕ್ರಮದಿಥ್ಯದೇವ
2 ರಜರುದ್ರ . . ವಯಹಳರ
3 ಣಥಿರುಯ . . ಸೇವೆದೇ
4 ಗುಲಂ

30 (VI ತ 35)

ಕಲ್ಲತ್ತಿಪುರ

ಅದೇ ಸ್ಥಳದಲ್ಲಿರುವ ಬಂಡೆಯ ಮೇಲೆ

It states that Nijarudrapāda caused to be made a *liṅga.*

1 ಶ್ರೀ ನಿಜರುದ್ರಪಾದನ್ 2 ಲಿಂಗಂ ಮಾಡಿದೊನ್

31 (VI ತ 75)

ಕಾರಣಗಟ್ಟ

ಮಲ್ಲೇಶ್ವರ ದೇವಾಲಯದ ಬಳಿ ನೆಟ್ಟಿರುವ ಕಲ್ಲು

This highly damaged inscription belongs to the reign-period of a Hoysaḷa king whose name is lost. It is dated Śaka 1101, Vikāri, Sunday, Uttarāyaṇa-saṅkrānti, the month and the *tithi* being lost. The extant details of date correspond to 25th December, 1179 A.D. However, the weekday was Tuesday.

It seems to record a grant of certain lands to a *paṇḍita* (name lost) by *sāmanta* Mikaṇṇa of Kāḷeyanakaṭṭa. The exact import of the record is not clear.

1 ಶ್ರೀ ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭಮೂಲಸ್ತಂಭಾಯ

2 ಶಂಭವೇ [1] . . . .

3 . . . .

4 . . . . ಗುಣದಿಂ . . . . ವಿನೆಯಾದಿತ್ಯಂ || ಆ ವಿನೆ . . . .

5 . . . . ವರಪದ . . . . ನೆಱೆಯಂಗನ್ರಿಪಂ

6 . . . . ಮನೋನಯ . . . .

7-10 (ಸವೆದಿದೆ)

11 . . . . ವಾಸಂತಿಕಾದೇವೀಲಬ್ಧವರಪ್ರಸಾದ . . . . . .

12-28 (ಸವೆದಿದೆ)

29 . . . . ಗೋವಿಯಣ್ಣಂಗ . . . . ಗಾದರ್ತ್ತನಯರು . .

30 . . . . ಗಣ್ಣನುಂ . . . . ವಿಬೋಧನಿಧಿಯ . . . . ಘನವಾದ್ಯ

31 . . . . ನೈಶ್ವರ್ಯ್ಯ ಸಂಕುಳರು || ಪರ . . . . . ಪಲಬರ್ಗ್ಗಮಿಂದು . . . . . . ಗಳು . . . .

32 . . . . ಗೈಉತ್ತಮಿರೆ || ಶ್ವಸ್ತಿ ಶ್ರೀ ಗೋವಿಂದೇಸ್ವರದೇವ ಶ್ರೀ ಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇ

33 ಸ್ವರಂ ಪರಮಭಟ್ಟಾರಕಂ ಶ್ರೀ ಹೊಯ್ಸಳರಾಜ್ಯಮಾಚಂದ್ರಾರ್ಕ್ಕತಾರಂಬರಂ ಸಲುತ್ತಿಮಿರೆ || ಶಕನ್ರಿಪಕಾಳಾತೀತ ಸಂವತ್ಸರದ ೧೧೦೧

34 ವಿಕಾರಿಸಂವತ್ಸರದ . . . . ಯಾದಿವಾರಯುತ್ತರಾಯಣಶಂಕ್ರಾಂತಿಯಂದು ಕಾಳೆಯನಕಟ್ಟದ ಶಾಮಂತ ಮಿಕಣ್ಣ ಗೋವಿಂದೇಶ್ವರ

35 . . . . ಯಗದ್ದೆ . . . . ಬಿಟ್ಟ ಗದ್ದೆ ಅರವತ್ತರು | ನೆಲ್ಲಿಹೊಲ ಬೆದ್ದ

